# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

### ಆಗಸ್ಟ್ ೪ನೇ ವಾರ

25-08-2025 TO 30-08-2025




'ಹಸಿರು ಉಕ್ಕು' ಪರಿಸರಕ್ಕೆ ಉಸಿರು

ಒಳ ಮೀಸಲು ಜಾರಿ: ಆದೇಶ

ಡೈಮಂಡ್ ಲೀಗ್: ನೀರಜ್ಗೆ ಬೆಳ್ಳಿ


ಆನ್ಲೈನ್ ಜೂಜಾಟ

## ❖ ಕ್ರಿಕೆಟ್: ಪೂಜಾರ ನಿವೃತ್ತಿ

**ಸಂದರ್ಭ:** ಟೆಸ್ಟ್ ಕ್ರಿಕೆಟ್ ಪರಿಣತ ಬ್ಯಾಟರ್ ಚೇತೇಶ್ವರ್ ಪೂಜಾರ ಅವರು ಎಲ್ಲ ಮಾದರಿಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು.

| ಮಾದರಿ | ಪಂದ್ಯ | ರನ್ | ಶ್ರೇಷ್ಠ | ಸರಾಸರಿ | ಶತಕ | ಅರ್ಧಶತಕ |
|---|---|---|---|---|---|---|
| ಟೆಸ್ಟ್ | 103 | 7,195 | 206 | 44.37 | 19 | 35 |
| ಏಕದಿನ | 5 | 51 | 27 | 10.2 | 0 | 0 |
| ಪ್ರಥಮದರ್ಜೆ | 278 | 21,301 | 352 | 51.82 | 66 | 81 |
| ಐಪಿಎಲ್ | 30 | 390 | 51 | 20.53 | 0 | 1 |

- ‘ಭಾರತ ತಂಡದ ಪೋಷಾಕು ಧರಿಸಿ, ರಾಷ್ಟ್ರಗೀತೆ ಹಾಡುತ್ತಾ, ಪ್ರತಿಬಾರಿ ಮೈದಾನಕ್ಕೆ ಕಾಲಿಟ್ಟಾಗಲೂ ನನ್ನಲ್ಲಿನ ಶ್ರೇಷ್ಠ ಸಾಮರ್ಥ್ಯ ಪಣಕ್ಕೊಡ್ಡಿದ್ದನ್ನು ಪದಗಳಲ್ಲಿ ಕಟ್ಟಿಕೊಡುವುದು ಅಸಾಧ್ಯ. ಎಲ್ಲ ಒಳ್ಳೆಯ ಸಂಗತಿಗಳಿಗೂ ಮುಕ್ತಾಯವಿರುತ್ತದೆ ಎಂಬ ಮಾತಿದೆ. ಇದೀಗ ನಾನು ಸರ್ವಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿಯಾಗುತ್ತಿದ್ದೇನೆ. ನಿಮ್ಮೆಲ್ಲರ ಬೆಂಬಲಕ್ಕೆ ಧನ್ಯವಾದಗಳು’ ಎಂದು 37 ವರ್ಷದ ಪೂಜಾರ ‘ಎಕ್ಸ್’ ನಲ್ಲಿ ಬರೆದಿದ್ದಾರೆ.
- ಅವರು 103 ಟೆಸ್ಟ್‌ಗಳಿಂದ 7,195 ರನ್ ಗಳಿಸಿದ್ದಾರೆ. ಅದರಲ್ಲಿ 19 ಶತಕ, 35 ಅರ್ಧಶತಕ ಗಳು ಸೇರಿವೆ. ಐದು ಅಂತರರಾಷ್ಟ್ರೀಯ ಏಕದಿನ ಪಂದ್ಯ ಗಳಿಂದ 51 ರನ್ ಗಳಿಸಿದ್ದಾರೆ. ಒಟ್ಟು 278 ಪ್ರಥಮ ದರ್ಜೆ ಪಂದ್ಯಗಳಿಂದ 21,301 ರನ್ ಗಳಿಸಿದ್ದಾರೆ.



## ❖ ದತ್ತು ಗೊಂದಲ ಬೇಕಿದೆ ಪರಿಹಾರ

**ಭಾರತದಲ್ಲಿ ಮೂರು ಕೋಟಿಗೂ ಅಧಿಕ ಅನಾಥ, ಪರಿತ್ಯಕ್ತ ಮತ್ತು ನಿರ್ಗತಿಕ (ಒಎಎಸ್) ಮಕ್ಕಳಿದ್ದಾರೆ. ಇವರಲ್ಲಿ ಹೆಚ್ಚಿನವರು ಹೆತ್ತವರಿಗೆ ಬೇಡವಾದವರು; ಕೆಲವರು ಹೆತ್ತವರನ್ನು ಕಳೆದುಕೊಂಡವರು. ವಿವಿಧ ಕಾರಣಗಳಿಂದ ಪೋಷಕರು, ಬಂಧುಬಳಗದಿಂದ ದೂರವಾದ ಇಂಥ ಮಕ್ಕಳು ಒಂದೆಡೆ ಇದ್ದರೆ, ಮಕ್ಕಳನ್ನು ದತ್ತು ಸ್ವೀಕಾರ ಮಾಡಲು ಸಿದ್ಧವಾಗಿರುವ ಪೋಷಕರು ಮತ್ತೊಂದೆಡೆ ಇದ್ದಾರೆ. ಆದರೆ, ಭಾರತದಲ್ಲಿ ದತ್ತು ಸ್ವೀಕಾರ ಪ್ರಕ್ರಿಯೆ ಸಂಕೀರ್ಣವಾಗಿದೆ. ಮಗು ದತ್ತು ಪಡೆಯಲು ಮೂರು ವರ್ಷಕ್ಕಿಂತಲೂ ಹೆಚ್ಚು ಕಾಯಬೇಕಿದೆ. ಇದು ಪೋಷಕರು ಕಾನೂನುಬಾಹಿರವಾಗಿ ದತ್ತು ಪಡೆಯಲು ಮತ್ತು ದತ್ತು ನಿರ್ಧಾರದಿಂದ ಹಿಂದೆ ಸರಿಯಲು ಕಾರಣವಾಗುತ್ತಿದೆ**



# ದತ್ತು ಗೊಂದಲ ಬೇಕಿದೆ ಪರಿಹಾರ

ಪ್ರಜಾವಾಣಿ ವಾರ್ತೆ

ಮಕ್ಕಳನ್ನು ದತ್ತು ಪಡೆಯುವ ವಿಚಾರದಲ್ಲಿ ದೇಶದ ಜನರ ಮನೋಭಾವ ಸಾಕಷ್ಟು ಬದಲಾಗಿದೆ. ವೈದ್ಯಕೀಯ ಕಾರಣಗಳಿಂದ ಮಕ್ಕಳಾಗದೇ ಇರುವ ದಂಪತಿ ಅಷ್ಟೇ ಅಲ್ಲದೇ, ಮಕ್ಕಳು ಹೊಂದಲು ಇಚ್ಛಿಸದೇ ಇರುವವರು, ಅನಾಥ ಮಕ್ಕಳಿಗೆ ಬದುಕು ಕೊಡಲು ಬಯಸುವವರು ಹೀಗೆ ಅನೇಕರು ಮಕ್ಕಳನ್ನು ದತ್ತು ಪಡೆಯಲು ಮುಂದಾಗುತ್ತಿದ್ದಾರೆ. ಆದರೆ, ಭಾರತದಲ್ಲಿ ಕೋಟ್ಯಂತರ ಮಕ್ಕಳು ನಿರ್ಗತಿಕರಾಗಿದ್ದರೂ ಕಾನೂನು ಪ್ರಕ್ರಿಯೆಯ ತೊಡಕು ಮತ್ತು ಸಂಕೀರ್ಣತೆಯಿಂದ ಅನೇಕ ಪೋಷಕರಿಗೆ ಮಕ್ಕಳನ್ನು ದತ್ತು ಪಡೆಯಲು ಸಾಧ್ಯವಾಗುತ್ತಿಲ್ಲ.

ತಂದೆ-ತಾಯಿ, ಬಂಧು ಬಳಗದಿಂದ ದೂರವಾದ, ಅನಾಥ, ಪರಿತ್ಯಕ್ತ ಮತ್ತು ನಿರ್ಗತಿಕ ಮಕ್ಕಳನ್ನು ದತ್ತು ನೀಡುವ ಪದ್ಧತಿ ದೇಶದಲ್ಲಿ ಚಾಲ್ತಿಯಲ್ಲಿದೆ. ಒಂದು ವರದಿಯ ಪ್ರಕಾರ, ಭಾರತದಲ್ಲಿ 3 ಕೋಟಿ ಅನಾಥ ಮಕ್ಕಳಿದ್ದಾರೆ. ದೊಡ್ಡ ಸಂಖ್ಯೆಯ ಮಕ್ಕಳು ಬಾಲಮಂದಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಆದರೆ, ದತ್ತು ಸ್ವೀಕಾರಕ್ಕೆ ಅರ್ಹರಾಗಿರುವ ಮಕ್ಕಳ ಸಂಖ್ಯೆ ಮಾತ್ರ ತೀರಾ ಕಡಿಮೆ ಇದೆ. ದತ್ತು ಪಡೆಯಲು ನೋಂದಣಿ ಮಾಡಿಕೊಂಡಿರುವ 13 ಪೋಷಕರಿಗೆ ಒಂದು ಮಗು ಮಾತ್ರ ಲಭ್ಯವಿದೆ. ದತ್ತು ನೋಂದಣಿಗೆ ಕಾಯುತ್ತಿರುವ ಪೋಷಕರಲ್ಲಿ ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ ಮತ್ತು ಪಶ್ಚಿಮ ಬಂಗಾಳದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ವರದಿಯೊಂದು ಹೇಳಿದೆ.

**ದತ್ತು ಸ್ವೀಕಾರದಲ್ಲಿ ಹೆಚ್ಚಳ:** ಭಾರತದಲ್ಲಿ ಕಳೆದೊಂದು ದಶಕದಲ್ಲಿ ದತ್ತು ಸ್ವೀಕಾರದ ಪ್ರಮಾಣ ಹೆಚ್ಚಾಗಿದೆ. 2024-25ರಲ್ಲಿ 4,515 ಮಕ್ಕಳನ್ನು ದತ್ತು (ಸ್ವದೇಶಿ ಮತ್ತು ವಿದೇಶಿ ಪೋಷಕರಿಗೆ) ನೀಡಲಾಗಿದ್ದು, 2015ರ ಬಳಿಕ ಇದು ಅತಿ ದೊಡ್ಡ ಸಂಖ್ಯೆಯಾಗಿದೆ. ಕೋವಿಡ್ ಕಾಲದಲ್ಲಿ ದತ್ತು ಸ್ವೀಕಾರದ ಸಂಖ್ಯೆ ಇಳಿಮುಖವಾಗಿತ್ತು. ಅದರ ನಂತರ ಮತ್ತೆ ಏರುಗತಿಯಲ್ಲಿ ಸಾಗಿದೆ.

ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿರುವ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್‌ಎ) ಮಕ್ಕಳ ದತ್ತು ಸ್ವೀಕಾರ ಪ್ರಕ್ರಿಯೆಯ ನಿರ್ವಹಣೆ ಮಾಡುತ್ತದೆ. ಸಿಎಆರ್‌ಎ ಕೇಂದ್ರೀಕೃತ ಡಿಜಿಟಲ್ ವ್ಯವಸ್ಥೆಯಾಗಿದ್ದು, ಕಾನೂನು ಸಂಬಂಧಿ ಪ್ರಕ್ರಿಯೆ ನಡೆಸಲು ಇದನ್ನು ರೂಪಿಸಲಾಗಿದೆ. ಪ್ರತಿ ರಾಜ್ಯದಲ್ಲಿಯೂ ರಾಜ್ಯ ದತ್ತು ಸಂಪನ್ಮೂಲ ಸಂಸ್ಥೆ (ಎಸ್‌ಎಆರ್‌ಎ) ಇದೆ. ಇವುಗಳ ಮೂಲಕವೇ ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ಪ್ರತಿ ಪ್ರಕ್ರಿಯೆಯೂ ನಡೆಯುತ್ತದೆ. ಮಗು ದತ್ತು ಪಡೆಯಲು ಬಯಸುವ ಪೋಷಕರು ಸಿಎಆರ್‌ಎ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಯಾವುದೇ ಅನಾಥ, ಪರಿತ್ಯಕ್ತ ಮತ್ತು ನಿರ್ಗತಿಕ ಮಗು ದತ್ತು ನೀಡಲು ಅರ್ಹ ಎಂದು ಕಾನೂನು ಅನ್ವಯ ಘೋಷಣೆಯಾಗಬೇಕು. ಹೀಗೆ ಕಾನೂನಿನ ಸಮ್ಮತಿ ಪಡೆದ ಮಕ್ಕಳ ಸಂಖ್ಯೆ ತೀರಾ ಕಡಿಮೆ ಇದೆ. ಅದಕ್ಕೆ ಹಲವು ಕಾರಣಗಳು.

**ಸಂಕೀರ್ಣ, ದೀರ್ಘ ಪ್ರಕ್ರಿಯೆ:** ಒಂದು ಮಗು ದತ್ತು ಸ್ವೀಕಾರಕ್ಕೆ ಅರ್ಹ ಎಂದು ಪರಿಗಣಿಸಬೇಕಾದರೆ, ಆ ಮಗುವಿಗೆ ಪೋಷಕ/ಪರ್ಯಾಯ ಪೋಷಕ ಇಲ್ಲ ಎನ್ನುವುದು ಮೊದಲು ಸ್ಪಷ್ಟವಾಗಬೇಕು. ಅದನ್ನು ಪತ್ತೆ ಹಚ್ಚುವ ಜವಾಬ್ದಾರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (ಡಿಸಿಪಿಯು) ಮತ್ತು ಮಕ್ಕಳ ಕಲ್ಯಾಣ ಸಮಿತಿಗಳದ್ದು (ಸಿಡಬ್ಲ್ಯುಸಿ). ಪೊಲೀಸ್ ತನಿಖೆ, ಸಾಮಾಜಿಕ ಹಿನ್ನೆಲೆಯ ಪರಿಶೀಲನೆ ಮತ್ತು ಮಾಧ್ಯಮಗಳಲ್ಲಿ ಜಾಹೀರಾತು ನೀಡುವ ಮೂಲಕ ಮಗುವಿನ ಕುಟುಂಬದ, ಪೋಷಕರು, ಸಂಬಂಧಿಗಳ ಹುಡುಕಾಟ ನಡೆಸಲಾಗುತ್ತದೆ. ದತ್ತು ಪ್ರಕ್ರಿಯೆಯಲ್ಲಿ ಈ ಹಂತದಲ್ಲಿಯೇ ಹೆಚ್ಚು ವಿಳಂಬವಾಗುತ್ತಿದೆ ಎನ್ನಲಾಗುತ್ತಿದೆ. ದತ್ತು ಸಂಬಂಧದ ಕಾನೂನು ಮತ್ತು ಆರೋಗ್ಯ ಪರೀಕ್ಷೆಯ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿ (ಡಿಎಂ) ಮತ್ತು ಮುಖ್ಯ ಆರೋಗ್ಯಾಧಿಕಾರಿ (ಸಿಎಂಒ) ನಿರ್ವಹಿಸುತ್ತಾರೆ. ರಾಜ್ಯಗಳ ಮಟ್ಟದಲ್ಲಿ ಇವುಗಳ ನಡುವೆ ಸಮನ್ವಯಕ್ಕಾಗಿ ವಿಶೇಷ ದತ್ತು ಸಂಸ್ಥೆಗಳು (ಎಸ್‌ಎಎ) ಇರುತ್ತವೆ. ಕರ್ನಾಟಕದ 31 ಜಿಲ್ಲೆಗಳಲ್ಲಿ 42 ವಿಶೇಷ ದತ್ತು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರಕ್ರಿಯೆಯಲ್ಲಿ ಹಲವು ಸಮಿತಿ/ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಕರ್ತವ್ಯ ಮತ್ತು ಉತ್ತರಾಧಿಕಾರದ ವಿಚಾರದಲ್ಲಿ ಗೊಂದಲ, ಸಮಸ್ಯೆಗಳಿವೆ. ಕೆಲವು ಜಿಲ್ಲೆಗಳಲ್ಲಿ ವಿಶೇಷ ದತ್ತು ಸಂಸ್ಥೆಗಳು ನಿಷ್ಕ್ರಿಯವಾಗಿರುವುದರಿಂದಲೂ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಮಕ್ಕಳ ರಕ್ಷಣಾ ಕೇಂದ್ರಗಳಲ್ಲಿ (ಸಿಸಿಐ) ಲಕ್ಷಾಂತರ ಮಕ್ಕಳು ಆಶ್ರಯ ಪಡೆದಿದ್ದಾರೆ. ಮಕ್ಕಳನ್ನು ಬೆಳೆಸುವ ಸಾಮರ್ಥ್ಯ ಇಲ್ಲದ ಪೋಷಕರು, ಪೋಷಕರು/ಬಂಧುಗಳು ಇದ್ದೂ ಆರೈಕೆಯ ಸಮಸ್ಯೆ ಇರುವ ಮಕ್ಕಳೂ ಇದರಲ್ಲಿ ಸೇರಿದ್ದಾರೆ. ಇಂಥ ಮಗುವನ್ನು ದತ್ತು ನೀಡಬಹುದೇ ಇಲ್ಲವೇ ಎನ್ನುವುದನ್ನು ಕಂಡುಕೊಳ್ಳುವುದೇ ಸಮಸ್ಯೆಯಾಗಿ ಪರಿಣಮಿಸಿದೆ. ಇದಕ್ಕೆ ಹಲವು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಒಂದು ವೇಳೆ ಪೋಷಕರು ಜೀವಂತವಿದ್ದು, ಮಗುವನ್ನು ತೊರೆದಿದ್ದರೆ, ಮಗುವನ್ನು ಪುನಃ ಸ್ವೀಕರಿಸಲು ಅವರಿಗೆ ಸಮಯ ನೀಡಲಾಗುತ್ತದೆ. ಈ ರೀತಿಯ ತೊಡಕುಗಳಿಂದಾಗಿ ಇಂಥ ಮಕ್ಕಳ ಪೈಕಿ ಪ್ರಸ್ತುತ 2,756 ಮಕ್ಕಳು ಮಾತ್ರ ದತ್ತು ಸ್ವೀಕಾರಕ್ಕೆ ಅರ್ಹರಾಗಿದ್ದಾರೆ.

**ಪಾಲನೆಯಾಗದ ನಿಯಮ:** ಈ ಹಿಂದೆ ನ್ಯಾಯಾಲಯಗಳು ದತ್ತು ಆದೇಶವನ್ನು ನೀಡುತ್ತಿದ್ದವು. ವಿಳಂಬವನ್ನು ತಪ್ಪಿಸುವ ಉದ್ದೇಶದಿಂದ ಆ ಅಧಿಕಾರವನ್ನು ಜಿಲ್ಲಾಧಿಕಾರಿಗೆ ನೀಡಲಾಯಿತು. ಜತೆಗೆ, ದತ್ತು ಸಂಬಂಧ ದಾಖಲಾಗುವ ಪ್ರಕರಣವನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಅಗತ್ಯವಾದ ಕ್ರಮ ಕೈಗೊಳ್ಳಲು ವಿಶೇಷ ವ್ಯವಸ್ಥೆ ರೂಪಿಸಲಾಯಿತು. ಒಂದೊಂದು ಪ್ರಕ್ರಿಯೆಗೆ ಇಂತಿಷ್ಟು ಅವಧಿ ಎಂದು ನಿಗದಿಪಡಿಸಲಾಯಿತು. ಆದರೂ ನಿಯಮಗಳು ಪಾಲನೆಯಾಗುತ್ತಿಲ್ಲ. ಪ್ರಕ್ರಿಯೆಯಲ್ಲಿ ಹಲವು ಸಂಸ್ಥೆಗಳು ಭಾಗಿಯಾಗಿರುವುದರಿಂದ ಯಾವ ಸಂಸ್ಥೆಯನ್ನು ಹೊಣೆ ಮಾಡಬೇಕೆನ್ನುವುದೇ ಗೊಂದಲದ ವಿಚಾರವಾಗಿದೆ.

ದತ್ತು ಸ್ವೀಕಾರಕ್ಕೆ ಹೆಚ್ಚು ಪೋಷಕರು ನೋಂದಣಿ ಮಾಡಿಕೊಳ್ಳುವುದು, ಅವರಿಗೆ ಕಡಿಮೆ ಮಕ್ಕಳು ಲಭ್ಯ ಇರುವುದನ್ನು ಕೇಂದ್ರ ಸರ್ಕಾರದ ಸಂಸದೀಯ ಸಮಿತಿಯು (2022) 'ವೈರುಧ್ಯದ ಪರಿಸ್ಥಿತಿ' ಎಂದು ವಿಶ್ಲೇಷಿಸಿದೆ. ದತ್ತು ವ್ಯವಸ್ಥೆಯಲ್ಲಿನ ಲೋಪಗಳ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಅಸಮಾಧಾನ ವ್ಯಕ್ತಪಡಿಸಿದ್ದು, ಹಲವು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಆಧಾರ: ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, ಪಿಟಿಐ, ರಾಜ್ಯಸಭೆಯ 'ರಿವ್ಯೂ ಆಫ್ ಗಾರ್ಡಿಯನ್‌ಶಿಪ್ ಆ್ಯಂಡ್ ಅಡಾಪ್ಷನ್ ಲಾಸ್' ವರದಿ,

**1,914** (ಆಗಸ್ಟ್ 2025ರ ವರೆಗೆ) 2025-26ರಲ್ಲಿ ದತ್ತು ಸ್ವೀಕಾರವಾದ ಮಕ್ಕಳು


**36,635** ದತ್ತು ಸ್ವೀಕಾರಕ್ಕಾಗಿ ನೋಂದಣಿ ಮಾಡಿಸಿರುವ ಪೋಷಕರು

**2,756** ದತ್ತು ಸ್ವೀಕಾರಕ್ಕೆ ಲಭ್ಯವಿರುವ ಒಟ್ಟು ಮಕ್ಕಳು

**1,810** ದತ್ತು ಸ್ವೀಕಾರಕ್ಕೆ ಲಭ್ಯವಿರುವವರ ಪೈಕಿ ವಿಶೇಷ ಅಗತ್ಯದ ಮಕ್ಕಳು

### ಎರಡು ಕಾಯ್ದೆ, ಎರಡು ವಿಧಾನ

ಬಾಲನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015, ಬಾಲನ್ಯಾಯ (ತಿದ್ದುಪಡಿ) ಕಾಯ್ದೆ (2021) ಮತ್ತು ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ-1956 (ಎಚ್‌ಎಎಂಎ) - ಈ ಕಾಯ್ದೆಗಳಲ್ಲಿ ಮಕ್ಕಳ ದತ್ತು ಸ್ವೀಕಾರಕ್ಕೆ ವಿಭಿನ್ನ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ. ಬಾಲನ್ಯಾಯ ಕಾಯ್ದೆಯ ಅಡಿಯಲ್ಲಿ ಸಿಎಆರ್‌ಎ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ದತ್ತು ಸ್ವೀಕಾರಕ್ಕೆ ಅರ್ಹವಾದ ಮಗುವನ್ನು ನಿಗದಿತ ಪ್ರಕ್ರಿಯೆ ಮೂಲಕ ದತ್ತು ಪಡೆಯಬಹುದು. ಆದರೆ, ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ-1956 (ಎಚ್‌ಎಎಂಎ) ಅಡಿ ಸಿಎಆರ್‌ಎ ಅನ್ನು ಪರಿಗಣಿಸದೆಯೇ ದತ್ತು ಸ್ವೀಕಾರ ಮಾಡಲಾಗುತ್ತಿದೆ. ಈ ಕಾಯ್ದೆಯ ಪ್ರಕಾರ, ದತ್ತು ಸ್ವೀಕಾರ ಎನ್ನುವುದು ವೈಯಕ್ತಿಕ ಕಾರ್ಯವಾಗಿದ್ದು, ಅದಕ್ಕೆ ಸಿಎಆರ್‌ಎನಂಥ ಕೇಂದ್ರೀಕೃತ ಸಂಸ್ಥೆಯ ಅನುಮತಿ ಅಗತ್ಯವಿಲ್ಲ. ಹಿಂದೂ ವಯಸ್ಕನೊಬ್ಬ ಸರಳ ಕಾನೂನು ಪ್ರಕ್ರಿಯೆ ಮೂಲಕ ಮಗುವನ್ನು ದತ್ತು ಪಡೆಯಬಹುದಾಗಿದೆ. ಆದರೆ, ಇವು ಸಿಎಆರ್‌ಎ ಚೌಕಟ್ಟಿನ ಹೊರಗೆ ನಡೆಯುತ್ತಿದ್ದು, ಹಲವು ಲೋಪಗಳಿಂದ ಕೂಡಿವೆ. ಜತೆಗೆ, ದತ್ತಾಂಶ ಸಂಗ್ರಹಣೆಗೂ ಇದರಿಂದ ತೊಡಕುಂಟಾಗುತ್ತಿದೆ ಎನ್ನುವ ಅಭಿಪ್ರಾಯವಿದೆ. ಸಿಎಆರ್‌ಎಯಲ್ಲಿ ನಿರ್ವಹಣೆಯ ಸಮಸ್ಯೆ ಇದ್ದರೆ, ಎಚ್‌ಎಎಂಎ ಅಡಿ ನಡೆಯುತ್ತಿರುವ ದತ್ತು ಸ್ವೀಕಾರದಲ್ಲಿ ನಿಯಂತ್ರಣದ ಕೊರತೆ ಇದೆ ಎನ್ನಲಾಗುತ್ತಿದೆ.




### ಕೇಂದ್ರ ಸರ್ಕಾರದ ಸಂಸದೀಯ ಸಮಿತಿಯ ಶಿಫಾರಸುಗಳು

- ಜಿಲ್ಲಾವಾರು ಸಮೀಕ್ಷೆ ಮೂಲಕ ಅನಾಥ, ನಿರ್ಗತಿಕ ಮತ್ತು ಪರಿತ್ಯಕ್ತ ಮಕ್ಕಳ ನಿಖರ ಸಂಖ್ಯೆ ತಿಳಿಯುವುದು ಮತ್ತು ಅದನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು
- ಬೀದಿಗಳಲ್ಲಿ ಭಿಕ್ಷಾಟನೆ ಮಾಡುತ್ತಿರುವ ಮಕ್ಕಳನ್ನು ಹುಡುಕಿ, ಅವರನ್ನು ದತ್ತು ಸ್ವೀಕಾರಕ್ಕೆ ಅರ್ಹರನ್ನಾಗಿಸುವುದು
- ಎಚ್‌ಎಎಂಎ ಕಾಯ್ದೆ ಅಡಿಯಲ್ಲಿ ದತ್ತು ಪ್ರಕ್ರಿಯೆ ಸರಳವಾಗಿದೆ. ಬಾಲನ್ಯಾಯ ಕಾಯ್ದೆಯು ಪಾರದರ್ಶಕವಾದ, ಉತ್ತರದಾಯಿತ್ವ ಇರುವ ಪ್ರಕ್ರಿಯೆಯಾಗಿದೆ. ಆದರೆ, ಹೆಚ್ಚು ಸಮಯ ಬೇಡುವ ಸಂಕೀರ್ಣ ಪ್ರಕ್ರಿಯೆಯಾಗಿದೆ. ಇವೆರಡರ ಅಂಶಗಳನ್ನು ಸೇರಿಸಿ ಸಮಗ್ರವಾದ ಹೊಸ ಕಾಯ್ದೆ ರೂಪಿಸುವುದು. ಎಚ್‌ಎಎಂಎ ಅಡಿ ದತ್ತು ಸ್ವೀಕಾರ ಮಾಡಿದ ಮಕ್ಕಳ ದತ್ತಾಂಶವನ್ನೂ ಸಿಎಆರ್‌ಎ ಒಳಗೊಳ್ಳಬೇಕು
- ಹೊಸ ಕಾಯ್ದೆಯಿಂದ ಅಕ್ರಮ ಸಂತಾನ ಎನ್ನುವ ಪದವನ್ನು ತೆಗೆದುಹಾಕುವುದು. ಯಾವ ಮಗುವೂ ಅಕ್ರಮ ಅಲ್ಲ. ಮದುವೆ ಮೂಲಕ ಅಥವಾ ಮದುವೆ ಆಗದೆ ಹುಟ್ಟಿದ ಮಕ್ಕಳಿಗೆ ಒಂದೇ ರೀತಿಯ ದತ್ತು ಪ್ರಕ್ರಿಯೆ ಅನುಸರಿಸುವುದು. ಮದುವೆಯಾದ, ಏಕಪೋಷಕ ಪುರುಷ, ಏಕಪೋಷಕ ಮಹಿಳೆಯ ಜತೆಗೆ ಲಿಂಗತ್ವ ಅಲ್ಪಸಂಖ್ಯಾತರಿಗೂ ದತ್ತು ಸ್ವೀಕಾರದ ಅವಕಾಶ ನೀಡಬೇಕು
- 18ನೇ ವರ್ಷದವರೆಗೆ ಮಕ್ಕಳನ್ನು ದತ್ತು ಪಡೆಯಲು ಅವಕಾಶ ಇರಬೇಕು. ದೈಹಿಕವಾಗಿ, ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸದೃಢರಾಗಿರುವ ಪುರುಷರು ಮತ್ತು ಮಹಿಳೆಯರು ತಮ್ಮದೇ ಲಿಂಗದವರನ್ನು ದತ್ತು ಪಡೆಯಲು ಸಾಧ್ಯವಾಗಬೇಕು. ದತ್ತು ಸ್ವೀಕಾರವಾಗುವ ಮಗು ಮತ್ತು ಅದನ್ನು ದತ್ತು ಪಡೆಯುವವರ ನಡುವೆ ಕನಿಷ್ಠ 25 ವರ್ಷಗಳ ಅಂತರವಿರಬೇಕು
- ಮಗುವಿಗೆ, ಅದನ್ನು ದತ್ತು ಸ್ವೀಕರಿಸಿದ ಪೋಷಕರ ಆಸ್ತಿಯಲ್ಲಿ ಪಾಲು ಸಿಗಬೇಕು
- ದತ್ತು ಸ್ವೀಕಾರ ಮಾಡಿದ ನಂತರ ಆ ಮಗುವಿನ ಸ್ಥಿತಿಗತಿಗಳನ್ನು ಅವಲೋಕಿಸುತ್ತಿರಬೇಕು

## ❖ ಇ20 ಪೆಟ್ರೋಲ್: ಇಂಧನ ದಕ್ಷತೆ ಹಾಳು

**ಸಂದರ್ಭ:** ಶೇಕಡ 20ರಷ್ಟು ಎಥೆನಾಲ್ ಮಿಶ್ರಣದ ಪೆಟ್ರೋಲ್ ಬಳಕೆಯು ವಾಹನದ ಇಂಧನ ದಕ್ಷತೆಯನ್ನು ಶೇ 2ರಿಂದ ಶೇ 5ರವರೆಗೆ ಕಡಿಮೆ ಮಾಡಬಹುದು ಎಂದು ಆಟೊಮೊಬೈಲ್ ಉದ್ಯಮದ ಪರಿಣತರು ಹೇಳಿದ್ದಾರೆ.

- ಶೇ 20ರಷ್ಟು ಎಥೆನಾಲ್ ಬೆರೆಸಿರುವ (ಇ20) ಪೆಟ್ರೋಲ್ ಬಳಕೆಯಿಂದ ವಾಹನಗಳ ಮೇಲೆ ಆಗುವ ಪರಿಣಾಮದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಚರ್ಚೆ ಆಗುತ್ತಿದೆ. ಇ20 ಪೆಟ್ರೋಲ್‌ಗೆ ಸರಿಹೊಂದುವ ಎಂಜಿನ್ ಇಲ್ಲದ ಹಳೆಯ ವಾಹನಗಳ ಗ್ಯಾಸ್ಕೆಟ್, ಇಂಧನದ ರಬ್ಬರ್ ಹೋಸ್ ಮತ್ತು

ಪೈಪ್‌ಗಳು ದೀರ್ಘಾವಧಿಯಲ್ಲಿ ಸವೆಯಬಹುದು ಎಂದು ದೇಶದ ಪ್ರಮುಖ ಆಟೊಮೊಬೈಲ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಆಟೊಮೊಟಿವ್ ಎಂಜಿನಿಯರ್‌ಗಳು ಹೇಳಿದ್ದಾರೆ.

- ಈ ಪರಿಣಾಮಗಳು ದೀರ್ಘಾವಧಿಯಲ್ಲಿ ಕಾಣಿಸಿಕೊಳ್ಳುತ್ತವೆಯೇ ವಿನಾ ತಕ್ಷಣಕ್ಕೆ ಅಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. 'ವಾಹನ ಯಾವುದು ಎಂಬುದನ್ನು ಆಧರಿಸಿ ಇಂಧನ ದಕ್ಷತೆಯು (ಮೈಲೇಜ್) ಶೇ 2–5ರವರೆಗೆ ತಗ್ಗಬಹುದು. ಪೆಟ್ರೋಲ್‌ಗೆ ಹೋಲಿಸಿದರೆ ಎಥೆನಾಲ್‌ನ ಶಾಖಾಂಶ ಮೌಲ್ಯವು (ಇಂಧನವನ್ನು ದಹಿಸಿದಾಗ ಸಿಗುವ ಶಾಖದ ಶಕ್ತಿ) ಕಡಿಮೆ ಇರುವುದು ಹೀಗಾಗುವುದಕ್ಕೆ ಕಾರಣ' ಎಂದು ತಜ್ಞರೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ತಿಳಿಸಿದರು.
- 'ಇ20 ಪೆಟ್ರೋಲ್ ಬಳಕೆಯಿಂದಾಗಿ ಇಂಧನ ದಕ್ಷತೆಯು ಬಹಳ ಕಡಿಮೆ ಆಗುತ್ತದೆ ಎಂಬುದು ಸರಿಯಲ್ಲ' ಎಂದು ಕೇಂದ್ರ ಇಂಧನ ಸಚಿವಾಲಯವು ಈಚೆಗೆ ಹೇಳಿತ್ತು. ಆದರೆ ಇಂಧನ ದಕ್ಷತೆಯು ಎಷ್ಟರಮಟ್ಟಿಗೆ ಕಡಿಮೆ ಆಗುತ್ತದೆ ಎಂಬುದನ್ನು ಅದು ಹೇಳಿರಲಿಲ್ಲ.
- 'ಇಂಧನ ದಕ್ಷತೆ ಕಡಿಮೆ ಆಗುವುದಾಗಿದ್ದರೆ, ಅದು ಇ10 (ಶೇ 10ರಷ್ಟು ಎಥೆನಾಲ್ ಮಿಶ್ರಣದ ಪೆಟ್ರೋಲ್ ಬಳಸಲು ರೂಪಿಸಿರುವ ಎಂಜಿನ್) ವಾಹನಗಳಲ್ಲಿ ಬಹಳ ಕಡಿಮೆ. ಕೆಲವು ವಾಹನ ತಯಾರಿಕಾ ಕಂಪನಿಗಳು 2009ರಿಂದ ಇ20 ವಾಹನಗಳನ್ನು ತಯಾರಿಸುತ್ತಿವೆ. ಇಂತಹ ವಾಹನಗಳಲ್ಲಿ ಇಂಧನ ದಕ್ಷತೆಯು ಕಡಿಮೆ ಆಗುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ಸಚಿವಾಲಯವು ಹೇಳಿತ್ತು.
- 'ಇ20 ಎಂಜಿನ್ ಹೊಂದಿರುವ ವಾಹನಗಳು ಹೆಚ್ಚು ಉತ್ತಮವಾದ ವೇಗೋತ್ಕರ್ಷವನ್ನು ನೀಡುತ್ತವೆ. ಇದು ನಗರಗಳಲ್ಲಿ ಚಾಲನೆ ಮಾಡುವಾಗ ಬಹಳ ಮುಖ್ಯವಾಗುತ್ತದೆ' ಎಂದು ಕೂಡ ಸಚಿವಾಲಯವು ವಿವರಿಸಿತ್ತು.
- ಆಗಸ್ಟ್ 4ರಂದು ಎಕ್ಸ್ ಮೂಲಕ ಇನ್ನೊಂದು ಹೇಳಿಕೆ ನೀಡಿದ್ದ ಸಚಿವಾಲಯವು, 'ಪೆಟ್ರೋಲ್‌ಗೆ ಹೋಲಿಸಿದರೆ ಎಥೆನಾಲ್‌ನ ಇಂಧನ ಸಾಂದ್ರತೆಯು ಕಡಿಮೆ ಇರುವ ಕಾರಣಕ್ಕೆ, ಇಂಧನ ದಕ್ಷತೆಯು ತುಸು ಕಡಿಮೆ ಆಗುತ್ತದೆ. ಇ10 ಪೆಟ್ರೋಲ್‌ಗೆ ವಿನ್ಯಾಸಗೊಳಿಸಿ ಇ20 ಪೆಟ್ರೋಲ್‌ಗೆ ಮರುಹೊಂದಿಸಿರುವ ಎಂಜಿನ್‌ಗಳಲ್ಲಿ ಇಂಧನ ದಕ್ಷತೆಯು ಶೇ 1ರಿಂದ ಶೇ 2ರಷ್ಟು ಕಡಿಮೆ ಆಗಬಹುದು. ಇನ್ನುಳಿದ ಎಂಜಿನ್‌ಗಳಲ್ಲಿ ಶೇ 3–6ರಷ್ಟು ಕಡಿಮೆ ಆಗಬಹುದು' ಎಂದಿತ್ತು.
- ಈ ಕುರಿತಾಗಿ ಪ್ರತಿಕ್ರಿಯೆ ನೀಡಲು ಮಾರುತಿ ಸುಜುಕಿ ಮತ್ತು ಹುಂಡೈ ಮೋಟರ್ ಇಂಡಿಯಾ ನಿರಾಕರಿಸಿವೆ. 'ನಮ್ಮ ವಾಹನಗಳು ಇ20 ಪೆಟ್ರೋಲ್‌ಗೆ ವಿನ್ಯಾಸಗೊಂಡಿವೆ' ಎಂದು ಟಾಟಾ ಮೋಟರ್ಸ್‌ನ ವಕ್ತಾರರೊಬ್ಬರು ತಿಳಿಸಿದ್ದಾರೆ.
- 'ಇ20 ಇಂಧನಕ್ಕೆ ಸೂಕ್ತವಾಗಿ ರೂಪುಗೊಂಡಿರುವ ಎಂಜಿನ್‌ಗಳಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ. ಆದರೆ ಅದಕ್ಕೆ ಸರಿಹೊಂದದ ಎಂಜಿನ್ ಗಳಲ್ಲಿನ ಗ್ಯಾಸ್ಕೆಟ್, ಇಂಧನದ ರಬ್ಬರ್ ಹೋಸ್, ಪೈಪ್ ದೀರ್ಘಾವಧಿಯಲ್ಲಿ ಸವೆಯಬಹುದು' ಎಂದು ಇನ್ನೊಬ್ಬ ತಜ್ಞ ಕೂಡ ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ಹೇಳಿದ್ದಾರೆ.

## ❖ 'ವ್ಯಾಪಾರ ಪುನರಾರಂಭಕ್ಕೆ ಚೀನಾ ತಾತ್ವಿಕ ಒಪ್ಪಿಗೆ'

**ಸಂದರ್ಭ:** ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರು ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯ ಶಿಪ್ಕಿ-ಲಾ ಮೂಲಕ ವ್ಯಾಪಾರವನ್ನು ಪುನರಾರಂಭಿಸುವ ಪ್ರಸ್ತಾವಕ್ಕೆ ಚೀನಾ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ರಾಜ್ಯ ಸರ್ಕಾರ ಹೇಳಿದೆ.

- **ಶಿಪ್ಕಿ-ಲಾ (ಹಿಮಾಚಲ ಪ್ರದೇಶ), ಲಿಪುಲೇಖ್ (ಉತ್ತರಾಖಂಡ) ಹಾಗೂ ನಾಥು ಲಾ (ಸಿಕ್ಕಿಂ)** ಗಡಿಭಾಗದ ಮೂಲಕ ವ್ಯಾಪಾರವನ್ನು ಪುನರಾರಂಭಿಸಲು ಭಾರತ ಸರ್ಕಾರವು ಚೀನಾದೊಂದಿಗೆ ಚರ್ಚೆಯನ್ನು ಪ್ರಾರಂಭಿಸಿದೆ ಎಂದು ಸಚಿವ ಎಸ್.ಜೈಶಂಕರ್ ಅವರು ರಾಜ್ಯ ಸರ್ಕಾರಕ್ಕೆ ತಿಳಿಸಿದ್ದಾರೆ. ಕೋವಿಡ್‌ನಿಂದಾಗಿ ವ್ಯಾಪಾರವನ್ನು ಸ್ಥಗಿತಗೊಳಿಸಲಾಗಿತ್ತು.

## ❖ ರಫ್ತುದಾರರಿಗೆ 6 ವರ್ಷ ನೆರವು ಸಾಧ್ಯತೆ

**<u>ಸಂದರ್ಭ:</u>** ರಫ್ತು ವಹಿವಾಟಿನಲ್ಲಿ ತೊಡಗಿರುವವರಿಗೆ 'ರಫ್ತು ಉತ್ತೇಜನಾ ಮಿಷನ್' ಅಡಿಯಲ್ಲಿ ಆರು ಹಣಕಾಸು ವರ್ಷಗಳವರೆಗೆ ₹25 ಸಾವಿರ ಕೋಟಿ ಮೊತ್ತದ ಬೆಂಬಲ ಕ್ರಮ ಘೋಷಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಈ ಮಿಷನ್‌ಅನ್ನು ಫೆಬ್ರುವರಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಘೋಷಿಸಲಾಗಿದೆ.

- 'ರಫ್ತುದಾರರಿಗೆ ಸಾಲವು ಸುಲಭವಾಗಿ ಹಾಗೂ ಕೈಗೆಟಕುವ ದರದಲ್ಲಿ ಸಿಗುವಂತೆ ಮಾಡುವುದು ಮುಖ್ಯ ಆದ್ಯತೆಯಾಗಿ ಇರಲಿದೆ' ಎಂದು ಮೂಲಗಳು ಹೇಳಿವೆ. ಪ್ರಸ್ತಾವನೆಯನ್ನು ಕೇಂದ್ರ ವಾಣಿಜ್ಯ ಸಚಿವಾಲಯವು ಹಣಕಾಸು ಸಚಿವಾಲಯಕ್ಕೆ ರವಾನಿಸಿದೆ.
- ವಾಣಿಜ್ಯ ಸಚಿವಾಲಯದ ಪ್ರಸ್ತಾವಕ್ಕೆ ಅನುಮತಿ ದೊರೆತು, ಅದು ಅನುಷ್ಠಾನಕ್ಕೆ ಬಂದರೆ ರಫ್ತು ವಹಿವಾಟಿನಲ್ಲಿ ತೊಡಗಿರುವವರಿಗೆ ಜಾಗತಿಕ ಮಟ್ಟದ ವ್ಯಾಪಾರ ಅನಿಶ್ಚಿತತೆಗಳಿಂದ ತುಸುಮಟ್ಟಿಗೆ ರಕ್ಷಣೆ ಸಿಕ್ಕಂತೆ ಆಗುತ್ತದೆ. ಅಮೆರಿಕವು ಭಾರತದ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ವಿಧಿಸಿದೆ. ಶೇ 25ರಷ್ಟು ಸುಂಕವು ಈಗಾಗಲೇ ಜಾರಿಗೆ ಬಂದಿದೆ, ಇನ್ನುಳಿದ ಶೇ 25ರಷ್ಟು ಸುಂಕವು ಆಗಸ್ಟ್ 27ರಿಂದ ಅನ್ವಯ ಆಗಲಿದೆ.
- ಹಣಕಾಸು ಸಚಿವಾಲಯದಿಂದ ಅನುಮತಿ ದೊರೆತ ನಂತರದಲ್ಲಿ ವಾಣಿಜ್ಯ ಸಚಿವಾಲಯವು ತನ್ನ ಪ್ರಸ್ತಾವನೆ ಯನ್ನು ಕೇಂದ್ರ ಸಂಪುಟದ ಮುಂದೆ ಇರಿಸಲಿದೆ.

## ❖ 'ವಾಯುಪ್ರದೇಶ ರಕ್ಷಣಾ ವ್ಯವಸ್ಥೆ' ಪರೀಕ್ಷೆ ಯಶಸ್ವಿ

**<u>ಸಂದರ್ಭ:</u>** ಭಾರತೀಯ ವಾಯುಪಡೆಯು ಇದೇ ಮೊದಲ ಬಾರಿಗೆ 'ಸಮಗ್ರ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ' ಯ (ಐಎಡಬ್ಲ್ಯುಎಸ್) ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನೆರವೇರಿಸಿದೆ.

- ಒಡಿಶಾದ ಕರಾವಳಿಯ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಈ ಪರೀಕ್ಷಾರ್ಥ ಪ್ರಯೋಗವು, ಐಎಡಬ್ಲ್ಯುಎಸ್ ಕ್ಷಮತೆ ಯನ್ನು ಸಾಬೀತುಪಡಿಸಿತು.
- ಪ್ರಾದೇಶಿಕ ಭದ್ರತೆ ವಿಚಾರದಲ್ಲಿ ಸವಾಲುಗಳನ್ನು ಎದುರಿಸಲು ಸೇನೆಯ ಸಾಮರ್ಥ್ಯ ವೃದ್ಧಿಸುವ ಅಗತ್ಯತೆಯನ್ನು ಕೂಡ ಈ ಪ್ರಾತ್ಯಕ್ಷಿಕೆ ಪ್ರಸ್ತುತಪಡಿಸಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.
- 'ಆಪರೇಷನ್ ಸಿಂಧೂರ' ನಡೆದ ಮೂರು ತಿಂಗಳ ನಂತರ ಈ ಪರೀಕ್ಷೆ ನಡೆಸಲಾಗಿದೆ. ಈ ವ್ಯವಸ್ಥೆ ಅಭಿವೃದ್ಧಿಪಡಿಸಿರುವ ಡಿಆರ್‌ಡಿಒ, ಸಶಸ್ತ್ರ ಪಡೆಗಳು ಹಾಗೂ ಪೂರಕ ಕಾರ್ಯ ಕೈಗೊಂಡಿರುವ ಉದ್ಯಮಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಭಿನಂದಿಸಿದ್ದಾರೆ.



ಒಡಿಶಾದ ಕರಾವಳಿಯಲ್ಲಿ 'ಸಮಗ್ರ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ'ಯ (ಐಎಡಿಡಬ್ಲ್ಯುಎಸ್) ಯಶಸ್ವಿ ಪರೀಕ್ಷೆಯನ್ನು ನೆರವೇರಿಸಲಾಯಿತು —ಪಿಟಿಐ ಚಿತ್ರ



**ವೈಶಿಷ್ಟ್ಯಗಳು**

- ಐಎಡಿಡಬ್ಲ್ಯುಎಸ್, ಬಹು ಹಂತದ ವಾಯುಪ್ರದೇಶ ರಕ್ಷಣಾ ವ್ಯವಸ್ಥೆಯಾಗಿದ್ದು, ದೇಶೀಯವಾಗಿಯೇ ಅಭಿವೃದ್ಧಿಪಡಿಸಿರುವ ಕ್ಷಿಪಣಿಗಳನ್ನು ಒಳಗೊಂಡಿದೆ
- ನೆಲದಿಂದ ಆಗಸಕ್ಕೆ ಕ್ಷಿಪ್ರವಾಗಿ ಚಿಮ್ಮಿ ಗುರಿಯನ್ನು ನಾಶ ಮಾಡಬಲ್ಲ ಕ್ಷಿಪಣಿಗಳು (ಕ್ಯೂಆರ್‌ಎಸ್‌ಎಎಂ), ಕಡಿಮೆ ವ್ಯಾಪ್ತಿಯ ವಾಯು ಪ್ರದೇಶದಲ್ಲಿನ ಗುರಿ ನಾಶ ಮಾಡಬಲ್ಲ ರಕ್ಷಣಾ ವ್ಯವಸ್ಥೆ (ವಿಶಾರ್ಡ್ಸ್), ಲೇಸರ್ ನಿರ್ದೇಶಿತ ಅಧಿಕ ಶಕ್ತಿ ಹೊಂದಿರುವ ಶಸ್ತ್ರಗಳನ್ನು (ಡಿಇಡಬ್ಲ್ಯು) ಈ ರಕ್ಷಣಾ ವ್ಯವಸ್ಥೆ ಒಳಗೊಂಡಿದೆ
- ಈ ಎಲ್ಲ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಕೇಂದ್ರೀಕೃತ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರದ ಮೂಲಕ ನಿಯಂತ್ರಿಸಲಾಗುತ್ತದೆ. ಕಮಾಂಡ್ ಹಾಗೂ ನಿಯಂತ್ರಣ ಕೇಂದ್ರವನ್ನು ಕೂಡ ಡಿಆರ್‌ಡಿಒ ಅಭಿವೃದ್ಧಿಪಡಿಸಿದೆ
- ವಿಶಾರ್ಡ್ಸ್ ಮತ್ತು ಡಿಇಡಬ್ಲು ಗಳನ್ನು ಕ್ರಮವಾಗಿ ರಿಸರ್ಚ್ ಸೆಂಟರ್ ಇಮಾರತ್ ಹಾಗೂ ಸೆಂಟರ್ ಫಾರ್ ಹೈಎನರ್ಜಿ ಸಿಸ್ಟಮ್ಸ್ ಆ್ಯಂಡ್ ಸೈನ್ಸಸ್ ಅಭಿವೃದ್ಧಿಪಡಿಸಿವೆ

**ಪರೀಕ್ಷೆ ಹೇಗೆ?**

ಈ ಪರೀಕ್ಷೆ ವೇಳೆ, ಮೂರು ವಿಭಿನ್ನ ಗುರಿಗಳನ್ನು ಸಮಗ್ರ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ ನಾಶ ಪಡಿಸಿದೆ.

ಎರಡು ಅತಿ ವೇಗವಾಗಿ ಚಲಿಸುತ್ತಿದ್ದ ಡ್ರೋನ್(ಯುಎವಿ) ಹಾಗೂ ಮಲ್ಟಿಕಾಪ್ಟರ್ ಡ್ರೋನ್ ಗುರಿಗಳಾಗಿದ್ದವು.

ಬೇರೆ ಬೇರೆ ಎತ್ತರದಲ್ಲಿ ಹಾರಾಡುತ್ತಿದ್ದ ಈ ಗುರಿಗಳನ್ನು ಕ್ಯೂಆರ್‌ಎಸ್‌ಎಎಂ, ವಿಶಾರ್ಡ್ಸ್ ಮತ್ತು ಡಿಇಡಬ್ಲು ಅತ್ಯಂತ ನಿಖರವಾಗಿ ಹೊಡೆದುರುಳಿಸಿದವು.

ಈ ರಕ್ಷಣಾ ವ್ಯವಸ್ಥೆಯ ಎಲ್ಲ ಭಾಗಗಳು ಯಾವುದೇ ದೋಷಗಳಿಲ್ಲದೆಯೇ ಕಾರ್ಯನಿರ್ವಹಿಸಿದವು ಎಂದು ರಕ್ಷಣಾ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

## ❖ ಶೂಟಿಂಗ್: ಐಶ್ವರಿ ಪ್ರತಾಪ್‌ಗೆ ಚಿನ್ನ


**<u>ಸಂದರ್ಭ:</u>** ಭಾರತದ ತಾರಾ ಶೂಟರ್ ಐಶ್ವರಿ ಪ್ರತಾಪ್ ಸಿಂಗ್ ತೋಮಾರ್ ಅವರು ಇಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ (3ಪಿ) ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

Dr. Rajkumar ASK Academy

- 24 ವರ್ಷ ವಯಸ್ಸಿನ ಐಶ್ವರಿ ಅವರು ಫೈನಲ್ ಸ್ಪರ್ಧೆಯಲ್ಲಿ 462.5 ಅಂಕಗಳನ್ನು ಗಳಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು. ಅವರು 2023ರ ಟೂರ್ನಿಯ ಇದೇ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದರು.
- ಚೀನಾದ ವೆನ್ಯು ಝೂಒ (462) ಬೆಳ್ಳಿ ಗೆದ್ದರೆ, ಜಪಾನ್‌ನ ನಯೊಕಾ ಒಕಾಡಾ (445.8) ಕಂಚಿನ ಪದಕ ಜಯಿಸಿದರು. ಸ್ಪರ್ಧೆಯಲ್ಲಿದ್ದ ಮತ್ತಿಬ್ಬರು ಭಾರತೀಯರಾದ ಚೈನ್ ಸಿಂಗ್ (435.7) ಹಾಗೂ ಅಖಿಲ್ ಶಿಯೊರಾಣ್ (424.9) ಅವರು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದು, ಪದಕ ಗೆಲ್ಲುವಲ್ಲಿ ವಿಫಲರಾದರು.



ಐಶ್ವರಿ ಪ್ರತಾಪ್ ಸಿಂಗ್ ತೋಮಾರ್



ಕನ್ನಡತಿ ಹೃದ್ಯಾ ಶ್ರೀ ಕೊಂಡೂರುಗೆ ಚಿನ್ನ

ಕನ್ನಡತಿ ಹೃದ್ಯಾ ಶ್ರೀ ಕೊಂಡೂರು, ಶಾಂಭವಿ ಶ್ರವಣ್ ಹಾಗೂ ಇಶಾ ಅನಿಲ್ ಅವರು ಜೂನಿಯರ್ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯ ತಂಡ ವಿಭಾಗದಲ್ಲಿ ಸ್ವರ್ಣ ಪದಕ ಜಯಿಸಿದರು.

ಪ್ರಶಸ್ತಿ ಸುತ್ತಿನಲ್ಲಿ ಒಟ್ಟು 1896.2 ಅಂಕಗಳನ್ನು ಸಂಪಾದಿಸಿದ ಅವರು ಜೂನಿಯರ್ ವಿಶ್ವದಾಖಲೆ ಹಾಗೂ ಏಷ್ಯನ್ ದಾಖಲೆಯನ್ನು ನಿರ್ಮಿಸಿದರು.

ಹೃದ್ಯಾ ಶ್ರೀ

- ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯ ತಂಡ ವಿಭಾಗದಲ್ಲಿ ಐಶ್ವರಿ, ಚೈನ್ ಸಿಂಗ್ ಹಾಗೂ ಶಿಯೊರಾಣ್ ಅವರು ಒಟ್ಟು 1,747 ಅಂಕಗಳೊಡನೆ ಬೆಳ್ಳಿ ಪದಕ ಗೆದ್ದುಕೊಂಡರು. 1,750 ಅಂಕ ಗಳಿಸಿದ್ದ ಚೀನಾ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿತು.

ಅದ್ರಿಯಾನ್‌ಗೆ ಸ್ವರ್ಣ: ಉದಯೋನ್ಮುಖ ಶೂಟರ್ ಅದ್ರಿಯಾನ್ ಕರ್ಮಾಕರ್

- ಅವರು (463.8 ಅಂಕ) ಜೂನಿಯರ್ ಪುರುಷರ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಏಷ್ಯನ್ ಜೂನಿಯರ್ ದಾಖಲೆಯೊಂದಿಗೆ
- ಚಿನ್ನದ ಪದಕ ಗೆದ್ದುಕೊಂಡರು. ಚೀನಾದ ಹಾನ್ ಯಿನಾನ್ (459.6) ಬೆಳ್ಳಿ ಗೆದ್ದರೆ, ಕಣದಲ್ಲಿದ್ದ ಮತ್ತೊಬ್ಬ ಭಾರತೀಯ ವೇದಾಂತ್ ನಿತಿನ್ (448.8) ಕಂಚಿಗೆ ತೃಪ್ತಿಪಟ್ಟರು.
- ಅದ್ರಿಯಾನ್ ಹಾಗೂ ವೇದಾಂತ್ ಅವರು ರೋಹಿತ್ ಕನ್ಯಾನ್ ಜೊತೆಗೂಡಿ ಜೂನಿಯರ್ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯ ತಂಡ ವಿಭಾಗದಲ್ಲಿ ಸ್ವರ್ಣ ಪದಕ ಜಯಿಸಿದರು. ಭಾರತ ತಂಡ 1,733 ಅಂಕ ಗಳಿಸಿದರೆ, ಕೊರಿಯಾ 1,722 ಅಂಕಗಳೊಂದಿಗೆ ಬೆಳ್ಳಿ ಪದಕವನ್ನು ತನ್ನದಾಗಿಸಿಕೊಂಡಿತು.



ಅದ್ರಿಯಾನ್

## ❖ ಒಳ ಮೀಸಲು ಜಾರಿ: ಆದೇಶ

**<u>ಸಂದರ್ಭ:</u>** ಪರಿಶಿಷ್ಟ ಜಾತಿಗೆ ಲಭ್ಯ ಇರುವ ಶೇಕಡ 17ರಷ್ಟು ಮೀಸಲಾತಿಯ ಪೈಕಿ, ಎಡಗೈ ಸಂಬಂಧಿತ ಜಾತಿಗಳಿರುವ 'ಎ' ಪ್ರವರ್ಗಕ್ಕೆ ಶೇ 6, ಬಲಗೈ ಸಂಬಂಧಿತ ಜಾತಿಗಳಿರುವ 'ಬಿ' ಪ್ರವರ್ಗಕ್ಕೆ ಶೇ 6 ಹಾಗೂ ಸ್ಪೃಶ್ಯ ಮತ್ತು ಅಲೆಮಾರಿ ಜಾತಿಗಳಿರುವ 'ಸಿ' ಪ್ರವರ್ಗಕ್ಕೆ ಶೇ 5ರಷ್ಟು ಒಳ ಮೀಸಲಾತಿ ಜಾರಿಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

- 101 ಜಾತಿಗಳನ್ನು 'ಎ', 'ಬಿ', 'ಸಿ' ಎಂದು ಮೂರು ಪ್ರವರ್ಗಗಳಾಗಿ ವಿಂಗಡಿಸಲಾಗಿದೆ.
- ಸರ್ಕಾರಿ ಹುದ್ದೆಗಳಿಗೆ ಒಳ ಮೀಸಲಾತಿ ಕಾರಣಕ್ಕೆ ತಡೆ ಹಿಡಿಯಲಾಗಿದ್ದ ನೇರ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಾಣಾ ಇಲಾಖೆ (ಡಿಪಿಎಆರ್) ಕ್ರಮ

Dr.Rajkumar IAS/KAS Academy

ವಹಿಸಬೇಕು. ಎಲ್ಲ ಇಲಾಖೆಗಳು ಮತ್ತು ಅವುಗಳ ಅಧೀನದ ಎಲ್ಲ ನಿಗಮ, ಮಂಡಳಿ, ಸಂಸ್ಥೆಗಳಲ್ಲಿ ಮುಂಬಡ್ತಿ ಪ್ರಕ್ರಿಯೆಯನ್ನೂ ಮುಂದುವರಿಸ ಬಹುದು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

- ಒಳ ಮೀಸಲಾತಿ ಕಲ್ಪಿಸಲು ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು ಸಲ್ಲಿಸಿದ್ದ ಶಿಫಾರಸುಗಳನ್ನು ಕೆಲವು ಬದಲಾವಣೆಗಳೊಂದಿಗೆ ಅನುಷ್ಠಾನಗೊಳಿಸಲು, ಆಗಸ್ಟ 19ರಂದು ನಡೆದಿದ್ದ ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು.

- **ನಾಗಮೋಹನದಾಸ್ ಆಯೋಗವು** ಪರಿಶಿಷ್ಟ ಜಾತಿಗಳನ್ನು 'ಎ' , 'ಬಿ' , 'ಸಿ' , 'ಡಿ' , 'ಇ' ಎಂದು ಐದು ಪ್ರವರ್ಗಗಳಾಗಿ ವಿಂಗಡಿಸಿ, ಮೀಸಲಾತಿ ಹಂಚಿಕೆ ಮಾಡಿ ಶಿಫಾರಸು ಮಾಡಿತ್ತು.
- ಆ ವರದಿಯಲ್ಲಿ ಪ್ರವರ್ಗ 'ಇ' ಯಲ್ಲಿರುವ **ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಈ ಮೂರು ಸಮುದಾಯಗಳು ಮೂಲ ಜಾತಿಯನ್ನು ತಿಳಿಸದೇ ಇರುವುದರಿಂದ ಪ್ರವರ್ಗ 'ಎ' ಅಥವಾ ಪ್ರವರ್ಗ 'ಬಿ' ಅಡಿ ಮೀಸಲಾತಿ** ಸೌಲಭ್ಯವನ್ನು ಪಡೆಯಬಹುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಗರಿಷ್ಠ ವಯೋಮಿತಿ ಸಡಿಲಿಕೆಗೂ ಅವಕಾಶ

- ಉದ್ಯೋಗಗಳ ನೇಮಕಾತಿಯಲ್ಲಿಎಲ್ಲ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲು ಕೂಡಾ ಡಿಪಿಎಆರ್ ಅಗತ್ಯ ಕ್ರಮ ವಹಿಸಬೇಕು ಎಂದು ಆದೇಶ ಹೇಳಿದೆ.

## ❖ ಇತಿಹಾಸದ ಪುಟ ಸೇರಿದ ಮಿಗ್-21

**ಸಂದರ್ಭ:** ಆರು ದಶಕಗಳ ಕಾಲ ಭಾರತೀಯ ವಾಯುಪಡೆಯಲ್ಲಿ ಕಾರ್ಯನಿರ್ವಹಿಸಿದ ಮಿಗ್-21 ಯುದ್ಧವಿಮಾನವು ರಾಜಸ್ಥಾನದ ಬಿಕಾನೇರ್‌ನಲ್ಲಿರುವ ನಾಲ್ ವಾಯುನೆಲೆಯಲ್ಲಿ ಕೊನೆಯ ಬಾರಿಗೆ ಹಾರಾಟ ನಡೆಸುವುದರೊಂದಿಗೆ ಇತಿಹಾಸದ ಪುಟ ಸೇರಿತು.

- ಚಂಡೀಗಢದಲ್ಲಿ ಸೆಪ್ಟೆಂಬರ್ 26ರಂದು ಈ ಯುದ್ಧವಿಮಾನದ ಔಪಚಾರಿಕ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಲಿದೆ.
- ಸಾಂಕೇತಿಕ ಬೀಳ್ಕೊಡುಗೆಯ ಭಾಗವಾಗಿ ಆಗಸ್ಟ 18 ಮತ್ತು 19ರಂದು ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಅವರು ಮಿಗ್-21 ವಿಮಾನದ ಹಾರಾಟ ನಡೆಸಿದರು. ಯುದ್ಧವಿಮಾನದ ಕೊನೆಯ ಹಾರಾಟವು ವಾಯುಪಡೆಗೆ ಅತ್ಯಂತ ಭಾವನಾತ್ಮಕ ಗಳಿಗೆಯಾಗಿತ್ತು.

## ❖ ಡಿಸೆಂಬರ್‌ಗೆ ಹೊಸ ಐ.ಟಿ. ನಿಯಮ

**ಸಂದರ್ಭ:** ಹೊಸ ಆದಾಯ ತೆರಿಗೆ ಕಾಯ್ದೆಯ ಅನುಷ್ಠಾನಕ್ಕೆ ಅಗತ್ಯವಿರುವ ನಿಯಮಗಳನ್ನು ಡಿಸೆಂಬರ್‌ಗೆ ಮೊದಲು ಅಧಿಸೂಚನೆಯಲ್ಲಿ ಪ್ರಕಟಿಸುವ ಗುರಿ ಇದೆ ಎಂದು ಆದಾಯ ತೆರಿಗೆ ಇಲಾಖೆ ಹೇಳಿದೆ.

- ಸರಳೀಕರಿಸಿದ ಆದಾಯ ತೆರಿಗೆ ವಿವರ ಸಲ್ಲಿಕೆ ನಮೂನೆಗಳನ್ನು ಸಿದ್ಧಪಡಿಸುವ ಕೆಲಸದಲ್ಲಿ ಇಲಾಖೆ ತೊಡಗಿದೆ.
- ಹೊಸ ಕಾಯ್ದೆ ಬಗ್ಗೆ ಇಲಾಖೆಯು ವಿವರಣೆಗಳನ್ನು ಪ್ರಶ್ನೋತ್ತರದ ಮಾದರಿಯಲ್ಲಿ ನೀಡಲಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿಯ (ಸಿಬಿಡಿಟಿ) ಸದಸ್ಯ (ಶಾಸನ) ಆರ್.ಎನ್. ಪರ್ಬತ್ ಅವರು ತಿಳಿಸಿದ್ದಾರೆ.
- ಹೊಸ ಕಾಯ್ದೆಯನ್ನು ಅರ್ಥ ಮಾಡಿಕೊಂಡು, ಅದನ್ನು ಅನುಷ್ಠಾನಕ್ಕೆ ತರಲು ಅಧಿಕಾರಿಗಳಿಗೆ ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಅವರ ಸಾಮರ್ಥ್ಯ ಹೆಚ್ಚಿಸುವ ಕೆಲಸದಲ್ಲಿಯೂ ಇಲಾಖೆ ತೊಡಗಿದೆ ಎಂದು ಅವರು ಹೇಳಿದ್ದಾರೆ. ಹೊಸ ಕಾಯ್ದೆಯು 2026ರ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

## ❖ ಮರಳಿ ಅರಳಿದ ಮೀರಾಬಾಯಿ

**ಸಂದರ್ಭ:** ಒಂದು ವರ್ಷದ ನಂತರ ಸ್ಪರ್ಧಾಕಣಕ್ಕೆ ಮರಳಿದ ಮೀರಾಬಾಯಿ ಚಾನು ಅವರು ಇಲ್ಲಿ ನಡೆದ ಕಾಮನ್‌ವೆಲ್ತ್ ವೇಟ್ ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದರು.



ಅಹಮದಾಬಾದಿನಲ್ಲಿ ಸೋಮವಾರ ನಡೆದ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಮೀರಾಬಾಯಿ ಚಾನು ಪಿಟಿಐ ಚಿತ್ರ

- ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದ 31 ವರ್ಷದ ಮೀರಾ, ಒಟ್ಟು 193 ಕೆಜಿ (84ಕೆಜಿ+109 ಕೆಜಿ) ಭಾರ ಎತ್ತಿದರು. ಸ್ನ್ಯಾಚ್, ಕ್ಲೀನ್ ಮತ್ತು ಜರ್ಕ್‌ನಲ್ಲಿ ಅವರು ನೂತನ ಕೂಟ ದಾಖಲೆಯನ್ನೂ ಬರೆದರು.
- ಹಳೆಯ ದಾಖಲೆಗಿಂತ 14 ಕೆ.ಜಿ ಹೆಚ್ಚು ಭಾರ ಎತ್ತಿದರು. ಮಲೇಷ್ಯಾದ ಐರಿನ್ ಹೆನ್ರಿ 161 ಕೆ.ಜಿ(73ಕೆ.ಜಿ+88ಕೆ.ಜಿ) ಮತ್ತು ವೇಲ್ಸ್‌ನ ನಿಕೊಲಿ ರಾಬರ್ಟ್ಸ್ 150 ಕೆ.ಜಿ (70ಕೆ.ಜಿ+80ಕೆ.ಜಿ) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು.
- 2024ರ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಅದರ ನಂತರ ಅವರು ಗಾಯದಿಂದಾಗಿ ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಿರಲಿಲ್ಲ. ಅವರು ಈ ಮೊದಲು 49 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸು ತ್ತಿದ್ದರು. ಆದರೆ ಒಲಿಂಪಿಕ್ಸ್‌ನಿಂದ ಈ ವಿಭಾಗವನ್ನು ರದ್ದುಪಡಿಸಲಾಗಿದೆ. ಆದ್ದರಿಂದ ಅವರು 48 ಕೆ.ಜಿ. ವಿಭಾಗಕ್ಕೆ ಮರಳಿದ್ದಾರೆ. ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.
- ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಸೌಮ್ಯಾ ದಳವಿ ಚಿನ್ನದ ಪದಕ ಜಯಿಸಿದರು.
- ರಿಷಿಕಾಂತ್‌ಗೆ ಚಿನ್ನ: ರಾಷ್ಟ್ರೀಯ ಕ್ರೀಡಾಕೂಟದ ಚಾಂಪಿಯನ್ ರಿಷಿಕಾಂತ್ ಸಿಂಗ್,ಪು ರುಷರ 60 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಜಯಿ ಸಿದರು. ಅವರು ಒಟ್ಟು 271 ಕೆ.ಜಿ (120 ಕೆ.ಜಿ+151ಕೆ.ಜಿ) ಭಾರ ಎತ್ತಿದರು.

## ❖ ನೀರೂಗೆ ಚಿನ್ನ, ಭೌನೀಶ್‌ಗೆ ಬೆಳ್ಳಿ


**ಸಂದರ್ಭ:** ರಾಷ್ಟ್ರೀಯ ಗೇಮ್ಸ್ ಚಾಂಪಿಯನ್ ನೀರೂ ಧಂಡಾ ಅವರು ಇಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವೈಯಕ್ತಿಕ ಟ್ರ್ಯಾಪ್ ಸ್ಪರ್ಧೆಯಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಪುರುಷರ ವಿಭಾಗದಲ್ಲಿ ಭೌನೀಶ್ ಮೆಂದಿರತ್ತಾ ಅವರು ಬೆಳ್ಳಿ ಪದಕಕ್ಕೆ ಗುರಿಯಿಟ್ಟರು. ಅದರೊಂದಿಗೆ ಭಾರತದ ಶೂಟರ್‌ಗಳು ಟೂರ್ನಿಯಲ್ಲಿ 50 ಪದಕಗಳನ್ನು ಗೆದ್ದ ಸಾಧನೆ ಮಾಡಿದರು.



ನೀರೂ ಧಂಡಾ

- 50 ಶಾಟ್‌ಗಳ ಫೈನಲ್‌ನಲ್ಲಿ ನೀರೂ ಅವರು 43 ಹಿಟ್‌ಗಳೊಡನೆ ಚಿನ್ನ ಗೆದ್ದರು. ಭಾರತದ ಮತ್ತೊಬ್ಬ ಶೂಟರ್ ಆಶಿಮಾ ಅಹ್ಲಾವತ್ ಅವರು (29) ಕಂಚಿನ ಪದಕ ಜಯಿಸಿದರು. ಕತಾರ್‌ನ ಬೆಸಿಲ್ ರೇ (37) ಬೆಳ್ಳಿ ತಮ್ಮದಾಗಿಸಿಕೊಂಡರು.
- ನೀರೂ, ಆಶಿಮಾ ಹಾಗೂ ಪ್ರೀತಿ ರಜಾಕ್ ಅವರು ಒಟ್ಟು 319 ಅಂಕಗಳೊಡನೆ ಮಹಿಳೆಯರ ಟ್ರ್ಯಾಪ್ ತಂಡ ವಿಭಾಗದಲ್ಲಿಯೂ ಚಾಂಪಿಯನ್ ಆದರು. ಚೀನಾ (301) ಬೆಳ್ಳಿಗೆ ತೃಪ್ತಿಪಟ್ಟರೆ, ಕುವೈತ್ (295) ಕಂಚು ಜಯಿಸಿತು.
- ಪುರುಷರ ಟ್ರ್ಯಾಪ್ ಫೈನಲ್‌ನಲ್ಲಿ ಭೌನೀಶ್ 45 ಶಾಟ್‌ಗಳಲ್ಲಿ ಗುರಿ ತಲುಪಿದರು. ಚೀನಾದ ಶೂಟರ್‌ಗಳಾದ ಯಿಂಗ್ ಕಿ (47) ಹಾಗೂ ಪೆಂಗ್‌ಯು ಶೆನ್ (35) ಕ್ರಮವಾಗಿ ಚಿನ್ನ ಹಾಗೂ ಕಂಚು ಜಯಿಸಿದರು. ಆದರೆ, ಒಲಿಂಪಿಕ್ಸ್ ಡಬಲ್ ಪದಕವಿಜೇತೆ ಮನು ಭಾಕರ್ ಅವರು ಮಹಿಳೆಯರ 25 ಮೀಟರ್ ಪಿಸ್ತೂಲ್ ವಿಭಾಗದಲ್ಲಿ ನಿರಾಶೆ ಅನುಭವಿಸಿದರು. ನಾಲ್ಕನೇ ಸ್ಥಾನ ಪಡೆದ ಅವರು, ಪದಕ ಗೆಲ್ಲುವ ಅವಕಾಶ ಕೈಚೆಲ್ಲಿದರು.

- ಫೈನಲ್ ಸ್ಪರ್ಧೆಯಲ್ಲಿ ಭಾಕರ್ ಅವರು 25 ಅಂಕಗಳನ್ನು ಗಳಿಸಿದರು. ತಲಾ 39 ಅಂಕಗಳನ್ನು ಗಳಿಸಿದ್ದ ಚೀನಾದ ಯೂಯೂ ಜಾಂಗ್ ಹಾಗೂ ಜಿಯಾರುಷುವನ್ ಷಿಯಾವೊ ಅವರು ಶೂಟ್-ಆಫ್‌ನಲ್ಲಿ 4–3 ಅಂಕ ಪಡೆಯುವುದರೊಂದಿಗೆ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದರು.
- ಭಾಕರ್, ಇಶಾ ಹಾಗೂ ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ತಂಡ ವಿಭಾಗದಲ್ಲಿ 1,749 ಪಾಯಿಂಟ್ಸ್‌ಗಳೊಂದಿಗೆ ಕಂಚಿನ ಪದಕ ಗೆದ್ದುಕೊಂಡರು. ಚೀನಾ ಸ್ವರ್ಣ ಗೆದ್ದರೆ, ಕೊರಿಯಾ ಬೆಳ್ಳಿ ಗೆದ್ದಿತು.
- ಜೂನಿಯರ್ಸ್ ಪರಾಕ್ರಮ: ಟೂರ್ನಿಯ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಸೀನಿಯರ್ ಶೂಟರ್‌ಗಳು ಪದಕ ಗೆಲ್ಲುವಲ್ಲಿ ವಿಫಲವಾದರೆ, ಜೂನಿಯರ್ ಸ್ಪರ್ಧಿಗಳು ಎಲ್ಲ ಮೂರು ಪದಕಗಳನ್ನು ಜಯಿಸಿ ಪರಾ ಕ್ರಮ ಮೆರೆದರು. ಪಾಯಲ್ ಖತ್ರಿ 36 ಪಾಯಿಂಟ್ಸ್ ಗಳೊಂದಿಗೆ ಸ್ವರ್ಣಕ್ಕೆ ಮುತ್ತಿಕ್ಕಿದರೆ, ನಾಮ್ಯ ಕಪೂರ್ (30) ಬೆಳ್ಳಿ ಹಾಗೂ ತೇಜಸ್ವಿನಿ (27) ಕಂಚು ಗೆದ್ದರು.
- ಈ ಮೂವರು, ಜೂನಿಯರ್ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯ ತಂಡ ವಿಭಾಗದಲ್ಲಿ ರಜತ ಪದಕ ಗೆಲ್ಲುವಲ್ಲಿ ಯಶಸ್ವಿಯಾದರು. ಫೈನಲ್‌ನಲ್ಲಿ ಭಾರತ ತಂಡವು 1,700 ಅಂಕ ಸಂಪಾದಿಸಿದರೆ, ಕೊರಿಯಾ 1,714 ಪಾಯಿಂಟ್ಸ್‌ಗಳೊಡನೆ ಚಿನ್ನ ಜಯಿಸಿತು.



## ❖ ಸಂಕಷ್ಟದಲ್ಲಿ ಸ್ಫಟಿಕಶಿಲೆ ಉದ್ಯಮ

**ಸಂದರ್ಭ:** ಭಾರತದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ಶೇ 50ರಷ್ಟು ತೆರಿಗೆ ವಿಧಿಸುವ ಅಮೆರಿಕದ ಕ್ರಮವು ಜಾರಿಗೆ ಬರುತ್ತಿದ್ದು, ದೇಶದ ಸ್ಫಟಿಕಶಿಲೆ ಉದ್ಯಮ ಆತಂಕಕ್ಕೆ ಒಳಗಾಗಿದೆ.

- ಅಮೆರಿಕದ ಈ ಕ್ರಮದಿಂದ ದೇಶೀಯ ಸ್ಫಟಿಕಶಿಲೆ ಉದ್ಯಮ ಎದುರಿಸುವ ಆರ್ಥಿಕ ಕುಸಿತ ತಡೆಗಟ್ಟಲು ಸರ್ಕಾರ ತುರ್ತಾಗಿ ಹಸ್ತಕ್ಷೇಪ ಮಾಡಬೇಕು ಎಂದು ಭಾರತೀಯ ಸ್ಫಟಿಕಶಿಲೆ ತಯಾರಕರ ಒಕ್ಕೂಟವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.
- ಈ ವಲಯದಲ್ಲಿ ಉದ್ದಿಮೆದಾರರು ಅಂದಾಜು ₹5,000 ಕೋಟಿಗೂ ಹೆಚ್ಚು ಹೂಡಿಕೆ ಮಾಡಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಅಮೆರಿಕದಲ್ಲಿ ಮಾರುಕಟ್ಟೆ ಕಂಡುಕೊಂಡಿದ್ದ ಈ ವಲಯವು ಹೆಚ್ಚುವರಿ ಸುಂಕದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ತಕ್ಷಣವೇ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡಿ ಸಮಗ್ರ ಪರಿಹಾರ ನೀಡಬೇಕು ಎಂದು ಒಕ್ಕೂಟವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೋರಿಕೆ ಸಲ್ಲಿಸಿದೆ.
- ಸಾಲದ ಕಂತುಗಳ ಮರುಪಾವತಿ, ಬಡ್ಡಿ ಪಾವತಿಗೆ ಮೂರು ವರ್ಷಗಳವರೆಗೆ ವಿರಾಮ ನೀಡಬೇಕು. ಸ್ಫಟಿಕ ಶಿಲೆ ಮೇಲ್ಮೈ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಅನ್ನು ಈಗಿನ ಶೇ 18ರಿಂದ ಶೇ 5ಕ್ಕೆ ಇಳಿಸುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒಕ್ಕೂಟ ಕೋರಿದೆ.

## ❖ ಜಿಬಿಎ ರಚನೆ: ನಗರ ಆಡಳಿತದ ಮೇಲೆ ಹಿಡಿತ



### ರಚನೆಯಾಗಲಿರುವ ಐದೂ ನಗರ ಪಾಲಿಕೆಗಳ ಮೇಲೆ ನಿಯಂತ್ರಣ; ಬಿಬಿಎಂಪಿ ಮುಖ್ಯ ಆಯುಕ್ತರಿಗೇ ಜಿಬಿಎ ಮುಖ್ಯ ಆಯುಕ್ತರ ಹುದ್ದೆ

• ಆರ್. ಮಂಜುನಾಥ್

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರದೇಶ' (ಬಿಬಿಎಂಪಿ) ವ್ಯಾಪ್ತಿಯಲ್ಲಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವನ್ನು (ಜಿಬಿಎ) ಸರ್ಕಾರ ರಚಿಸಿದ್ದು, ನಗರದ ಸಂಪೂರ್ಣ ಆಡಳಿತದ ಮೇಲೆ ಹಿಡಿತ ಸಾಧಿಸಲಿದೆ.

ಸೆಪ್ಟೆಂಬರ್ 2ರಂದು ಐದು ನಗರ ಪಾಲಿಕೆಗಳ ಅಂತಿಮ ಅಧಿಸೂಚನೆಯಾದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಸ್ತಿತ್ವ ಕಳೆದುಕೊಳ್ಳಲಿದ್ದು, ನಗರದ ಆಡಳಿತ ವ್ಯವಸ್ಥೆಯನ್ನು ಜಿಬಿಎ ತನ್ನ ತೆಕ್ಕೆಗೆ ತೆಗೆದುಕೊಳ್ಳಲಿದೆ.

ಬಿಬಿಎಂಪಿಯಲ್ಲಿ ಈಗಿರುವ ವಿಶೇಷ ಆಯುಕ್ತರೂ ಸೇರಿದಂತೆ ಜಂಟಿ ಆಯುಕ್ತ, ಉಪ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳನ್ನು ಜಿಬಿಎ ಅಥವಾ ಐದು ನಗರ ಪಾಲಿಕೆಗಳಿಗೆ ವರ್ಗಾಯಿಸಲು ಸರ್ವ ರೀತಿಯಲ್ಲೂ ಸಿದ್ಧತೆಯಾಗಿದೆ. ನಗರ ಪಾಲಿಕೆಯ ಮೂಲ ಕಾಮಗಾರಿಗಳನ್ನು ಹೊರತುಪಡಿಸಿದರೆ, ಅಂತರ ನಗರ ಪಾಲಿಕೆಗಳ ಯೋಜನೆಗಳನ್ನು ಜಿಬಿಎ ಸಿದ್ಧಪಡಿಸಿ, ನಿರ್ವಹಿಸಲಿದೆ. ಅಲ್ಲಿನ ತೀರ್ಮಾನಗಳಂತೆಯೇ ಕಾಮಗಾರಿಗಳು ನಡೆಯಲಿವೆ.

ಬೃಹತ್ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ)–'ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ' (ಬಿ-ಸ್ಮೈಲ್) ಕಾರ್ಯ ನಿರ್ವಹಿಸುತ್ತಿದ್ದು, ಇದೂ ಜಿಬಿಎ ಅಡಿಯಲ್ಲಿ ಇರಲಿದೆ. ಬಿಡಿಎ, ಜಲಮಂಡಳಿ, ಬೆಸ್ಕಾಂ, ಬಿಎಂಟಿಸಿ, ನಗರ ಪೊಲೀಸ್, ನಗರ ಜಿಲ್ಲಾಧಿಕಾರಿ, ಅಗ್ನಿಶಾಮಕ ದಳಗಳೂ ಜಿಬಿಎ ವ್ಯಾಪ್ತಿಗೆ ಬರುವುದರಿಂದ ಎಲ್ಲ ಕಾಮಗಾರಿಗಳೂ ಇಲ್ಲೇ ನಿರ್ಧಾರವಾಗಲಿವೆ.



ಬಿಬಿಎಂಪಿ ಮುಖ್ಯ ಆಯುಕ್ತರಿಗೇ ಜಿಬಿಎ ಮುಖ್ಯ ಆಯುಕ್ತರ ಹುದ್ದೆಯನ್ನು ಹೆಚ್ಚುವರಿಯಾಗಿ ಮಂಗಳವಾರ ವಹಿಸಲಾಗಿದೆ. ಜಿಬಿಎಯ ಮುಖ್ಯ ನಗರ ಯೋಜಕ ಹಾಗೂ ಮುಖ್ಯ ಎಂಜಿನಿಯರ್ ಅವರ ಹುದ್ದೆಯನ್ನು ಅಧಿಸೂಚಿಸಿ, ನೇಮಿಸಬೇಕಿದೆ.

#### ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಾರ್ಯವ್ಯಾಪ್ತಿ

- ಜಿಬಿಎ ಶಾಶ್ವತ ಉತ್ತರಾಧಿಕಾರ, ಸಾಮಾನ್ಯ ಮೊಹರನ್ನು ಹೊಂದಿ, ತನ್ನ ಹೆಸರಿನಲ್ಲಿ ಸ್ವತ್ತುಗಳನ್ನು ಅರ್ಜಿಸುವ, ಧಾರಣ ಮಾಡುವ, ವಿಲೇ ಮಾಡುವ ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ
- ಜಿಬಿಎಗೆ ನೇಮಕವಾದ ಸದಸ್ಯರಲ್ಲದೆ, ರೈಲು ಮೂಲಸೌಕರ್ಯ ಅಭಿವೃದ್ಧಿ ಉದ್ಯಮ ನಿಯಮಿತ, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಸೇರಿದಂತೆ ಸರ್ಕಾರ ಗೊತ್ತುಪಡಿಸಬಹುದಾದ ಯಾವುದೇ ಏಜೆನ್ಸಿ ಅಥವಾ ಇಲಾಖೆಯ ಅಧಿಕಾರಿಗಳು ಸಭೆಗೆ ವಿಶೇಷ ಆಹ್ವಾನಿತರಾಗಬಹುದು. ಅವರಿಗೆ ಮತದಾನದ ಹಕ್ಕು ಇರುವುದಿಲ್ಲ
- ಮೂಲಸೌಕರ್ಯ, ನಗರ ಯೋಜನೆ, ಆಡಳಿತ, ಕಾನೂನು, ಹಣಕಾಸು, ಜಾಗೃತ ದಳ ಹಾಗೂ ಇತರೆ ಪ್ರಕಾರ್ಯಗಳಿಗೆ ಅನುಕೂಲವಾಗಲು ಅಧಿಕಾರಿಗಳನ್ನು ನೇಮಿಸಿಕೊಳ್ಳಬಹುದು
- ಜಿಬಿಎ ಪ್ರದೇಶದಲ್ಲಿರುವ ನಗರ ಪಾಲಿಕೆಗಳಿಗೆ ಸಿಬ್ಬಂದಿ ನಿಯೋಜನೆ, ಜೇಷ್ಠತೆ, ಮುಂಬಡ್ತಿ, ಮುಖ್ಯ ಎಂಜಿನಿಯರ್ ವರೆಗಿನ ವೃಂದ ಮಟ್ಟದ ನಿಯೋಜನೆ, ಸೇವೆಯಿಂದ ವಜಾ, ಕಡ್ಡಾಯ ನಿವೃತ್ತಿ, ಕಡಿಮೆ ವೇತನ ಶ್ರೇಣಿ ಅಥವಾ ಹುದ್ದೆಗೆ ಇಳಿಸುವ ಕಾರ್ಯವನ್ನು ಜಿಬಿಎ ನಿಭಾಯಿಸಲಿದೆ
- ಜಿಬಿಎ ಅಧ್ಯಕ್ಷರು ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಪ್ರಾಧಿಕಾರದ ಸಭೆ ಕರೆಯಬೇಕು. ಅಧ್ಯಕ್ಷರ ಉಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆ ಅಧ್ಯಕ್ಷತೆ ವಹಿಸಬೇಕು
- ಜಿಬಿಎ ಸಭೆಯ ಮುಂದೆ ಬರುವ ವಿಷಯಗಳನ್ನು ಹಾಜರಿರುವ ಸದಸ್ಯರು ಬಹುಮತದ ಮೂಲಕ ತೀರ್ಮಾನಿಸಲಿದ್ದಾರೆ. ಸದಸ್ಯ ಕಾರ್ಯದರ್ಶಿ ಪ್ರತಿ ಸಭೆ ಮುಗಿದ ಮೂರು ದಿನಗಳೊಳಗೆ ಎಲ್ಲ ತೀರ್ಮಾನಗಳನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಪ್ರಕಟಿಸಬೇಕು
- ಜಿಬಿಎ ಅಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಅಥವಾ ಮುಖ್ಯಮಂತ್ರಿಯವರು ಸೂಚಿಸುವ ಸಚಿವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿಯನ್ನು ರಚಿಸಬೇಕು. ಸಮಿತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಜಿಬಿಎ ಸಿದ್ಧಪಡಿಸಿದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು
- ಗ್ರೇಟರ್ ಬೆಂಗಳೂರು ಪ್ರದೇಶದ ಮೂಲಸೌಕರ್ಯ ಅಭಿವೃದ್ಧಿಗಾಗಿ ಮಹಾ ಯೋಜನೆ (ಮಾಸ್ಟರ್ ಪ್ಲಾನ್) ಹೊಂದಲು ಎಲ್ಲ ಪ್ರಾಧಿಕಾರಗಳ ವ್ಯಾಪ್ತಿಯನ್ನು ಒಳಗೊಂಡ ಕ್ರಿಯಾಯೋಜನೆಯನ್ನು ಜಿಬಿಎ ರೂಪಿಸಬೇಕು
- ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಕಾಮಗಾರಿಗಳಿಗೆ ಅನುದಾನಗಳನ್ನು ಜಿಬಿಎ ಪಡೆದುಕೊಂಡು, ಅದರಿಂದಲೇ ಸಾಂಸ್ಥಿಕ ಮತ್ತು ಆಡಳಿತಾತ್ಮಕ ವೆಚ್ಚಗಳಿಗೆ ಭರಿಸಿಕೊಳ್ಳಬಹುದು
- ವಾರ್ಷಿಕ ಆಯವ್ಯಯ ಅಂದಾಜನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಬೇಕು. ಅಗತ್ಯ ಯೋಜನೆಗಳಿಗೆ ಸಾಲ ಪಡೆಯಬಹುದು
- ನಗರ ಪಾಲಿಕೆಗಳ ನಿಧಿಗಳಿಂದ ಕೈಗೊಳ್ಳಲಾಗುವ ಪ್ರಮುಖ ಕಾಮಗಾರಿಗಳನ್ನೂ ಜಿಬಿಎಗೆ ವಹಿಸಿಕೊಡಬೇಕು. ಒಂದಕ್ಕಿಂತ ಹೆಚ್ಚು ಪಾಲಿಕೆಗಳ ವ್ಯಾಪ್ತಿಯ ಯೋಜನೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವೇ ನಿರ್ವಹಿಸಲಿದೆ. ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಗಳನ್ನು ರೂಪಿಸಿ, ಆರ್ಥಿಕ ಅಭಿವೃದ್ಧಿ ಏಜೆನ್ಸಿಗೆ ಅದನ್ನು ವಹಿಸಬಹುದು
- ಹವಾಮಾನ ಕ್ರಿಯಾ ಕೋಶವನ್ನು ರಚಿಸಿ, ಒಂದು ವರ್ಷದೊಳಗೆ ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು ತಗ್ಗಿಸಲು, ಕ್ರಿಯಾ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆಗಳ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಬೇಕು. ಇದಕ್ಕಾಗಿ ವಲಯ ತಜ್ಞರ ಸಮಿತಿಗಳನ್ನು ರಚಿಸಬಹುದು

#### ಸೀತಾರಾಮ್‌ಗೆ ಸ್ಥಾನ ಇಲ್ಲ

ವಿಧಾನ ಪರಿಷತ್ ಸದಸ್ಯರಾಗಿರುವ ಬೆಂಗಳೂರಿನ ನಿವಾಸಿಗಳಾದ ಎಂ.ಆರ್. ಸೀತಾರಾಮ್ ಸೇರಿದಂತೆ ಒಂಬತ್ತು ಮಂದಿಯನ್ನು ಜಿಬಿಎನಲ್ಲಿ ಪದನಿಮಿತ್ತ ಸದಸ್ಯರನ್ನಾಗಿ ನೇಮಕ ಮಾಡಿಲ್ಲ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಜಿಎ) ಪ್ರಕಾರ, ಅಧ್ಯಾಯನ 3ರ ಉಪ ಪ್ರಕರಣ 5ರಲ್ಲಿ ಜಿಬಿಎಗೆ ಯಾರೆಲ್ಲ ಸದಸ್ಯರಾಗಬೇಕು ಎಂದು ವಿವರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ವಾಸಿಸುವ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್‌ನ ಎಲ್ಲ ಸದಸ್ಯರು ಜಿಬಿಎ ಸದಸ್ಯರಾಗಿರಬೇಕು ಎಂದು ಹೇಳಲಾಗಿದೆ.

ವಿಧಾನ ಪರಿಷತ್ ಸದಸ್ಯರಾಗಿರುವ ಎಂ.ಆರ್. ಸೀತಾರಾಮ್, ಎಸ್.ಎಲ್. ಭೋಜೇಗೌಡ, ಬಿ. ಚಂದ್ರಶೇಖರ ಬಿ. ಪಾಟೀಲ, ಚಿದಾನಂದ್ ಎಂ. ಗೌಡ, ಮಧು ಜಿ. ಮಾದೇಗೌಡ, ರಾಮೋಜಿಗೌಡ, ಎಚ್.ಪಿ. ಸುಧಾಮದಾಸ್, ಡಿ.ಟಿ. ಶ್ರೀನಿವಾಸ್, ಉಮಾಶ್ರೀ ಅವರು ನಗರದಲ್ಲಿ ವಾಸವಿರುವುದು ವಿಧಾನ ಪರಿಷತ್‌ನ ಅಧಿಕೃತ ದಾಖಲೆಗಳಲ್ಲಿದೆ. ಆದರೆ, ಇವರನ್ನು ಜಿಬಿಎ ಸದಸ್ಯರನ್ನಾಗಿ ನೇಮಿಸಿಲ್ಲ. ವಿಧಾನ ಪರಿಷತ್‌ನ 20 ಸದಸ್ಯರು ಬೆಂಗಳೂರಿನಲ್ಲಿ ವಾಸ ಸ್ಥಳವನ್ನು ದಾಖಲಿಸಿದ್ದಾರೆ. ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಒಂಬತ್ತು ಮಂದಿಯನ್ನು ಮಾತ್ರ ಜಿಬಿಎ ಸದಸ್ಯರನ್ನಾಗಿ ನೇಮಿಸಲಾಗಿದೆ.

ಯಲಹಂಕ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಎರಡು ವಾರ್ಡ್‌ಗಳು ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರಕ್ಕೆ ಸೇರುತ್ತವೆ. ಆದರೂ ಅದರ ಸಂಸದ ಸುಧಾಕರ್ ಅವರನ್ನು ಜಿಬಿಎ ಸದಸ್ಯರನ್ನಾಗಿ ನೇಮಿಸಿಲ್ಲ.

#### ಜಿಬಿಎ ಸದಸ್ಯರು

**ಸಿದ್ದರಾಮಯ್ಯ**, ಮುಖ್ಯಮಂತ್ರಿ- ಅಧ್ಯಕ್ಷ

**ಡಿ.ಕೆ. ಶಿವಕುಮಾರ್**, ಬೆಂಗಳೂರು ನಗರಾಭಿವೃದ್ಧಿ ಸಚಿವ; ಉಪಾಧ್ಯಕ್ಷ

**ಮುಖ್ಯ ಆಯುಕ್ತ**, ಗ್ರೇಟರ್ ಬೆಂಗಳೂರು ಪ್ರಾಧಿಕಾರ- ಸದಸ್ಯ ಕಾರ್ಯದರ್ಶಿ

**ಪದನಿಮಿತ್ತ ಸದಸ್ಯರು (ಜನಪ್ರತಿನಿಧಿಗಳು):** ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವೆ; ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ; ರಾಜ್ಯದ ಆರು ಸಚಿವರು; ಲೋಕಸಭೆ ಹಾಗೂ ರಾಜ್ಯಸಭಾ ಸದಸ್ಯರು; ನಗರ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರದ ಶಾಸಕರು; 11 ಮಂದಿ ವಿಧಾನ ಪರಿಷತ್ ಸದಸ್ಯರು; ಐದು ನಗರ ಪಾಲಿಕೆಗಳ ಮೇಯರ್.

**ಪದನಿಮಿತ್ತ ಸದಸ್ಯರು (ಅಧಿಕಾರಿಗಳು):** ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ; ಆಯುಕ್ತ, ಬಿಡಿಎ; ಬೆಂಗಳೂರು ನಗರ ಪೊಲೀಸ್ ಕಮಿಷನರ್; ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಮೆಟ್ರೊ ರೈಲು ನಿಗಮ; ಮಹಾನಗರ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ; ಸಿಇಒ, ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ; ಅಧ್ಯಕ್ಷ, ಬೆಂಗಳೂರು ಜಲಮಂಡಳಿ; ಆಯುಕ್ತ, ನಗರ ಭೂ ಸಾರಿಗೆ ನಿರ್ದೇಶನಾಲಯ; ವ್ಯವಸ್ಥಾಪಕ ನಿರ್ದೇಶಕ, ಬಿಎಂಟಿಸಿ; ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ; ಐದು ನಗರ ಪಾಲಿಕೆಗಳ ಆಯುಕ್ತರು; ನಗರ ಜಿಲ್ಲಾಧಿಕಾರಿ; ನಿರ್ದೇಶಕ, ಅಗ್ನಿಶಾಮಕ ದಳ; ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಮುಖ್ಯ ಎಂಜಿನಿಯರ್, ಗ್ರೇಟರ್ ಬೆಂಗಳೂರು ಪ್ರಾಧಿಕಾರ.

#### ಡಿ.ಕೆ. ಶಿವಕುಮಾರ್ ಹೇಳಿದ್ದು...

- ಸೆಪ್ಟೆಂಬರ್ 2ಕ್ಕೆ ಐದು ನಗರ ಪಾಲಿಕೆಗಳ ಗಡಿಯ ಅಂತಿಮ ಅಧಿಸೂಚನೆ
- ಸೆಪ್ಟೆಂಬರ್ 3ರಿಂದ ವಾರ್ಡ್ ಮರುವಿಂಗಣೆ ಕಾರ್ಯ ಆರಂಭ
- ನವೆಂಬರ್ 1ರಂದು ವಾರ್ಡ್ ಗಡಿ ಅಂತಿಮ ಅಧಿಸೂಚನೆ
- ನವೆಂಬರ್ 2ರ ನಂತರ ವಾರ್ಡ್ ಮೀಸಲಾತಿ ಕರಡು ಅಧಿಸೂಚನೆ
- ಡಿಸೆಂಬರ್ 2ರ ನಂತರ ವಾರ್ಡ್ ಮೀಸಲಾತಿ ಅಂತಿಮ ಅಧಿಸೂಚನೆ

## ❖ ಹೆಚ್ಚುವರಿ ಸುಂಕ; ಇಂದು ಜಾರಿ

**ಸಂದರ್ಭ:** ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸುವ ಸಂಬಂಧ ಕರಡು ಅಧಿಸೂಚನೆಯನ್ನು ಅಮೆರಿಕ ಹೊರಡಿಸಿದೆ. ಡೊನಾಲ್ಡ್ ಟ್ರಂಪ್ ಆಡಳಿತದ ಈ ನಿರ್ಧಾರವು ಭಾರತದ ರಫ್ತುದಾರರ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ವಿಶ್ಲೇಷಿಸಲಾಗಿದೆ.

- ಕೆಲವೊಂದು ವಿನಾಯಿತಿಗಳನ್ನು ಹೊರತುಪಡಿಸಿದರೆ, ಅಮೆರಿಕದ ಮಾರುಕಟ್ಟೆ ಪ್ರವೇಶಿಸುವ ಭಾರತದ ಸರಕುಗಳ ಮೇಲಿನ ಒಟ್ಟು ಸುಂಕ ಈಗ ಶೇಕಡ 50ರಷ್ಟಾಗಿದೆ. ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕವು ಮೊದಲು ಶೇ 25ರಷ್ಟು ಸುಂಕ ವಿಧಿಸಿತ್ತು. ಇದು ಆಗಸ್ಟ್ 7ರಂದು ಜಾರಿಯಾಗಿತ್ತು.
- 'ಭಾರತದ ಸರಕುಗಳ ಮೇಲಿನ ಹೊಸ ಸುಂಕ ವ್ಯವಸ್ಥೆ ಆಗಸ್ಟ್ 27ರ ಮಧ್ಯರಾತ್ರಿ 12.01ರ (ಭಾರತೀಯ ಕಾಲಮಾನ ಬುಧವಾರ ಬೆಳಿಗ್ಗೆ 9.31) ಬಳಿಕ ಜಾರಿಗೆ ಬರಲಿದೆ' ಎಂದು ಅಮೆರಿಕದ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆಯು (ಕಸ್ಟಮ್ಸ್ ವಿಭಾಗ) ಹೊರಡಿಸಿದ ಆದೇಶದಲ್ಲಿ ತಿಳಿಸಿದೆ.
- 'ಅಮೆರಿಕಕ್ಕೆ ಕಳುಹಿಸಲಿಕ್ಕಾಗಿ ಆಗಸ್ಟ್ 27ರ ಮಧ್ಯರಾತ್ರಿ 12.01ಕ್ಕೂ ಮೊದಲು ಹಡಗುಗಳಿಗೆ ಲೋಡ್ ಮಾಡಿರುವ ಭಾರತದ ಸರಕುಗಳಿಗೆ ಹೆಚ್ಚುವರಿ ಸುಂಕದಿಂದ ವಿನಾಯಿತಿ ನೀಡಲಾಗುವುದು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

### ಶೇ 55ರಷ್ಟು ಸರಕುಗಳ ಮೇಲೆ ಪರಿಣಾಮ

- Iಭಾರತವು ಅಮೆರಿಕಕ್ಕೆ ರಫ್ತು ಮಾಡುವ ಒಟ್ಟು ಸರಕಿನಲ್ಲಿ ಶೇ 55ರಷ್ಟು ಸರಕುಗಳ ಮೇಲೆ ಹೆಚ್ಚುವರಿ ಸುಂಕ ಪರಿಣಾಮ ಬೀರಬಹುದು ಎಂದು ರಫ್ತುದಾರರ ಒಕ್ಕೂಟ ಅಂದಾಜಿಸಿದೆ
- I ಹಣಕಾಸು ಸಚಿವಾಲಯದ ಮೂಲಗಳ ಪ್ರಕಾರ, 48 ಬಿಲಿಯನ್ ಡಾಲರ್‌ಗೂ (₹4.20 ಲಕ್ಷ ಕೋಟಿ) ಹೆಚ್ಚಿನ ಮೊತ್ತದ ವ್ಯಾಪಾರದ ಮೇಲೆ ಪರಿಣಾಮ ಆಗಲಿದೆ
- Iಭಾರತವನ್ನು ಹೊರತುಪಡಿಸಿದರೆ ಅಮೆರಿಕದಿಂದ ಶೇ 50ರಷ್ಟು ಆಮದು ಸುಂಕ ಎದುರಿಸುತ್ತಿರುವ ದೇಶ ಬ್ರೆಜಿಲ್ ಮಾತ್ರ

**ಯಾವೆಲ್ಲಾ ಸರಕು?**

- ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುತ್ತಿರುವ ಜವಳಿ, ಸಿದ್ಧ ಉಡುಪು, ಮುತ್ತು/ಹರಳು, ಆಭರಣಗಳು, ಸೀಗಡಿ, ಚರ್ಮದ ಉತ್ಪನ್ನಗಳು, ಪಾದರಕ್ಷೆ, ಡೇರಿ ಉತ್ಪನ್ನಗಳು, ರಾಸಾಯನಿಕಗಳು ಹಾಗೂ ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಯಂತ್ರೋಪಕರಣಗಳ ಮೇಲೆ ಹೆಚ್ಚಿನ ಸುಂಕದ ಹೊರೆ ಬೀಳಲಿದೆ.
- ಔಷಧ, ತೈಲ ಉತ್ಪನ್ನಗಳು ಮತ್ತು ಎಲೆಕ್ಟ್ರಾನಿಕ್ ವಸ್ತುಗಳನ್ನು ಹೆಚ್ಚುವರಿ ಸುಂಕದ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

**ಭಾರತದ ಪ್ರತಿಸ್ಪರ್ಧಿಗಳಿಗೆ ಲಾಭ**

- ಹೆಚ್ಚುವರಿ ಸುಂಕ ಜಾರಿಯಾಗಿರುವುದಿಂದ ಅಮೆರಿಕದ ಜತೆ ದ್ವಿಪಕ್ಷೀಯ ವ್ಯಾಪಾರ ಸಂಬಂಧ ಹೊಂದಿರುವ ಭಾರತದ ಪ್ರತಿಸ್ಪರ್ಧಿ ದೇಶಗಳಿಗೆ ಲಾಭವಾಗಲಿದೆ.
- ಅಮೆರಿಕದ ಮಾರುಕಟ್ಟೆಯಲ್ಲಿ ಭಾರತದ ಪ್ರತಿಸ್ಪರ್ಧಿಗಳಾಗಿರುವ ಮ್ಯಾನ್ಮಾರ್ (ಶೇ 40), ಥಾಯ್ಲೆಂಡ್ ಮತ್ತು ಕಾಂಬೋಡಿಯ (ಶೇ 26), ಬಾಂಗ್ಲಾದೇಶ (ಶೇ 35), ಇಂಡೊನೇಷ್ಯಾ (ಶೇ 32), ಚೀನಾ ಮತ್ತು ಶ್ರೀಲಂಕಾ (ಶೇ 30), ಮಲೇಷ್ಯಾ (ಶೇ 25), ಫಿಲಿಪ್ಪೀನ್ಸ್ ಮತ್ತು ವಿಯೆಟ್ನಾಂ (ಶೇ 20) ದೇಶಗಳ ಸರಕುಗಳಿಗೆ ಕಡಿಮೆ ಸುಂಕ ವಿಧಿಸಲಾಗುತ್ತಿದೆ.

- ಭಾರತಕ್ಕೆ ವಿಧಿಸಿರುವ ಸುಂಕದ ಪ್ರಮಾಣ ಹೆಚ್ಚಾಗಿರುವುದರಿಂದ ಅಮೆರಿಕದಲ್ಲಿ ಭಾರತದ ಸರಕುಗಳ ಮಾರಾಟದ ಬೆಲೆ ಹೆಚ್ಚಾಗಲಿದೆ. ಇದರಿಂದ ಆ ವಸ್ತುಗಳಿಗೆ ಬೇಡಿಕೆ ಕಡಿಮೆ ಆಗಬಹುದು.
- ರಷ್ಯಾದಿಂದ ತೈಲ ಖರೀದಿಸುವ ವಿಚಾರವಾಗಿ ಅಮೆರಿಕದ ಬೆದರಿಕೆಗೆ ಭಾರತ ಮಣಿಯದ ಕಾರಣ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ವಿಧಿಸುವುದಾಗಿ ಟ್ರಂಪ್ ಘೋಷಿಸಿದ್ದರು. ಹೆಚ್ಚುವರಿ ಸುಂಕದ ಹೊರೆ ತಪ್ಪಿಸಲಿಕ್ಕಾಗಿ ಒಪ್ಪಂದ ಮಾಡಿಕೊಳ್ಳಲು ಭಾರತಕ್ಕೆ 21 ದಿನಗಳ ಕಾಲಾವಕಾಶ ನೀಡಲಾಗಿತ್ತು. ಆದರೆ, ಯಾವುದೇ ಒಪ್ಪಂದ ಏರ್ಪಡದೇ ಇರುವುದರಿಂದ ಹೆಚ್ಚುವರಿ ಸುಂಕ ಸೇರಿ ಶೇ 50ರಷ್ಟು ಸುಂಕ ಆಕರಣೆ ಜಾರಿಗೆ ಬಂದಿದೆ.
- ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಹೆಚ್ಚುವರಿ ಸುಂಕ ನ್ಯಾಯ ಸಮ್ಮತವಾಗಿದ್ದು, ಇದು 'ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರ' ಎಂದು ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವ್ರೊ ಈಚೆಗೆ ಸಮರ್ಥಿಸಿಕೊಂಡಿದ್ದರು. ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಭಾರತವು ರಷ್ಯಾಕ್ಕೆ ಪರೋಕ್ಷವಾಗಿ ಹಣಕಾಸು ಒದಗಿಸುತ್ತಿದೆ ಎಂದು ಅಮೆರಿಕದ ಹಣಕಾಸು ಇಲಾಖೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಆರೋಪಿಸಿದ್ದರು.
- ಉಕ್ರೇನ್–ರಷ್ಯಾ ಯುದ್ಧ ಆರಂಭವಾದ ಬಳಿಕ ಭಾರತವು ರಷ್ಯಾದಿಂದ ತೈಲ ಖರೀದಿ ಪ್ರಮಾಣವನ್ನು ಹೆಚ್ಚಿಸಿಕೊಂಡು ಲಾಭ ಗಳಿಸುತ್ತಿದೆ. ಭಾರತ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ತೈಲದಲ್ಲಿ ರಷ್ಯಾದ ಪಾಲು ಶೇ 42ರಷ್ಟಿದೆ. ಯುದ್ಧದ ಬಳಿಕ ತೈಲ ಆಮದು ಪ್ರಮಾಣ ಹೆಚ್ಚಿಸಿರುವುದನ್ನು ಒಪ್ಪಲಾ ಗದು ಎಂದು ಬೆಸೆಂಟ್ ಈ ತಿಂಗಳ ಆರಂಭದಲ್ಲಿ ಹೇಳಿದ್ದರು.
- ಅಮೆರಿಕದ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆ (ಕಸ್ಟಮ್ಸ್ ವಿಭಾಗ) ಹೊರಡಿಸಿರುವ ಕರಡು ಅಧಿಸೂಚನೆ ಕುರಿತು ಭಾರತದ ಹಣಕಾಸು ಸಚಿವಾಲಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 'ಅಮೆರಿಕವು ಹೆಚ್ಚುವರಿ ಸುಂಕ ವಿಧಿಸುವ ನಿರ್ಧಾರವನ್ನು ಮುಂದೂಡುವ ಬಗ್ಗೆ ಸರ್ಕಾರಕ್ಕೆ ಯಾವುದೇ ಭರವಸೆ ಇಲ್ಲ' ಎಂದು ಹಣಕಾಸು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- 'ಹೆಚ್ಚುವರಿ ಸುಂಕದಿಂದ ತೊಂದರೆಗೆ ಒಳಗಾಗುವ ರಫ್ತುದಾರರಿಗೆ ಹಣಕಾಸಿನ ನೆರವು ನೀಡಲಾಗುವುದು ಮತ್ತು ಚೀನಾ, ದಕ್ಷಿಣ ಅಮೆರಿಕ ಹಾಗೂ ಪಶ್ಚಿಮ ಏಷ್ಯಾ ಸೇರಿದಂತೆ ಪರ್ಯಾಯ ಮಾರುಕಟ್ಟೆಗಳತ್ತ ಗಮನ ಹರಿಸಲು ರಫ್ತುದಾರರನ್ನು ಪ್ರೋತ್ಸಾಹಿಸಲಾಗುತ್ತದೆ' ಎಂದಿದ್ದಾರೆ.
- ಅಮೆರಿಕದ ನಿರ್ಧಾರದಿಂದ ತೊಂದರೆಗೆ ಒಳಗಾಗಬಹುದಾದ ಕ್ಷೇತ್ರಗಳಿಗೆ ಬೆಂಬಲವಾಗಿ ನಿಲ್ಲಲು ಕ್ರಮ ಕೈಗೊಳ್ಳಲಾಗು ವುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದರು.

Dr. Rajkumar IAS/KAS Ac


- ಟ್ರಂಪ್ ಅವರು ಹೆಚ್ಚುವರಿ ಸುಂಕ ವಿಧಿಸುವ ನಿರ್ಧಾರ ಘೋಷಿಸಿದ ಮರುದಿನವೇ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದರು. 'ಭಾರತವು ತನ್ನ ರೈತರು, ಮೀನುಗಾರರು ಮತ್ತು ಹೈನುಗಾರರ ಹಿತಾಸಕ್ತಿಯೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ' ಎಂದಿದ್ದರು.

## ❖ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ


**ಸಂದರ್ಭ:** ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲಿ (ಬಿಬಿಎಂಪಿ) ಬೃಹತ್ ಯೋಜನೆಗಳು ಹಾಗೂ ರಚನೆ ಯಾಗಲಿರುವ ಐದು ನಗರ ಪಾಲಿಕೆಗಳಿಗೆ ಹಣಕಾಸು ಹಂಚಿಕೆ ಮಾಡುವ ಅಧಿಕಾರವುಳ್ಳ, 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವನ್ನು (ಜಿಬಿಎ) ರಚಿಸಿ, ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಬಿಎ ಅಧ್ಯಕ್ಷರಾಗಿದ್ದಾರೆ.

- ಬಿಬಿಎಂಪಿ ವ್ಯಾಪ್ತಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದು ಹೆಸರಿಸಿ, 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ'ಯನ್ನು 2025ರ ಮೇ 15ರಂದು ಜಾರಿ ಮಾಡಲಾಗಿತ್ತು. ಅಂದಿನಿಂದ ನಾಲ್ಕು ತಿಂಗಳಲ್ಲಿ ಜಿಬಿಎ ರಚನೆಯಾಗಬೇಕಿತ್ತು.
- ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜಿಬಿಎಗೆ ಉಪಾಧ್ಯಕ್ಷರಾಗಿದ್ದಾರೆ. ಬಿಬಿಎಂಪಿಯ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರಿಗೆ ಜಿಬಿಎ ಮುಖ್ಯ ಆಯುಕ್ತರ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದ್ದು, ಅವರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.
- ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್ ನ ಸದಸ್ಯರು ಜಿಬಿಎಗೆ ಪದನಿಮಿತ್ತ ಸದಸ್ಯರಾಗಿದ್ದಾರೆ. ಬಿಡಿಎ, ಬೆಸ್ಕಾಂ, ಜಲಮಂಡಳಿ, ನಗರ ಪೊಲೀಸ್, ಬಿಎಂಟಿಸಿ ಸೇರಿದಂತೆ ವಿವಿಧ ಇಲಾಖೆಗಳ ಮುಖ್ಯಸ್ಥರೂ ಸೇರಿ ಒಟ್ಟು 72 ಮಂದಿಯನ್ನು ಪದ ನಿಮಿತ್ತ ಸದಸ್ಯ ರನ್ನಾಗಿ ನೇಮಿಸಿ, ಆದೇಶಿಸಲಾಗಿದೆ.
- ಬಿಬಿಎಂಪಿ ವ್ಯಾಪ್ತಿಯಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಿ, ಜುಲೈ 19ರಂದು ಕರಡು ಅಧಿಸೂಚನೆ ಹೊರ ಡಿಸಲಾಗಿದ್ದು, ಸೆಪ್ಟೆಂಬರ್ 2ರಂದು ನಗರ ಪಾಲಿಕೆಗಳ ಗಡಿಯ ಅಂತಿಮ ಅಧಿಸೂಚನೆ ಹೊರಬೀಳಲಿದೆ. ನಂತರ ಬಿಬಿಎಂಪಿ ಅಸ್ತಿತ್ವ ಕಳೆದುಕೊಳ್ಳಲಿದೆ. ನಂತರ ವಾರ್ಡ್ ಪುನರ್ ವಿಂಗಡಣೆ ಕಾರ್ಯ ಆರಂಭವಾಗಲಿದೆ.



# 'ಹಸಿರು ಉಕ್ಕು' ಪರಿಸರಕ್ಕೆ ಉಸಿರು



• ವಿಕ್ರಮ ಜೋಶಿ

'ಇಷ್ಟೊಂದು ವಿಷಾನಿಲಗಳನ್ನು ಸೇವಿಸುತ್ತಿರುವ ಮೊದಲ ನಾಗರಿಕತೆ ನಮ್ಮದು' - ಎಂದು ಬಹಳ ಕಾಲದ ಹಿಂದೆಯೇ ಅಮೆರಿಕದ ಪ್ರಸಿದ್ಧ ಕಾರ್ಮಿಕರ ನಾಯಕ ವಾಲ್ಟರ್ ಯೂಟರ್ ಹೇಳಿದ್ದರು.

ಇಂದು ಮಾನವಕುಲದ ಸಂರಕ್ಷಣೆ ಆಗಬೇಕೆಂದರೆ ಮೊದಲು ಪರಿಸರದ ಸಂರಕ್ಷಣೆಯಾಗಬೇಕು. ಅದು ಕೇವಲ ಪರಿಸರ ದಿನಾಚರಣೆಯನ್ನು ಆಚರಿಸಿ ಮುಗಿಸುವುದರಲ್ಲಿಲ್ಲ. ನಮ್ಮ ಕೈಗಾರಿಕಾ ಪ್ರಕ್ರಿಯೆಗಳ ಸ್ವರೂಪವೇ ರೂಪಾಂತರಗೊಳ್ಳಬೇಕಿದೆ. ಆ ನಿಟ್ಟಿನಲ್ಲಿ 'ಹಸಿರು ಉಕ್ಕು' ಅಥವಾ 'ಗ್ರೀನ್ ಸ್ಟೀಲ್' ಎನ್ನುವುದು ಇತ್ತೀಚಿಗೆ ಕೈಗಾರಿಕಾ ಕ್ಷೇತ್ರದಲ್ಲಿನ 'ಬಜ್ ವರ್ಡ್'. ಇದೊಂದು ಪರಿಸರಪ್ರೇಮಿ ತಂತ್ರಜ್ಞಾನವಾಗಿರುವುದೇ ಇದಕ್ಕೆ ಕಾರಣ. ನಮ್ಮ ಬದುಕಿನಲ್ಲಿ ಗಾಳಿಯ ಅವಶ್ಯಕತೆ ಎಷ್ಟೋ ಅಷ್ಟೇ ಉಕ್ಕಿನದೂ ಇದೆ. ಮನೆಯ ಪಾತ್ರೆಯಿಂದ ಹಿಡಿದು ಓಡಾಡುವ ವಾಹನದ ತನಕ; ಬರೆಯುವ ಲೇಖನಿಯ ಮೊನೆಯಿಂದ ಶುರುವಾಗಿ ವಿಮಾನದ ಇಂಜಿನ್‌ವರೆಗೂ; ಮುಟ್ಟಿದಲ್ಲೆಲ್ಲಾ ನಮಗೆ ಸಿಗುವುದು ಉಕ್ಕಿನ ಉತ್ಪನ್ನಗಳು.

ಕ್ರಿ. ಪೂ. 1800ರಲ್ಲಿಯೇ ಕಬ್ಬಿಣ ಹಾಗೂ ಉಕ್ಕಿನ ಉತ್ಪನ್ನಗಳನ್ನು ಮನುಷ್ಯರು ಬಳಕೆ ಮಾಡುತ್ತಿದ್ದರು ಎಂಬುದಕ್ಕೆ ಈಗ ಸಾಕ್ಷಿಗಳು ಲಭಿಸಿವೆ. ಭಾರತದಲ್ಲೂ ಕ್ರಿ. ಪೂ. 500ನೆಯ ಶತಮಾನದಲ್ಲಿಯೇ ಕಬ್ಬಿಣದ ಅನೇಕ ರೂಪಗಳನ್ನು ಉತ್ಪಾದಿಸಿ, ಮಧ್ಯಪೂರ್ವ ದೇಶಗಳಿಗೆ ರಫ್ತು ಮಾಡುತ್ತಿದ್ದರು ಎಂಬುದನ್ನು ಇತಿಹಾಸದಲ್ಲಿ ಓದಬಹುದಾಗಿದೆ. ಆದರೆ ಆಧುನಿಕ ಯುಗದಲ್ಲಿ ಮೊತ್ತಮೊದಲ ಬಾರಿಗೆ ಉತ್ಕೃಷ್ಟ ಮಟ್ಟದ ಉಕ್ಕನ್ನು ತಯಾರಿಸಿದ್ದು ಹೆನ್ರಿ ಬೆಸ್ಸೆಮರ್, 1856ರಲ್ಲಿ. ಹೀಗಾಗಿ ಕಬ್ಬಿಣ ಹಾಗೂ ಉಕ್ಕಿಗೆ ನಾಲ್ಕು ಸಾವಿರ ವರ್ಷಗಳ ಇತಿಹಾಸವಿದ್ದರೂ ಇಂದು ನಾವು ಬಳಸುತ್ತಿರುವ ಉಕ್ಕಿನ ಪರಿಚಯವು ನಮಗಾಗಿದ್ದು ಕೇವಲ ಎರಡು ಶತಮಾನಗಳ ಹಿಂದಷ್ಟೇ. ಬೆಂಕಿ ಮತ್ತು ಚಕ್ರದ ನಂತರ ಆದ ಆವಿಷ್ಕಾರಗಳಲ್ಲಿ ಉಕ್ಕಿನ ಅವಿಷ್ಕಾರವೂ ಪ್ರಮುಖವಾದುದು. ಅಂದಿನಿಂದ ಇಂದಿನವರೆಗೆ ಈ ಜಗತ್ತು ಇಷ್ಟೊಂದು ಬೆಳೆಯಲು ಮುಖ್ಯ ಕಾರಣವೇ ಈ 'ಸ್ಟೀಲ್'. ಅಂದು ಪ್ರತಿ ವರ್ಷ ಸುಮಾರು ಹತ್ತು ಲಕ್ಷ ಟನ್ ಸ್ಟೀಲ್ ಉತ್ಪಾದನೆಯಾಗುತ್ತಿದ್ದರೆ, ಇಂದು ಪ್ರತಿವರ್ಷಕ್ಕೆ ಸುಮಾರು ಇನ್ನೂರು ಕೋಟಿ ಟನ್ ಸ್ಟೀಲ್ ಉತ್ಪಾದನೆಯಾಗುತ್ತದೆ. ಇದನ್ನು ಇನ್ನೊಂದು ಬಗೆಯಲ್ಲಿ ಹೇಳಬೇಕೆಂದರೆ, ಅಂದಿಗೆ ಹೋಲಿಸಿದರೆ ಇಂದು ಉಕ್ಕಿನ ಉತ್ಪಾದನೆ 20,00,000 ಪಟ್ಟು ಹೆಚ್ಚಿದೆ. ಕೈಗಾರಿಕಾ ಕ್ರಾಂತಿಯ ನಾಲ್ಕನೆಯ ಚರಣದಲ್ಲಿರುವ ಈ ಜಗತ್ತಿನಲ್ಲಿ ಆಗುತ್ತಿರುವ ಒಟ್ಟೂ ಇಂಗಾಲದ ಡೈ-ಆಕ್ಸೈಡ್ ಹೊರಸೂಸುವಿಕೆಯ ಶೇ. 10ರಷ್ಟು ಭಾಗವು ಉಕ್ಕಿನ ಉತ್ಪಾದನೆಯಿಂದಲೇ ಬರುತ್ತಿರುವುದು ಗಮನೀಯ ಅಂಶ. ಈ ಪರಿಸ ಹಾನಿ ಅನಿಲಗಳ ಹೊರಸೂಸುವಿಕೆಯನ್ನು ಕಡಿಮೆ ( ಶೇ. 90-95) ಮಾಡಬಲ್ಲ ಸಾಮರ್ಥ್ಯವನ್ನು ಹಸಿರು ಉಕ್ಕು ಹೊಂದಿದೆ!

ಉಕ್ಕಿನ ತಯಾರಿಕೆಯಲ್ಲಿ ಅತಿ ಹೆಚ್ಚು ಕಾರ್ಬನ್ ಡೈಆಕ್ಸೈಡ್ ಹೊರಸೂಸುವಿಕೆಗೆ ಕಾರಣ ಅಲ್ಲಿ ಬಳಕೆಯಾಗುವ 'ಬ್ಲಾಸ್ಟ್ ಫರ್ನೆಸ್' ಅಥವಾ ಊದುಕುಲುಮೆ ಮತ್ತು ಕಲ್ಲಿದ್ದಲಿನ ಕೋಕ್. ಹಸಿರು ಉಕ್ಕಿನಲ್ಲಿ ಕಲ್ಲಿದ್ದಲ್ಲು, ಊದು ಕುಲುಮೆಗಳ ಬದಲು ಜಲಜನಕ ಅಥವಾ ವಿದ್ಯುಚ್ಛಕ್ತಿಯನ್ನು ಬಳಸಲಾಗುತ್ತದೆ. ಹಸಿರು ಉಕ್ಕನ್ನು ನಾಲ್ಕು ಬಗೆಗಳಿಂದ ತಯಾರಿಸಬಹುದು:

## 1. ಜಲಜನಕದ ಬಳಕೆ

ಈ ಬಗೆಯಲ್ಲಿ ಉಕ್ಕನ್ನು ತಯಾರಿಸುವುದಕ್ಕೆ 'ಹೈಡ್ರೋಜನ್ ಬೇಸ್ಡ್ ಡೈರೆಕ್ಟ್ ರೆಡ್ಯೂಸ್ ಐರನ್' (H-DRI) ಎನ್ನುತ್ತಾರೆ. ಇದರಲ್ಲಿ ಅದಿರನ್ನು ಕುದಿಸಲು ಕಲ್ಲಿದ್ದಲಿನ ಬದಲು ಜಲಜನಕವನ್ನು ಇಂಧನವನ್ನಾಗಿ ಬಳಸಲಾಗುತ್ತದೆ. ಕಲ್ಲಿದ್ದಲಿನ ಉಪಯೋಗದಿಂದ ರಾಸಾಯನಿಕ ಕ್ರಿಯೆಯಲ್ಲಿ ಕಾರ್ಬನ್ ಡೈ-ಆಕ್ಸೈಡ್ ವಾತಾವರಣಕ್ಕೆ ಸೇರಿದರೆ ಜಲಜನಕದಿಂದಾಗಿ ನೀರು ($H_2O$) ಬಿಡುಗಡೆಯಾಗುತ್ತದೆ.

## 2. ನವೀಕರಿಸಬಹುದಾದ ಶಕ್ತಿಮೂಲದ ವಿದ್ಯುತ್ ಬಳಕೆ

ಕಬ್ಬಿಣದ ಅದಿರನ್ನು ಕರಗಿಸಲು ಊದುಕುಲುಮೆಯಲ್ಲಿ ಇಂಧನವಾಗಿ ಕಲ್ಲಿದ್ದಲನ್ನು ಬಳಸದೆ ವಿದ್ಯುಚ್ಛಕ್ತಿಯ ಕುಲುಮೆಯನ್ನು ಬಳಸುವುದು ಹಸಿರು ಉಕ್ಕಿನ ತಯಾರಿಕೆಯ ಇನ್ನೊಂದು ಬಗೆ. ವಿಶೇಷವಾಗಿ ಇಲ್ಲಿ ಉಪಯೋಗಿಸಲ್ಪಡುವ ವಿದ್ಯುಚ್ಛಕ್ತಿಯು ನವೀಕರಿಸಬಹುದಾದ ಮೂಲದಿಂದ ಬಂದಿರುತ್ತದೆ. ಉದಾಹರಣೆಗೆ, ಜಲವಿದ್ಯುತ್ ಸ್ಥಾವರ.

## 3. ಇಂಗಾಲದ ಗ್ರಹಣ–ಸಂಗ್ರಹಣ

'ಕಾರ್ಬನ್ ಕ್ಯಾಪ್ಚರ್' ಅಥವಾ 'ಸ್ಟೋರೇಜ್' (ಇಂಗಾಲ ಗ್ರಹಣ–ಸಂಗ್ರಹಣ) ಪ್ರಕ್ರಿಯೆಯಲ್ಲಿ ಉಕ್ಕಿನ ಕಾರ್ಖಾನೆಗಳು ಹೊರಸೂಸುವ ಇಂಗಾಲದ ಡೈ-ಆಕ್ಸೈಡನ್ನು ವಾತಾವರಣಕ್ಕೆ ಬಿಡದೆ, ಅದನ್ನು ಕಾರ್ಬನ್ ಕ್ಯಾಪ್ಚರ್ ತಂತ್ರಜ್ಞಾನದ ಮೂಲಕ ಸಂಗ್ರಹಿಸಲಾಗುತ್ತದೆ. ಹೀಗೆ ತಯಾರಿಸುವ ಉಕ್ಕಿಗೆ ಹಸಿರುಮಾನ್ಯತೆಯನ್ನು ನೀಡಲಾಗುತ್ತದೆ.

## 4. ಜೈವಿಕ ಪದಾರ್ಥಗಳ ಬಳಕೆ

ಕೊನೆಯ ಬಗೆಯೆಂದರೆ ಕಲ್ಲಿದ್ದಲಿನ ಕೋಕ್ ಬದಲು ಜೈವಿಕ ಪದಾರ್ಥಗಳನ್ನು ಕುಲುಮೆಯಲ್ಲಿ ಬಳಸುವುದು. ಇದರಿಂದ ಕೂಡ ಹಸಿರು ಉಕ್ಕನ್ನು ತಯಾರಿಸಲು ಸಾಧ್ಯ.



ಜಗತ್ತಿನಾದ್ಯಂತ ಹಸಿರು ಉಕ್ಕಿನ ಉತ್ಪಾದನೆಗೆ ತುಂಬಾ ಒತ್ತು ನೀಡಲಾಗುತ್ತಿದೆ. ಭಾರತದ ಉಕ್ಕಿನ ಕಂಪನಿಗಳಾದ ಟಾಟಾ ಸ್ಟೀಲ್, ಜೆಎಸ್‌ಡಬ್ಲ್ಯು ಸ್ಟೀಲ್; ಯುರೋಪಿನ ಅರ್ಸೆಲ್ ಮಿತ್ತಲ್ ಹಾಗೂ ಇನ್ನಿತರೆ ಉಕ್ಕಿನ ಕಂಪನಿಗಳು; ಮಧ್ಯಪೂರ್ವ ದೇಶಗಳಲ್ಲಿ ಕೂಡ ಹಸಿರು ಉಕ್ಕಿನ ಉತ್ಪಾದನೆಯು ಮುನ್ನಡೆ ಪಡೆದಿದೆ. ಚೀನಾವು ಜಗತ್ತಿನಲ್ಲಿ ಅತಿ ಹೆಚ್ಚು ಉಕ್ಕನ್ನು ತಯಾರಿಸುವ ದೇಶವಾಗಿದೆ. ಎಲ್ಲಾ ದೇಶಗಳು ಸೇರಿ ತಯಾರಿಸುವುದಕ್ಕಿಂತ ಹೆಚ್ಚು ಉಕ್ಕನ್ನು ಕೇವಲ ಚೀನಾ ಒಂದೇ ತಯಾರಿಸುತ್ತದೆ. ಅವರೂ ನಿಧನವಾಗಿ ಹಸಿರು ತಂತ್ರಜ್ಞಾನದ ಕಡೆಗೆ ವಾಲುತ್ತಿದ್ದಾರೆ. ಆದರೆ ಹಸಿರು ಉಕ್ಕಿನ ತಯಾರಿಕೆಯು ಮುಖ್ಯವಾಹಿನಿಯನ್ನು ಪಡೆಯಲು ಇನ್ನೂ ತನಕ ಸಾಧ್ಯವಾಗದಿರಲು ಮುಖ್ಯಕಾರಣಗಳೆಂದರೆ ಇದು ಸಾಧಾರಣ ಉಕ್ಕಿಗಿಂತ ಮೂರು ಪಟ್ಟು ದುಬಾರಿ, ಎಲ್ಲ ಕಡೆಯೂ ನವೀಕರಿಸಬಹುದಾದ ಶಕ್ತಿಯಿಂದ ತಯಾರಿಸಿದ ವಿದ್ಯುಚ್ಛಕ್ತಿಯ ಲಭ್ಯವಿಲ್ಲ; ಜಲಜನಕದ ಸರಬರಾಜಿಗೆ ಇನ್ನೂ ಮೂಲಭೂತ ಸೌಕರ್ಯಗಳು ಪ್ರಬುದ್ಧವಾಗಿಲ್ಲ. ಅಂತೆಯೇ ಇಂಗಾಲದ ಸೆರೆಹಿಡಿಯುವಿಕೆಯು ಇನ್ನೂ ನವಜಾತ ತಂತ್ರಜ್ಞಾನ. ಇವೆಲ್ಲ ಕಾರಣಗಳು ಹಸಿರು ಉಕ್ಕು ಪರಿಸರದ ಸುಸ್ಥಿತಿಗೆ ಅನುಕೂಲವಾಗಿದ್ದರೂ ಸಂಪೂರ್ಣವಾಗಿ ಅದರ ಮೇಲೆಯೇ ಅವಲಂಬಿತವಾಗಲು ಸಾಧ್ಯವಾಗುತ್ತಿಲ್ಲ. ❖

## ❖ ಮಿಗ್-21 ವಿಮಾನ



# ಮಿಗ್–21 ಅವಿಸ್ಮರಣೀಯ ಅಧ್ಯಾಯಕ್ಕೆ ತೆರೆ

ಭಾರತದ ಕೀರ್ತಿಯನ್ನು ಬಾನೆತ್ತರದಲ್ಲಿ ಹಾರಿಸಿದ, ಸೀಮಿತ ತಂತ್ರಜ್ಞಾನ ಲಭ್ಯತೆಯ ಸಂದರ್ಭದಲ್ಲೂ ದೇಶದ ವಾಯುಸೇನೆಯ ಸಾಮರ್ಥ್ಯವನ್ನು ಜಗತ್ತಿಗೆ ಸಾರಿದ ಮಿಗ್–21 ಯುದ್ಧವಿಮಾನ ಇತಿಹಾಸದ ಪುಟ ಸೇರಿದೆ. ಇದರ ಬಗ್ಗೆ ಅತೀವ ಹೆಮ್ಮೆ ಹೊಂದಿರುವ ಭಾರತೀಯ ವಾಯುಸೇನೆಯು ಚಂಡೀಗಢದಲ್ಲಿ ಸೆ.26ರಂದು ಈ ಯುದ್ಧವಿಮಾನಕ್ಕೆ ಬೀಳ್ಕೊಡುಗೆ ಸಮಾರಂಭವನ್ನೂ ಆಯೋಜಿಸಿದೆ. ಈ ವಿಮಾನವು 1965 ಮತ್ತು 1971ರ ಭಾರತ–ಪಾಕಿಸ್ತಾನ ಯುದ್ಧಗಳು, 1999ರ ಕಾರ್ಗಿಲ್ ಯುದ್ಧ ಹಾಗೂ 2019ರ ಬಾಲಾಕೋಟ್ ನಿರ್ದಿಷ್ಟ ದಾಳಿಯಲ್ಲಿ ಮುಖ್ಯ ಪಾತ್ರ ವಹಿಸಿತ್ತು. ರಷ್ಯಾದಿಂದ ಖರೀದಿ ಮಾಡಲಾಗಿದ್ದ ಮಿಗ್–21, ಭಾರತದ ವಾಯುಸೇನೆಯ ಮುಖ್ಯ ಭಾಗವಾಗಿ, ಪೈಲಟ್‌ಗಳ ನೆಚ್ಚಿನ ವಿಮಾನವಾಗಿ, ವಾಯುಸೇನೆಯಲ್ಲಿ 62 ವರ್ಷಗಳ ಅವಿಸ್ಮರಣೀಯ ಅಧ್ಯಾಯವನ್ನೇ ಬರೆದಿದೆ

ಪ್ರಜಾವಾಣಿ ವಾರ್ತೆ

### ಆರು ದಶಕ ದೇಶದ ಪರ ಸೆಣಸಿದ 'ಸೈನಿಕ'

ಆಗಸ್ಟ್ 25ರಂದು ಬಿಕಾನೇರ್‌ನ ನಾಲ್ ವಾಯು ನೆಲೆಯಲ್ಲಿ ಮಿಗ್–21 ಗರ್ಜಿಸುತ್ತಾ ಆಗಸಕ್ಕೇರಿತು. ಈ ಯುದ್ಧವಿಮಾನದ ಕೊನೆಯ ಹಾರಾಟ ಅದು. 'ಲವ್ ಆ್ಯಂಡ್ ವಾರ್' ಹಿಂದಿ ಚಿತ್ರದ ಚಿತ್ರೀಕರಣದ ಭಾಗವಾಗಿ ಆಗಸದಲ್ಲಿ ಹಾರಿದ ಮಿಗ್–21, ಚಿತ್ರದ ಕಥೆಯಲ್ಲಿ ಮುಖ್ಯ ಭಾಗವೂ ಹೌದು. ಆದರೆ, ವಾಸ್ತವದಲ್ಲಿ, ಮಿಗ್–21 ಇನ್ನು ನೆನಪು ಮಾತ್ರ. ಆರು ದಶಕ ಭಾರತೀಯ ವಾಯುಸೇನೆಯ ಮುಖ್ಯ ಅಸ್ತ್ರವಾಗಿದ್ದ, ಬಾನಿನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ ದೇಶದ ಹೆಮ್ಮೆಗೆ ಕಾರಣವಾದ ದೇಶದ ಮೊದಲ ಸೂಪರ್‌ಸಾನಿಕ್ ಯುದ್ಧ ವಿಮಾನ ಇದು; ಅಪ್ರಸ್ತುತವಾಗಿರುವ ತಂತ್ರಜ್ಞಾನ, ಹೆಚ್ಚುತ್ತಿರುವ ನಿರ್ವಹಣಾ ವೆಚ್ಚ ಹಾಗೂ ರಫೇಲ್, ತೇಜಸ್‌ನಂಥ ಅತ್ಯಾಧುನಿಕ ಯುದ್ಧವಿಮಾನಗಳ ಭರಾಟೆಯಲ್ಲಿ ಮರೆಗೆ ಸರಿದಿದೆ.

ಮಿಕೊಯಾನ್ ಗುರೊವಿಚ್–21 ಅಲಿಯಾಸ್ ಮಿಗ್–21 ರಷ್ಯಾ ನಿರ್ಮಿತ ಮೊದಲ ಆಧುನಿಕ, ಎರಡನೇ ತಲೆಮಾರಿನ ಆಕರ್ಷಕ ವಿನ್ಯಾಸದ ಯುದ್ಧವಿಮಾನ. ಇದರ ಮೊದಲ ಆವೃತ್ತಿ ಮೊದಲ ಬಾರಿಗೆ ಕಾರ್ಯಾಚರಣೆ ಆರಂಭಿಸಿದ್ದು 1960ರಲ್ಲಿ. 1963ರಲ್ಲಿ ಭಾರತೀಯ ವಾಯುಪಡೆ ಸೇರಿ, ಅದರ ಪ್ರಮುಖ ಅಸ್ತ್ರವಾಯಿತು. ಭಾರತವು ನಡೆಸಿದ ಪ್ರತಿ ಯುದ್ಧದಲ್ಲಿಯೂ ಇದರದ್ದು ಪ್ರಮುಖ ಪಾತ್ರವಾಗಿತ್ತು. 1971ರ ಡಿ.14ರಂದು ಢಾಕಾದಲ್ಲಿ ರಾಜ್ಯಪಾಲರ ಮನೆಯ ಮೇಲೆ ನಡೆಸಿದ ದಾಳಿ ನಿರ್ಣಾಯಕವಾಗಿತ್ತು. ಅದರಿಂದ ಯುದ್ಧವು ತಿರುವು ಪಡೆದು, ಪಾಕ್ ವಿರುದ್ಧ ಭಾರತ ಗೆಲುವು ಸಾಧಿಸಿತ್ತು. 2019ರ ಬಾಲಾಕೋಟ್ ವಾಯುದಾಳಿಯ ಸಂದರ್ಭದಲ್ಲಿ ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್ ಇದ್ದ ಮಿಗ್–21 ವಿಮಾನ ಪತನ ಹೊಂದುವುದಕ್ಕೂ ಮುನ್ನ ಪಾಕ್‌ನ ಅತ್ಯಂತ ಶಕ್ತಿಶಾಲಿ ಯುದ್ಧವಿಮಾನ, ಅಮೆರಿಕ ನಿರ್ಮಿತ ಎಫ್–16 ಅನ್ನು ಹೊಡೆದುರುಳಿಸಿತ್ತು.

ಅತ್ಯಂತ ದೀರ್ಘಾವಧಿಗೆ ವಾಯುಪಡೆಯ ಭಾಗವಾಗಿದ್ದ ಈ ವಿಮಾನ ಪೈಲಟ್‌ಗಳ ತರಬೇತಿಗೂ ಬಳಕೆಯಾಗುತ್ತಿತ್ತು. ತನ್ನ ವೇಗ, ಸರಳತೆ, ಲವಲವಿಕೆಯಿಂದ 'ವರ್ಕ್‌ಹಾರ್ಸ್' ಎಂದು ಹೆಸರು ಪಡೆದಿದ್ದ ಈ ವಿಮಾನವು ಅಪಘಾತಗಳಿಗೆ, ದುರಸ್ತಿಗೆ, ಪೈಲಟ್‌ಗಳು, ನಾಗರಿಕರ ಸಾವಿಗೆ ಕಾರಣವಾಗಿ 'ಹಾರಾಡುವ ಶವಪೆಟ್ಟಿಗೆ' ಎನ್ನುವ ಅಪಖ್ಯಾತಿಗೂ ಗುರಿಯಾಗಿತ್ತು. ಹಾರಾಟ ನಿಲ್ಲಿಸಿದರೂ ಮಿಗ್–21 ತನ್ನ ಸಾಮರ್ಥ್ಯ, ಸಾಧನೆಯ ಮೂಲಕ ಸೇನಾ ಸಿಬ್ಬಂದಿಯೂ ಸೇರಿದಂತೆ ದೇಶದ ಜನರ ಮನಸ್ಸಿನಲ್ಲಿ ಚಿರಂತನವಾಗಿ ಉಳಿಯಲಿದೆ.

ಸೆ.26ರಂದು ಚಂಡೀಗಢದಲ್ಲಿ ಅಧಿಕೃತ ವಿದಾಯ

ಭಾರತೀಯ ವಾಯುಪಡೆಯ (ಐಎಎಫ್) ಮೊದಲ ಸೂಪರ್‌ಸಾನಿಕ್ (ಶಬ್ದದ ವೇಗಕ್ಕಿಂತಲೂ ಹೆಚ್ಚು ವೇಗದಲ್ಲಿ ಸಾಗುವ) ಯುದ್ಧ ವಿಮಾನ

- **1963** ಭಾರತೀಯ ವಾಯುಪಡೆಗೆ ಸೇರ್ಪಡೆಯಾದ ವರ್ಷ
- **874** ವಾಯುಪಡೆ ಖರೀದಿಸಿರುವ ಮಿಗ್–21 ವಿಮಾನಗಳು
- **579** ಎಚ್‌ಎಎಲ್ ತಯಾರಿಸಿದ್ದ ವಿಮಾನಗಳು
- **2,175** ಕಿ.ಮೀ/ಗಂಟೆ ಮಿಗ್–21 ವಿಮಾನದ ಗರಿಷ್ಠ ವೇಗ
- **58** ಸಾವಿರ ಅಡಿ ಹಾರಾಟದ ಗರಿಷ್ಠ ಎತ್ತರ
- **370** ಕಿ.ಮೀ ವಿಮಾನ ಹಾರಬಹುದಾದ ಗರಿಷ್ಠ ದೂರ

ಒಂದು ಎಂಜಿನ್ ಸಾಮರ್ಥ್ಯದ, ಟುಮಾನ್‌ಸ್ಕೀ ಆರ್ 25–300 ಟರ್ಬೋಜೆಟ್ ಎಂಜಿನ್ ಹೊಂದಿರುವ ಮಿಗ್–21 ಯುದ್ಧವಿಮಾನವನ್ನು ಹಲವು ಬಾರಿ ಮೇಲ್ದರ್ಜೆಗೆ ಏರಿಸಲಾಗಿದೆ

- **1 ಅಥವಾ 2** ಆಸನ (ಪೈಲಟ್) ಸಾಮರ್ಥ್ಯ (ಮಾದರಿಯನ್ನು ಅವಲಂಬಿಸಿ)
- **14.7** ಮೀಟರ್ ಉದ್ದ
- **7.15** ಮೀಟರ್ ಅಗಲ (ಎರಡೂ ರೆಕ್ಕೆಗಳ ನಡುವಿನ ಅಂತರ)
- **4.1** ಮೀಟರ್ ಎತ್ತರ
- **10,400** ಕೆ.ಜಿ ಹೊರುವ ಗರಿಷ್ಠ ಭಾರ

**ಎರಡು ಸ್ಕ್ವಾಡ್ರನ್**
ಸದ್ಯ ವಾಯುಪಡೆಯ ಬಳಿ ಎರಡು ಸ್ಕ್ವಾಡ್ರನ್‌ಗಳಿವೆ. 'ನಂ.23 ಪ್ಯಾಂಥರ್ಸ್' ಮತ್ತು ನಂ.3 'ಕೋಬ್ರಾಸ್' (ಒಂದು ಸ್ಕ್ವಾಡ್ರನ್‌ನಲ್ಲಿ 16 ಇಲ್ಲವೇ 18 ಯುದ್ಧವಿಮಾನಗಳು ಇರುತ್ತವೆ).

**ಪ್ರಮುಖ ಪಾತ್ರ**
- 1965ರ ಭಾರತ–ಪಾಕಿಸ್ತಾನ ಯುದ್ಧ
- 1971ರ ಭಾರತ–ಪಾಕಿಸ್ತಾನ ಯುದ್ಧ
- 1999ರ ಕಾರ್ಗಿಲ್ ಯುದ್ಧ
- 2019ರ ಬಾಲಾಕೋಟ್ ವಾಯುದಾಳಿ

ಮಿಗ್–21 ನಿವೃತ್ತಿಯಿಂದ ತೆರವಾಗುವ ಜಾಗವನ್ನು ದೇಶಿ ನಿರ್ಮಿತ ತೇಜಸ್ ಎಲ್‌ಸಿಎ ಎಂಕೆ–1ಎ ತುಂಬಲಿವೆ

**ಸಾಮರ್ಥ್ಯ** • ಶತ್ರುಗಳ ಯುದ್ಧವಿಮಾನಗಳ ಧ್ವಂಸ • ಆಗಸದಿಂದ ಆಗಸಕ್ಕೆ ಕ್ಷಿಪಣಿ ದಾಳಿ • ಆಗಸದಿಂದ ನೆಲಕ್ಕೆ ಕ್ಷಿಪಣಿ ದಾಳಿ • ಗುಂಡಿನ ಮಳೆಗರೆಯುವ ಸಾಮರ್ಥ್ಯ

### ಐಎಎಫ್ ಸಾಮರ್ಥ್ಯ ಕುಂಠಿತ

ಮಿಗ್–21 ವಿಮಾನಗಳ ನಿವೃತ್ತಿಯಿಂದಾಗಿ ವಾಯುಪಡೆಯ ಸಾಮರ್ಥ್ಯ ಕುಂಠಿತಗೊಂಡಿದೆ. ಸದ್ಯ ವಾಯುಪಡೆಯ ಬಳಿ ಇರುವ ಜಾಗ್ವಾರ್, ಮಿರಾಜ್–2000 ಮತ್ತು ಮಿಗ್–29 ಯುದ್ಧವಿಮಾನಗಳು ಕೂಡ ಹಳೆಯದಾಗುತ್ತಾ ಬಂದಿದ್ದು, ಈ ದಶಕದ ಕೊನೆಯ ಹೊತ್ತಿಗೆ ಸೇವೆಯಿಂದ ಒಂದೊಂದೇ ನಿವೃತ್ತಿ ಹೊಂದಲಿವೆ. ವಾಯುಪಡೆಯು ಹೊಸ ವಿಮಾನಗಳನ್ನು ಖರೀದಿಸದೇ ಇದ್ದರೆ ಸಾಮರ್ಥ್ಯ ಇನ್ನಷ್ಟು ಕುಗ್ಗಲಿದೆ.

ರಕ್ಷಣಾ ಸಚಿವಾಲಯವು 83 ತೇಜಸ್ ಎಂಕೆ1ಎ ಯುದ್ಧವಿಮಾನ ಖರೀದಿಗಾಗಿ ಎಚ್‌ಎಎಲ್ ಜೊತೆ ₹48 ಸಾವಿರ ಕೋಟಿಯ ಒಪ್ಪಂದ ಮಾಡಿಕೊಂಡಿತ್ತು. 2024ರ ಮಾರ್ಚ್‌ನಿಂದಲೇ ತೇಜಸ್ ವಿಮಾನಗಳನ್ನು ವಾಯುಪಡೆಗೆ ಹಸ್ತಾಂತರಿಸಲು ಆರಂಭಿಸಬೇಕಿತ್ತು. ಆದರೆ, ಎಚ್‌ಎಎಲ್ ಈವರೆಗೆ ಒಂದು ವಿಮಾನವನ್ನೂ ಹಸ್ತಾಂತರಿಸಿಲ್ಲ. 2021ರ ಆಗಸ್ಟ್‌ನಲ್ಲಿ ಎಚ್‌ಎಎಲ್ 99 ಎಫ್–404 ಎಂಜಿನ್‌ಗಳ ಖರೀದಿಗಾಗಿ ಜಿಇ ಏರೋಸ್ಪೇಸ್ ಕಂಪನಿಯೊಂದಿಗೆ ₹5,375 ಕೋಟಿ ಒಪ್ಪಂದ ಮಾಡಿಕೊಂಡಿತ್ತು. ಆದರೆ, ಒಂದೂವರೆ ವರ್ಷ ಎಂಜಿನ್ ಪೂರೈಕೆ ಆಗಿರಲಿಲ್ಲ. ಮೊದಲ ಎಂಜಿನ್ ಈ ವರ್ಷದ ಏಪ್ರಿಲ್‌ನಲ್ಲಿ ಬಂದಿದೆ.

**ಭಾರತೀಯ ವಾಯುಪಡೆಯ ಸದ್ಯದ ಸ್ಥಿತಿಗತಿ**
- **42** ಮಂಜೂರಾಗಿರುವ ಯುದ್ಧ ವಿಮಾನಗಳ ಸ್ಕ್ವಾಡ್ರನ್‌ಗಳು
- **31** ಈವರೆಗೆ ಇದ್ದ ಸ್ಕ್ವಾಡ್ರನ್‌ಗಳು
- **29** ಮಿಗ್–21 ನಿವೃತ್ತಿ ನಂತರ ಉಳಿಯುವ ಸ್ಕ್ವಾಡ್ರನ್‌ಗಳು

**ಯಾವ ವಿಮಾನ, ಎಷ್ಟು ಸ್ಕ್ವಾಡ್ರನ್?**

| ಸುಖೋಯ್–30ಎಂಕೆಐ | ಜಾಗ್ವಾರ್ | ಮಿರಾಜ್ 2000 | ಮಿಗ್–29 | ತೇಜಸ್ ಎಂಕೆ–1ಎ | ರಫೇಲ್ |
|---|---|---|---|---|---|
| 13 | 6 | 3 | 3 | 2 | 2 |

**ಹಾರಾಡುವ ಶವಪೆಟ್ಟಿಗೆ**
ಮಿಗ್–21 ವಿಮಾನವು 'ಹಾರಾಡುವ ಶವಪೆಟ್ಟಿಗೆ' ಎಂಬ ಅಪಖ್ಯಾತಿಯನ್ನೂ ಹೊಂದಿದೆ. ವಿಮಾನವು ಪದೇ ಪದೇ ಪತನಗೊಂಡು ಪೈಲಟ್‌ಗಳು ಹಾಗೂ ನಾಗರಿಕರು ಸಾವಿಗೀಡಾಗುತ್ತಿದ್ದುದು ಇದಕ್ಕೆ ಕಾರಣ. ಈವರೆಗೆ 400ಕ್ಕೂ ಹೆಚ್ಚು ವಿಮಾನಗಳು ಅಪಘಾತಕ್ಕೀಡಾಗಿದ್ದು, 200 ಪೈಲಟ್‌ಗಳು ಮತ್ತು 60 ನಾಗರಿಕರು ಮೃತಪಟ್ಟಿದ್ದಾರೆ.

**'ಮರೆಯಲಾಗದ ಆತ್ಮೀಯತೆ'**
ಹಲವು ವಾಯುಸೇನಾ ಅಧಿಕಾರಿಗಳು ಮಿಗ್–21 ಹಾರಿಸಿದ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡು, ಅದರ ಸಾಮರ್ಥ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಇಂದು ಪೈಲಟ್‌ಗಳು ಹೆಚ್ಚು ಸುರಕ್ಷಿತವಾದ, ನಾಜೂಕಾದ ಮತ್ತು ಮುಂದುವರಿದ ತಂತ್ರಜ್ಞಾನದ ಯುದ್ಧವಿಮಾನಗಳನ್ನು ಹಾರಿಸುತ್ತಿದ್ದಾರೆ. ಆದರೆ ಒರಟು ಎಂದು ಕರೆಯಬಹುದಾಗಿದ್ದ, ಸಣ್ಣ ಲೋಪಕ್ಕೂ ಅವಕಾಶ ಇಲ್ಲದ ವಿಮಾನದೊಂದಿಗೆ ನಾವು ಹೊಂದಿದ್ದ ಆತ್ಮೀಯತೆ ಎಂತಹದ್ದು ಎನ್ನುವುದನ್ನು ಇಂದಿನವರು ಎಂದಿಗೂ ಅರಿಯಲಾರರು' ಎಂದು ನಿವೃತ್ತ ಗ್ರೂಪ್ ಕ್ಯಾಪ್ಟನ್ ಅನುಪಮ್ ಬ್ಯಾನರ್ಜಿ ತಮ್ಮ ಅನುಭವ ದಾಖಲಿಸಿದ್ದಾರೆ.

ರಾಜಸ್ಥಾನದ ಬಿಕಾನೇರ್‌ನ ನಾಲ್ ವಾಯುನೆಲೆಯಲ್ಲಿ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತಿ ಸಿಂಗ್ ಅವರು ಆಗಸ್ಟ್ 19ರಂದು ಮಿಗ್21 ವಿಮಾನವನ್ನು ಕೊನೆಯ ಬಾರಿಗೆ ಹಾರಿಸಿದ್ದರು —ಪಿಟಿಐ ಚಿತ್ರ

## ❖ 'ಕೋರ್ಟ್ ಅಂಕಿತ ಹಾಕುವಂತಿಲ್ಲ'

**<u>ಸಂದರ್ಭ:</u>** 'ವಿಧಾನಸಭೆಯಲ್ಲಿ ಅಂಗೀಕಾರಗೊಂಡಿರುವ ಯಾವುದೇ ಮಸೂದೆಯನ್ನು ರಾಜ್ಯಪಾಲರು ತಡೆ ಹಿಡಿಯಬಹುದು. ರಾಜ್ಯಪಾಲರಿಗೆ ಇರುವ ಮಸೂದೆಗಳನ್ನು ತಡೆಹಿಡಿಯುವ ಅಧಿಕಾರವನ್ನು ಮರುಪರಿಶೀಲನೆಗೆ ಒಳಪಡಿಸುವುದು ನ್ಯಾಯಾಂಗದ ವ್ಯಾಪ್ತಿಗೆ ಬರುವುದಿಲ್ಲ' ಎಂದು ಹಿರಿಯ ವಕೀಲ ಹರೀಶ್ ಸಾಳ್ವೆ ಪ್ರತಿಪಾದಿಸಿದರು.

- 'ಅಲ್ಲದೇ, ನ್ಯಾಯಾಲಯವು ಯಾವುದೇ ಒಂದು ಶಾಸನಕ್ಕೆ ಅಂಕಿತ ಹಾಕುವಂತಿಲ್ಲ' ಎಂದೂ ಹೇಳಿದ್ದಾರೆ.
- ಮಹಾರಾಷ್ಟ್ರ ಸರ್ಕಾರ ಪರ ಹಾಜರಿದ್ದ ಸಾಳ್ವೆ, ರಾಷ್ಟ್ರಪತಿ ಮತ್ತು ರಾಜ್ಯಪಾಲರ ಅಧಿಕಾರಗಳ ಕುರಿತು ದೀರ್ಘ ವಾದ ಮಂಡಿಸಿದರು.
- ಬಿಜೆಪಿ ಆಡಳಿತವಿರುವ ರಾಜ್ಯಗಳ ಪರ ವಾದ ಮಂಡಿಸಿದ ವಕೀಲರ ಪ್ರತಿಪಾದನೆಯೂ ಇದೇ ಆಗಿತ್ತು. 'ನ್ಯಾಯಾಂಗವು ಪ್ರತಿಯೊಂದು ಸಮಸ್ಯೆಗೂ ಪರಿಹಾರ ಒದಗಿಸುವ ಔಷಧ ಆಗಲು ಸಾಧ್ಯ ಇಲ್ಲ' ಎಂದೂ ಈ ರಾಜ್ಯಗಳ ಪರ ವಕೀಲರು ಹೇಳಿದರು.

- ವಿಧಾನಸಭೆಗಳಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ರಾಜ್ಯಪಾಲರು ಮತ್ತು ರಾಷ್ಟ್ರಪತಿಗೆ ನ್ಯಾಯಾಲಯ ಗಡುವು ನಿಗದಿ ಮಾಡಬಹುದೇ ಎಂಬ ಬಗ್ಗೆ, ರಾಷ್ಟ್ರಪತಿ ಸಲಹೆ ಕೇಳಿರುವ ಕುರಿತ ವಿಚಾರಣೆ ವೇಳೆ, ಸಾಳ್ವೆ ಈ ಮಾತು ಹೇಳಿದ್ದಾರೆ.
- ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯ ಮೂರ್ತಿಗಳಾದ ಸೂರ್ಯಕಾಂತ, ವಿಕ್ರಮನಾಥ್, ಪಿ.ಎಸ್.ನರಸಿಂಹ ಮತ್ತು ಎ.ಎಸ್.ಚಂದೂರ್‌ಕರ್ ಅವರು ಇದ್ದ ನ್ಯಾಯಪೀಠ ವಿಚಾರಣೆ ನಡೆಸಿತು.
- 'ಮಸೂದೆಯೊಂದನ್ನು ತಡೆಹಿಡಿಯಲು ರಾಜ್ಯಪಾಲರಿಗೆ ಅಧಿಕಾರ ಇದೆ ಎಂಬುದನ್ನು ಒಪ್ಪಿಕೊಂಡ ಮೇಲೆ, ಸಾಂವಿಧಾನಿಕ ಹುದ್ದೆಯಲ್ಲಿರುವ ಅವರು ಹಣಕಾಸು ಮಸೂದೆಯನ್ನು ಕೂಡ ತಡೆಹಿಡಿಯಬಹುದಲ್ಲವೇ' ಎಂಬ ಪ್ರಶ್ನೆ ಮುಂದಿಟ್ಟ ಪೀಠಕ್ಕೆ, ಸಾಳ್ವೆ ಈ ಉತ್ತರ ನೀಡಿದ್ದಾರೆ.
- ಉತ್ತರ ಪ್ರದೇಶ ಹಾಗೂ ಒಡಿಶಾ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, ಗೋವಾದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ವಿಕ್ರಮಜಿತ್ ಬ್ಯಾನರ್ಜಿ, ಛತ್ತೀಸಗಡ ಸರ್ಕಾರದ ಪರ ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ, ಮಧ್ಯಪ್ರದೇಶದ ಪರ ನೀರಜ್‌ಕಿಶನ್ ಕೌಲ್ ಹಾಜರಿದ್ದರು.

ಹರೀಶ್ ಸಾಳ್ವೆ ವಾದ

- l ರಾಜ್ಯಪಾಲರು ಮಸೂದೆಯೊಂದನ್ನು ಯಾವಾಗ ತಡೆಹಿಡಿಯಬೇಕು, ಯಾವಾಗ ಅಂಕಿತ ಹಾಕಬೇಕು, ಅದರ ಬಗ್ಗೆ ರಾಷ್ಟ್ರಪತಿಗಳು ನಿರ್ಧಾರ ಕೈಗೊಳ್ಳುವುದಕ್ಕೆ ಯಾವಾಗ ಕಾಯ್ದಿರಿಸಬೇಕು ಅಥವಾ ಯಾವಾಗ ಅದನ್ನು ರಾಜ್ಯ ಸರ್ಕಾರಕ್ಕೆ ವಾಪಸು ಕಳಿಸಬೇಕು ಎಂಬ ಬಗ್ಗೆ ಸಂವಿಧಾನದ 200ನೇ ವಿಧಿಯು ಹೇಳುವುದಿಲ್ಲ
- l ಮಸೂದೆ ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಸಾಂವಿಧಾನಿಕವಾದ ಉನ್ನತ ಹುದ್ದೆಯಲ್ಲಿ ಇರುವವರಿಗೆ ಇದೆ ಎಂಬುದನ್ನು ಒಪ್ಪಿಕೊಂಡ ಮೇಲೆ, ಅವರ ಅಧಿಕಾರ ಕುರಿತು ಮರುಪರಿಶೀಲನೆ ನಡೆಸಲು ನ್ಯಾಯಾಂಗಕ್ಕೆ ಅವಕಾಶ ಇರುತ್ತದೆಯೇ?
- l ಮಸೂದೆಯೊಂದಕ್ಕೆ ರಾಷ್ಟ್ರಪತಿ ಇಲ್ಲವೇ ರಾಜ್ಯಪಾಲರು ಅಂಕಿತ ಹಾಕಬೇಕು. ಅವರು ಕೈಗೊಂಡ ನಿರ್ಧಾರ ಪ್ರಸ್ತುತ ಜಾರಿಯಲ್ಲಿರುವ ಕಾನೂನಿಗೆ ಅನುಗುಣವಾಗಿ ಇದೆಯೇ ಎಂಬುದನ್ನು ನಿಷ್ಕರ್ಷೆ ಮಾಡುವ ಅಧಿಕಾರವಷ್ಟೆ ಸಂವಿಧಾನದ 142 ವಿಧಿಯಡಿ ನ್ಯಾಯಾಲಯಕ್ಕೆ ಇದೆ. ಮಸೂದೆಗೆ ಅಂಕಿತ ಹಾಕುವುದಕ್ಕಾಗಿ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿ ವಿಸ್ತರಿಸಿಕೊಳ್ಳುವುದಕ್ಕೆ ಈ ವಿಧಿ ಅವಕಾಶ ನೀಡುವುದಿಲ್ಲ
- l ಮಸೂದೆ ಕುರಿತು ರಾಜ್ಯಪಾಲರು/ರಾಷ್ಟ್ರಪತಿ ಯಾವ ನಿರ್ಧಾರ ಕೈಗೊಂಡಿದ್ದಾರೆ ಎಂದಷ್ಟೆ ನ್ಯಾಯಾಲಯ ಪ್ರಶ್ನಿಸಬಹುದು. ಇಂತಹ ನಿರ್ಧಾರ ಏಕೆ ಕೈಗೊಂಡಿರಿ? ಎಂದು ಕೇಳುವಂತಿಲ್ಲ
- l ತಮಗಿರುವ ಅಧಿಕಾರಗಳನ್ನು ಚಲಾಯಿಸುವ ಮತ್ತು ಕರ್ತವ್ಯಗಳನ್ನು ನಿಭಾಯಿಸುವ ಕುರಿತು ರಾಜ್ಯಪಾಲರು ಹಾಗೂ ರಾಷ್ಟ್ರಪತಿ ಯಾವುದೇ ನ್ಯಾಯಾಲಯಕ್ಕೆ ಉತ್ತರ ನೀಡಬೇಕಿಲ್ಲ. ಇದನ್ನು ಸಂವಿಧಾನದ 361ನೇ ವಿಧಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ

ಜೇಠ್ಮಲಾನಿ ವಾದ

- l ಈ ವಿಚಾರ ಕುರಿತು ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್ ನೀಡಿದ ಆದೇಶದಲ್ಲಿ , ಸಂವಿಧಾನದ 200ನೇ ವಿಧಿಯಲ್ಲಿ ಉಲ್ಲೇಖವಿರದ ಅಂಶವನ್ನು ಸೇರಿಸಲಾಗಿದೆ

ಬ್ಯಾನರ್ಜಿ ವಾದ

- l ಶಾಸನ ರಚನೆಗೆ ಸಂಬಂಧಿಸಿದ ಸಾಂವಿಧಾನಿಕ ಪ್ರಕ್ರಿಯೆಯಂತೆ, ಮಸೂದೆಗೆ ರಾಜ್ಯಪಾಲರ ಅಂಕಿತ ಅಗತ್ಯ. ರಾಜ್ಯಪಾಲರು ಮಸೂದೆಗೆ ಅಂಕಿತ ಹಾಕಿದ್ದಾರೆ ಎಂಬುದಾಗಿ ಪರಿಭಾವಿಸುವುದಕ್ಕೆ ಅವಕಾಶ ಇಲ್ಲ
- l 'ಪರಿಭಾವಿತ ಅಂಕಿತ' ಎಂಬ ಪರಿಕಲ್ಪನೆ ಸಂವಿಧಾನದಲ್ಲಿ ಇಲ್ಲ. ಹಾಗಾಗಿ, ವಿಧಾನಸಭೆಗಳಲ್ಲಿ ಅಂಗೀಕಾರ ಗೊಂಡಿರುವ ಮಸೂದೆಗಳಿಗೆ 'ಪರಿಭಾವಿತ ಅಂಕಿತ' ನೀಡುವ ಅಧಿಕಾರ ನ್ಯಾಯಾಲಯಗಳಿಗೆ ಇಲ್ಲ

Dr. Rajkumar IAS/KAS Academy

ನಟರಾಜ್ ವಾದ

- । ರಾಷ್ಟ್ರಪತಿ ಮತ್ತು ರಾಜ್ಯಪಾಲರು ತಮ್ಮ ಕಾರ್ಯನಿರ್ವಹಣೆಗೆ ಸಂಬಂಧಿಸಿ ಸಂಪೂರ್ಣ ಸ್ವಾಯತ್ತತೆ ಹೊಂದಿದ್ದಾರೆ
- । ಯಾವುದೇ ಮಸೂದೆಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ಅವರು ತಮ್ಮ ಸಂಪೂರ್ಣ ವಿವೇಚನಾ ಅಧಿಕಾರ ಚಲಾಯಿಸುವ ಅಧಿಕಾರ ಹೊಂದಿದ್ದಾರೆ
- । ವಿಧಾನಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳಿಗೆ ಅಂಕಿತ ಹಾಕುವುದಕ್ಕಾಗಿ ರಾಜ್ಯಪಾಲರು ಹಾಗೂ ರಾಷ್ಟ್ರಪತಿಗೆ ನ್ಯಾಯಾಲಯಗಳು ಕಾಲಮಿತಿ ವಿಧಿಸುವಂತಿಲ್ಲ.

## ❖ ಕದನ ವಿರಾಮ ಘೋಷಿಸಿ: ಇಸ್ರೇಲ್‌ನಲ್ಲಿ ತೀವ್ರ ಪ್ರತಿಭಟನೆ

**ಸಂದರ್ಭ:** 'ಒಂದು ವರ್ಷದ ಹಿಂದೆಯೇ ನಾವು ಯುದ್ಧವನ್ನು ನಿಲ್ಲಿಸಬಹುದಿತ್ತು. ಒತ್ತೆಯಾಳುಗಳನ್ನು ವಾಪಸು ಕರೆಸಿಕೊಳ್ಳಬಹುದಿತ್ತು. ಆದರೆ, ನಮ್ಮ ಪ್ರಧಾನಿಯು ಮತ್ತೆ ಮತ್ತೆ ಯುದ್ಧವನ್ನು ಇಚ್ಛಿಸಿದರು. ತನ್ನದೇ ನಾಗರಿಕರ ಜೀವದಾನವನ್ನು ಬಯಸಿದರು. ತಮ್ಮ ಅಧಿಕಾರ ಉಳಿಸಿಕೊಳ್ಳಲು ಇಷ್ಟೆಲ್ಲ ಮಾಡಿದರು...'

- –ಹಮಾಸ್ ಬಂಡುಕೋರರ ಬಳಿ ಒತ್ತೆಯಾಳು ಆಗಿರುವ 25 ವರ್ಷ ಮತನ್ ಎಂಬ ಯುವಕನ ತಂದೆಯ ಮಾತುಗಳಿವು. ಒತ್ತೆಯಾಳುಗಳನ್ನು ವಾಪಸು ಕರೆಸಿಕೊಳ್ಳಲು ಆಗ್ರಹಿಸಿ ಇಸ್ರೇಲ್ ನಾದ್ಯಂತ ತೀವ್ರ ಪ್ರತಿಭಟನೆಗಳು ನಡೆಯುತ್ತಿವೆ. ಇಸ್ರೇಲ್‌ನ ಒತ್ತೆಯಾಳುಗಳು ಮತ್ತು ಕಾಣೆಯಾದವರ ಕುಟುಂಬಗಳ ವೇದಿಕೆ ವತಿಯಿಂದ ಮಂಗಳವಾರ ವನ್ನು 'ಸಂಘರ್ಷದ ರಾಷ್ಟ್ರೀಯ ದಿನ'ವನ್ನಾಗಿ ಆಚರಿಸಿ, ತೀವ್ರ ಪ್ರತಿಭಟನೆ ನಡೆಸಲಾಯಿತು.
- ಟೈರ್ ಸುಟ್ಟು, ಹೆದ್ದಾರಿಗಳ ತಡೆ ನಡೆಸಿ ಪ್ರತಿಭಟನಕಾರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. 'ತಕ್ಷಣವೇ ಕದನವಿರಾಮ ಘೋಷಿಸಿ' ಎಂದು ಆಗ್ರಹಿಸಿದರು. ಆದರೆ, ಇನ್ನೊಂದೆಡೆ ಗಾಜಾದ ಮೇಲೆ ತನ್ನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಲು ಸರ್ಕಾರ ನಿರ್ಧರಿಸಿದೆ. 'ಯುದ್ಧದಿಂದಷ್ಟೇ ಹಮಾಸ್ ಅನ್ನು ತೊಡೆದು ಹಾಕಬಹುದು' ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದರು. ಗಾಜಾದ ನಾಸೆರ್ ಆಸ್ಪತ್ರೆ ಮೇಲಿನ ದಾಳಿ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಕ್ಷೇಪ ವ್ಯಕ್ತವಾಗುತ್ತಿದೆ.

## ❖ ನ್ಯಾ. ಪಂಚೋಲಿ ನೇಮಕಕ್ಕೆ ನ್ಯಾ. ನಾಗರತ್ನ ವಿರೋಧ

**ಸಂದರ್ಭ:** ಪಟ್ನಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಪುಲ್ ಮನುಭಾಯ್ ಪಂಚೋಲಿ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡುವುದಕ್ಕೆ ಶಿಫಾರಸು ಮಾಡಿರುವ ಕೊಲಿಜಿಯಂ ನಿರ್ಧಾರಕ್ಕೆ ನ್ಯಾಯಮೂರ್ತಿ ಬಿ.ವಿ. ನಾಗರತ್ನ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

- 'ಇವರ ನೇಮಕವು ನ್ಯಾಯಾಂಗಕ್ಕೆ ಮತ್ತು ಕೊಲಿಜಿಯಂನ ವಿಶ್ವಾಸಾರ್ಹತೆಗೆ ಧಕ್ಕೆ ಉಂಟು ಮಾಡುತ್ತದೆ' ಎಂದು ನ್ಯಾಯಮೂರ್ತಿ ನಾಗರತ್ನ ಅವರು ಅಭಿಪ್ರಾಯಪಟ್ಟಿದ್ದಾರೆ. 2031ರ ವೇಳೆ ನ್ಯಾಯಮೂರ್ತಿ ಪಂಚೋಲಿ ಅವರು ಮುಖ್ಯ ನ್ಯಾಯಮೂರ್ತಿ ಯಾಗುವ ಸರತಿಯಲ್ಲಿದ್ದಾರೆ.
- ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ಮತ್ತು ನ್ಯಾಯಮೂರ್ತಿ ಪಂಚೋಲಿ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇಮಕ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಂ ನಾಥ್, ಜೆ.ಕೆ. ಮಾಹೇಶ್ವರಿ ಮತ್ತು ನಾಗರತ್ನ ಅವರ ಕೊಲಿಜಿಯಂ ಸೋಮವಾರ ಶಿಫಾರಸು ಮಾಡಿತ್ತು.

ವಿರೋಧಕ್ಕೆ ಕಾರಣವೇನು?

- ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಲು ಅಗತ್ಯವಿರುವ ಜ್ಯೇಷ್ಠತೆಯೂ ನ್ಯಾಯಮೂರ್ತಿ ಪಂಚೋಲಿ ಅವರಿಗೆ ಇಲ್ಲ. ಜೊತೆಗೆ, ಅವರು ಈ ಹಿಂದೆ ಗುಜರಾತ್ ಹೈಕೋರ್ಟ್‌ನಿಂದ ಪಟ್ನಾ ಹೈಕೋರ್ಟ್‌ಗೆ ವರ್ಗಾವಣೆ ಆದಾಗಿನ ಸಂದರ್ಭದ ಕುರಿತೂ ನ್ಯಾಯಮೂರ್ತಿ ನಾಗರತ್ನ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.
- ‘ನ್ಯಾಯಮೂರ್ತಿ ಪಂಚೋಲಿ ಅವರನ್ನು 2023ರಲ್ಲಿ ಗುಜರಾತ್ ಹೈಕೋರ್ಟ್‌ನಿಂದ ಪಟ್ನಾ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿತ್ತು. ಆದರೆ, ಇದು ನಿಯಮದಂತೆ ನಡೆದ ವರ್ಗಾವಣೆಯಾಗಿರಲಿಲ್ಲ. ಬಹಳ ಯೋಜನಾಬದ್ಧವಾಗಿ ವರ್ಗಾವಣೆ ಮಾಡಲಾಗಿತ್ತು. ಇದರ ಬಗ್ಗೆ ಹಲವು ಹಿರಿಯ ನ್ಯಾಯಾಧೀಶರನ್ನು ವಿಚಾರಿಸಿ, ಅಭಿಪ್ರಾಯ ಸಂಗ್ರಹಿಸಿ ನಡೆಸಿದ್ದ ವರ್ಗಾವಣೆಯಾಗಿತ್ತು ಎನ್ನುವುದು ನ್ಯಾಯಮೂರ್ತಿ ನಾಗರತ್ನ ಅವರ ತೀವ್ರ ಆಕ್ಷೇಪ’ ಎಂದು ಮೂಲಗಳು ಹೇಳಿವೆ. ‘ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳನ್ನಾಗಿ ನೇಮಿಸುವಲ್ಲಿ ಪ್ರಾದೇಶಿಕ ಪ್ರಾತಿನಿಧಿತ್ವ ಕೂಡ ಇಲ್ಲ’ ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದ್ದಾರೆ ಎನ್ನಲಾಗಿದೆ.

ಹಿಂದೆಯೂ ವಿರೋಧ

- ‘ಮೇ ತಿಂಗಳಲ್ಲಿಯೇ ನ್ಯಾಯಮೂರ್ತಿ ಪಂಚೋಲಿ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಕೊಲಿಜಿಯಂ ಶಿಫಾರಸು ಮಾಡಲು ಮುಂದಾಗಿತ್ತು. ಆಗಲೂ ನ್ಯಾಯಮೂರ್ತಿ ನಾಗರತ್ನ ಅವರು ಇದನ್ನು ವಿರೋಧಿಸಿದ್ದರು. ಬಳಿಕ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಯಿತು’ ಎಂದು ಮೂಲಗಳು ಹೇಳಿವೆ.
- ‘ಮೂರು ತಿಂಗಳ ಬಳಿಕ ಮತ್ತೊಮ್ಮೆ ನ್ಯಾಯಮೂರ್ತಿ ಪಂಚೋಲಿ ಅವರ ಹೆಸರು ಮುನ್ನೆಲೆಗೆ ಬಂದಾಗ ನ್ಯಾಯಮೂರ್ತಿ ನಾಗರತ್ನ ಅವರ ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. ನ್ಯಾಯಮೂರ್ತಿ ನಾಗರತ್ನ ಅವರ ಪತ್ರವನ್ನು ಬಹಿರಂಗಪಡಿಸಲಾಗಿಲ್ಲ.

ಗುಜರಾತ್‌ನಿಂದ ನಾಲ್ಕನೇ ನ್ಯಾಯಮೂರ್ತಿ

- ಹೈಕೋರ್ಟ್ ನ್ಯಾಯಾಧೀಶರ ಜ್ಯೇಷ್ಠತಾ ಪಟ್ಟಿಯಲ್ಲಿ ನ್ಯಾಯಮೂರ್ತಿ ಪಂಚೋಲಿ ಅವರು 57ನೇ ಸ್ಥಾನದಲ್ಲಿ ಇದ್ದಾರೆ. ಇಷ್ಟು ಕೆಳಗಿನ ಸ್ಥಾನದಲ್ಲಿ ಇದ್ದವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಶಿಫಾರಸು ಮಾಡಲಾಗಿದೆ. ಜೊತೆಗೆ, ನಾಲ್ವರು ನ್ಯಾಯಮೂರ್ತಿಗಳನ್ನು ಸುಪ್ರೀಂ ಕೋರ್ಟ್‌ಗೆ ನೇಮಕ ಮಾಡುವಷ್ಟು ದೊಡ್ಡ ಹೈಕೋರ್ಟ್ ಗುಜರಾತ್‌ನದ್ದು ಅಲ್ಲ. ಜೊತೆಗೆ, ದೇಶದ ಬೇರೆ ಬೇರೆ ದೊಡ್ಡ ಹೈಕೋರ್ಟ್‌ಗಳ ಪ್ರಾತಿನಿಧ್ಯವನ್ನು ಕೈಬಿಟ್ಟು ಗುಜರಾತ್‌ಗೆ ಮಾತ್ರವೇ ಪ್ರಾಮುಖ್ಯ ನೀಡಲಾಗುತ್ತಿದೆ ಕ್ಯಾಂಪೇನ್ ಫಾರ್ ಜುಡಿಷಿಯಲ್ ಅಕೌಂಟೆಬಿಲಿಟಿ ಆ್ಯಂಡ್ ರಿಫಾರ್ಮ್ಸ್, ಎನ್‌ಜಿಒ

## ❖ ನೌಕಾಪಡೆ ಸೇರಿದ ‘ಹಿಮಗಿರಿ’,‘ಉದಯಗಿರಿ’

**ಸಂದರ್ಭ:** ವಿಶಾಖಪಟ್ಟಣದಲ್ಲಿ ‘ಐಎನ್‌ಎಸ್ ಹಿಮಗಿರಿ’ ಯುದ್ಧನೌಕೆಯನ್ನು ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು.

- ರಹಸ್ಯವಾಗಿ ಕಾರ್ಯಾಚರಣೆ ಮಾಡುವ ಸಾಮರ್ಥ್ಯ ಹೊಂದಿರುವ, ‘ಐಎನ್ ಎಸ್ ಉದಯಗಿರಿ’ ಹಾಗೂ ‘ಐಎನ್‌ಎಸ್ ಹಿಮಗಿರಿ’ ಯುದ್ಧನೌಕೆಗಳನ್ನು ಮಂಗಳವಾರ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು.
- ನೌಕಾಪಡೆಯ ಈಸ್ಟರ್ನ್ ಕಮಾಂಡ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ಅತ್ಯಾಧುನಿಕ


ವಿಶಾಖಪಟ್ಟಣದಲ್ಲಿ ‘ಐಎನ್‌ಎಸ್ ಹಿಮಗಿರಿ’ ಯುದ್ಧನೌಕೆಯನ್ನು ಮಂಗಳವಾರ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು. ಪಿಟಿಐ ಚಿತ್ರ

Dr. Rajkumar IAS Academy

ಯುದ್ಧನೌಕೆಗಳನ್ನು ನೌಕಾಪಡೆಗೆ ಸೇರ್ಪಡೆ ಮಾಡಿದರು.

- ವಿನ್ಯಾಸ ಹಾಗೂ ಶಸ್ತ್ರಾಸ್ತ್ರಗಳ ಬಳಕೆ ಸಾಮರ್ಥ್ಯದ ದೃಷ್ಟಿಯಿಂದ ಈ ಯುದ್ಧನೌಕೆಗಳಲ್ಲಿ ಮಹತ್ವದ ಸುಧಾರಣೆ ತರಲಾಗಿದ್ದು, ಕಡಲಗಡಿ ಭದ್ರತೆಯಲ್ಲಿ ಇವುಗಳು ಮಹತ್ತರ ಪಾತ್ರವಹಿಸಲಿವೆ ಎಂದು ವಿಶ್ಲೇಷಿಸ ಲಾಗುತ್ತಿದೆ.
- **'ಪ್ರಾಜೆಕ್ಟ್ 17ಎ' ಶ್ರೇಣಿಯ ಎರಡನೇ ಯುದ್ಧನೌಕೆಯಾದ 'ಉದಯಗಿರಿ'ಯನ್ನು ಮಜಗಾಂವ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದ್ದರೆ, ಮತ್ತೊಂದು ಯುದ್ಧನೌಕೆ 'ಹಿಮಗಿರಿ'ಯನ್ನು ಕೋಲ್ಕತ್ತ ಮೂಲದ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ (ಜಿಆರ್‌ಎಸ್‌ಇ) ಕಂಪನಿಯು ನಿರ್ಮಿಸಿದೆ.**

**ವೈಶಿಷ್ಟ್ಯಗಳು**

- I'ಉದಯಗಿರಿ'ಯು ನೌಕಾಪಡೆಯ 'ವಾರ್‌ಶಿಪ್ ಡಿಸೈನ್ ಬ್ಯುರೊ' ವಿನ್ಯಾಸ ಮಾಡಿರುವ 100ನೇ ಯುದ್ಧನೌಕೆಯಾಗಿದೆ
- Iಈ ಮೊದಲಿನ ಯುದ್ಧನೌಕೆಗಳಿ ಗಿಂತ (ಶಿವಾಲಿಕ್ ಶ್ರೇಣಿಯ ಯುದ್ಧನೌಕೆಗಳು) ಈ ನೂತನ ಯುದ್ಧನೌಕೆಗಳು ಶೇ 5ರಷ್ಟು ದೊಡ್ಡದಾಗಿವೆ
- Iನೆಲದಿಂದ ನೆಲಕ್ಕೆ, ನೆಲದಿಂದ ಆಗಸಕ್ಕೆ ಚಿಮ್ಮುವ ಸೂಪರ್‌ಸಾನಿಕ್ ಕ್ಷಿಪಣಿ, ಜಲಾಂತರ್ಗಾಮಿ ನಿರೋಧಕ ವ್ಯವಸ್ಥೆಗಳನ್ನು ಈ ಯುದ್ಧನೌಕೆಗಳಲ್ಲಿ ಅಳವಡಿಸ ಬಹುದು
- I ದೇಶೀಯವಾಗಿಯೇ ತಯಾರಿಸ ಲಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಸೆನ್ಸರ್‌ಗಳನ್ನು ಅಳವಡಿಸಲಾಗಿದೆ

## ❖ 'ಸುದರ್ಶನ ಚಕ್ರ: ಖಡ್ಗ–ಗುರಾಣಿ ಇದ್ದಂತೆ'

**<u>ಸಂದರ್ಭ:</u>** 'ಭಾರತ ಅಭಿವೃದ್ಧಿ ಪಡಿಸಲಿರುವ ವಾಯುಪ್ರದೇಶ ರಕ್ಷಣಾ ವ್ಯವಸ್ಥೆ 'ಸುದರ್ಶನ ಚಕ್ರ'ವು ಸೆನ್ಸರ್ ಗಳು, ಕ್ಷಿಪಣಿಗಳು, ಕಣ್ಗಾವಲು ಉಪಕರಣ ಗಳು, ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಾಧನಗಳನ್ನು ಒಳ ಗೊಂಡಿರಲಿದೆ' ಎಂದು ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಹೇಳಿದ್ದಾರೆ.

- 'ಈ ರಕ್ಷಣಾ ವ್ಯವಸ್ಥೆಯು 'ಖಡ್ಗ ಮತ್ತು ಗುರಾಣಿ'ಯ ರೀತಿ ಕಾರ್ಯನಿರ್ವಹಿಸ ಲಿದೆ. ಇಸ್ರೇಲ್‌ನ ಐರನ್ ಡೋಮ್ ಅನ್ನು ಹೋಲುವ ಈ ವ್ಯವಸ್ಥೆಯು, ಎಲ್ಲ ಋತುಮಾನಗಳಲ್ಲಿಯೂ ದೇಶದ ವಾಯುಪ್ರದೇಶ ರಕ್ಷಣೆಗೆ ಸನ್ನದ್ಧವಾಗಿರಲಿದೆ' ಎಂದು ಮಂಗಳವಾರ ಹೇಳಿದ್ದಾರೆ.


ಪ್ರಮುಖ ಅಂಶಗಳು

- ಭವಿಷ್ಯದ ಯುದ್ಧಗಳು ಗಡಿಗಳನ್ನು ಮೀರಿ ನಡೆಯಲಿವೆ. ಎಲ್ಲ ರೀತಿಯ ದಾಳಿಗಳಿಗೆ ಕ್ಷಿಪ್ರ ಮತ್ತು ನಿಖರವಾದ ಪ್ರತ್ಯುತ್ತರ ನೀಡುವುದು ಅಗತ್ಯ
- ಯುದ್ಧತಂತ್ರ ಮತ್ತು ರಕ್ಷಣಾ ವ್ಯವಸ್ಥೆ ಅಭಿವೃದ್ಧಿಪಡಿಸುವಲ್ಲಿ ಮೂರು ಪಡೆಗಳು ಜಂಟಿಯಾಗಿ ಕಾರ್ಯನಿ-ರ್ವಹಿಸುವುದು ಮುಖ್ಯ
- ಕೃತಕಬುದ್ಧಿಮತ್ತೆ, ಸೈಬರ್, ಕ್ವಾಂಟಮ್ ನಂತರ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಅವಶ್ಯಕ
- ಭಾರತ ನಡೆಸಿದ ಯುದ್ಧಗಳು ಅಥವಾ ನಮ್ಮ ತಂತ್ರಗಾರಿಕೆ ಕುರಿತಂತೆ ವಿದ್ವತ್‌ಪೂರ್ಣ ವಿಶ್ಲೇಷಣೆ ಹಾಗೂ ಈ ಕುರಿತ ಸಾಹಿತ್ಯ ನಮ್ಮಲ್ಲಿ ಕಡಿಮೆ
- ಯುದ್ಧ, ನಾಯಕತ್ವ, ಪ್ರೇರಣೆ, ನೈತಿಕತೆ ಸೇರಿ ಹಲವು ವಿಚಾರಗಳ ಕುರಿತು ಗಂಭೀರವಾದ ಸಂಶೋಧನೆ ಅಗತ್ಯ ಇದೆ

- ಯುದ್ಧ ಮತ್ತು ತಂತ್ರಗಾರಿಕೆ ಕುರಿತು ಮೂರೂ ಸಶಸ್ತ್ರಗಳ ಪಡೆಗಳಿಗಾಗಿ ಇಲ್ಲಿ ಆರಂಭವಾದ 'ರಣ ಸಂವಾದ'ದಲ್ಲಿ ಅವರು ಮಾತನಾಡಿದರು.
- 'ಸುದರ್ಶನ ಚಕ್ರ' ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವ ದಿನದಂದು ಘೋಷಣೆ ಮಾಡಿದ್ದರು. ಈ ವ್ಯವಸ್ಥೆಯನ್ನು 2035ರಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. 'ದೇಶದ ನಾಗರಿಕರು, ರಾಷ್ಟ್ರೀಯ ಮಹತ್ವದ ತಾಣಗಳು ಹಾಗೂ ಕಾರ್ಯ ತಂತ್ರದ ದೃಷ್ಟಿಯಿಂದ ಮುಖ್ಯ ವಾದ ಸ್ಥಳಗಳನ್ನು ರಕ್ಷಿಸುವ ಉದ್ದೇಶದಿಂದ ಈ ವಾಯುಪ್ರದೇಶ ರಕ್ಷಣಾ ವ್ಯವಸ್ಥೆ ಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ವ್ಯವಸ್ಥೆಯು ಖಡ್ಗದಂತೆ ಹಾಗೂ ಗುರಾಣಿಯಂತೆಯೂ ಕಾರ್ಯನಿರ್ವಹಿಸ ಲಿದೆ' ಎಂದು ಚೌಹಾಣ್ ವಿವರಿಸಿದರು.
- 'ನಮ್ಮ ಮೇಲೆ ಎರಗಲಿರುವ ಶತ್ರು ದೇಶಗಳ ಶಸ್ತ್ರಾಸ್ತ್ರಗಳನ್ನು ಕ್ಷಿಪ್ರವಾಗಿ ಪತ್ತೆ ಮಾಡಿ, ಅವುಗಳನ್ನು ನಾಶಪಡಿಸುವ ಸಾಮರ್ಥ್ಯ ಹಾಗೂ ಅದಕ್ಕೆ ಬೇಕಾದ ಮೂಲಸೌಕರ್ಯಗಳನ್ನು ಈ ವ್ಯವಸ್ಥೆ ಹೊಂದಿರಲಿದೆ' ಎಂದಿದ್ದಾರೆ.

- 'ನೆಲದ ಮೇಲಿಂದ, ವಾಯು ಪ್ರದೇಶ, ಕಡಲು ಹಾಗೂ ಆಳ ಸಮುದ್ರದ ಮೂಲಕ, ಬಾಹ್ಯಾಕಾಶದಿಂದ ದಾಳಿ ಎದುರಿಸಲು ಸಿದ್ಧರಿರಬೇಕು. ಗುಪ್ತಚರ– ಕಣ್ಗಾವಲು–ಪತ್ತೆ ಕಾರ್ಯ (ಐಎಸ್‌ಆರ್) ನಿರಂತರವಾಗಿ ನಡೆಯುತ್ತಿರಬೇಕು. ಸುದರ್ಶನ ಚಕ್ರದಂತಹ ಸಮಗ್ರ ರಕ್ಷಣಾ ವ್ಯವಸ್ಥೆಯೇ ಇದಕ್ಕೆ ಉತ್ತರವಾಗಬಲ್ಲದು' ಎಂದು ಹೇಳಿದ್ದಾರೆ.

## ❖ ಸಿಫ್ತ್ ಕೌರ್‌ಗೆ ಸ್ವರ್ಣ ಡಬಲ್

**ಸಂದರ್ಭ:** ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿ ರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿ ಯನ್‌ಷಿಪ್‌ನಲ್ಲಿ ಮಂಗಳವಾರವೂ ಪ್ರಾಬಲ್ಯ ಮುಂದುವರಿಸಿದರು. ಒಲಿಂಪಿ ಯನ್ ಸಿಫ್ತ್ ಕೌರ್ ಸಮ್ರಾ ಅವರು ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡರು.


ಸಿಫ್ತ್ ಕೌರ್ ಸಮ್ರಾ (ಎಡ), ಅಶಿ ಚೋಸ್ಕಿ - ಪಿಟಿಐ ಸಂಗ್ರಹ ಚಿತ್ರ

- ಮಹಿಳೆಯರ 50 ಮೀ. ರೈಫಲ್ ತ್ರೀ ಪೊಸಿಷನ್ ಸ್ಪರ್ಧೆಯಲ್ಲಿ ಸ್ವರ್ಣಕ್ಕೆ ಗುರಿಯಿಟ್ಟ ಸಮ್ರಾ, ತಂಡ ವಿಭಾಗದಲ್ಲಿಯೂ ಭಾರತಕ್ಕೆ ಚಿನ್ನದ ಪದಕ ತಂದುಕೊಟ್ಟರು.
- ವಿಶ್ವದಾಖಲೆ ಹೊಂದಿರುವ 23 ವರ್ಷ ವಯಸ್ಸಿನ ಸಮ್ರಾ ಅವರು ಫೈನಲ್ ಕಣದಲ್ಲಿ 459.2 ಸ್ಕೋರ್ ಮಾಡಿದರು. ಈ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಶೂಟರ್ ಎಂಬ ಗೌರವಕ್ಕೂ ಪಾತ್ರರಾದರು. 2022ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ ಅವರು ವಿಶ್ವದಾಖಲೆ (469.6) ರಚಿಸಿದ್ದರು.
- ಚೀನಾದ ಯಾಂಗ್ ಯುಜೀ (458.8) ಬೆಳ್ಳಿ ಗೆದ್ದರೆ, ಜಪಾನ್ ದೇಶದ ಮಿಸಾಕಿ ನೊಬಾಟಾ (448.2) ಕಂಚು ಗೆದ್ದರು. ಕಣದಲ್ಲಿದ್ದ ಭಾರತದ ಅಶಿ ಚೋಸ್ಕಿ (402.8) ಅವರು 7ನೇ ಸ್ಥಾನ ಪಡೆದರು. ತಂಡ ವಿಭಾಗದಲ್ಲಿ ಸಮ್ರಾ, ಚೋಸ್ಕಿ ಹಾಗೂ ಒಲಿಂಪಿಯನ್ ಅಂಜುಮ್ ಮೌದ್ಗಿಲ್ ಅವರು ಒಟ್ಟು 1,753 ಪಾಯಿಂಟ್ಸ್ ಸಂಪಾದಿಸಿದರು. ಜಪಾನ್ ತಂಡವು 1,750 ಅಂಕಗಳೊಂದಿಗೆ ರಜತ ಪದಕ ಗೆದ್ದರೆ, ಕೊರಿಯಾ (1,747) ಕಂಚಿನ ಪದಕ ತಮ್ಮದಾಗಿಸಿಕೊಂಡರು.
- ಟೂರ್ನಿಯಲ್ಲಿ 9 ಚಿನ್ನ ಸೇರಿ 20 ಪದಕಗಳೊಂದಿಗೆ ಭಾರತದ ಸೀನಿಯರ್ ತಂಡ ಪದಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದೆ. ಚೀನಾ 24 ಪದಕಗಳೊಂದಿಗೆ (13 ಚಿನ್ನ) ಅಗ್ರಸ್ಥಾನದಲ್ಲಿದೆ.
- ಕಿರಿಯರ ಪದಕ ಬೇಟೆ: ಭಾರತದ ಕಿರಿ ಯರ ಪದಕ ಬೇಟೆಗೆ ಮಂಗಳವಾರವೂ ಯಾವುದೇ ಅಡ್ಡಿ ಎದುರಾಗಲಿಲ್ಲ. ಜೂನಿಯರ್ ಪುರುಷರ 25 ಮೀಟರ್ ರ್‍ಯಾಪಿಡ್ ಫೈರ್ ವೈಯಕ್ತಿಕ ಸ್ಪರ್ಧೆಯಲ್ಲಿ ಸಮೀರ್ ಕಂಚು ಗೆದ್ದುಕೊಂಡರು. ತಂಡ ವಿಭಾಗದಲ್ಲಿ ಸಮೀರ್, ಸೂರಜ್ ಹಾಗೂ ಅಭಿನವ್ ಒಟ್ಟು 1,724 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದರು.
- ಹ್ಯಾರಿಸ್ ಸಬೀರಾ ಹಾಗೂ ಆದ್ಯಾ ಕತ್ಯಾಲ್ ಜೂನಿಯರ್ ಮಹಿಳೆಯರ ಟ್ರ್ಯಾಪ್ ವೈಯಕ್ತಿಕ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಹಾಗೂ ರಜತ ಪದಕ ಜಯಿಸಿದರು. ಈ ಇಬ್ಬರು ಶೂಟರ್‌ಗಳು ಭವ್ಯಾ ತ್ರಿಪಾಠಿ ಜೊತೆ ಸೇರಿ ತಂಡ ವಿಭಾಗದಲ್ಲಿಯೂ ಚಿನ್ನಕ್ಕೆ ಮುತ್ತಿಕ್ಕಿದರು.
- ತೀವ್ರ ಪೈಪೋಟಿಯಿಂದ ಕೂಡಿದ್ದ ಪುರುಷರ ಜೂನಿಯರ್ ವಿಭಾಗದ ಟ್ರ್ಯಾಪ್ ವೈಯಕ್ತಿಕ ಸ್ಪರ್ಧೆಯಲ್ಲಿ ಆರ್ಯವಂಶ ತ್ಯಾಗಿ ಬೆಳ್ಳಿ ಪದಕ ಗೆದ್ದರು. ಫೈನಲ್‌ನಲ್ಲಿ ತ್ಯಾಗಿ ಹಾಗೂ ಕಜಾಕಸ್ತಾನ ನಿಕಿಟಾ ಮೊಯ್ಸೆಯೆವ್ ತಲಾ 40 ಅಂಕ ಗಳಿಸಿದ್ದರು. ಶೂಟ್‌ಆಫ್‌ನಲ್ಲಿ ನಿಕಿಟಾ 1–0ಯಿಂದ ಚಿನ್ನವನ್ನು ತಮ್ಮದಾಗಿಸಿ ಕೊಂಡರು. ತಂಡ ವಿಭಾಗದಲ್ಲಿ ತ್ಯಾಗಿ, ಅರ್ಜುನ್ ಹಾಗೂ ಉದ್ಧವ್ ರಾಥೋಡ್ ಜೋಡಿ ಸ್ವರ್ಣಕ್ಕೆ ಕೊರಳೊಡ್ಡಿತು.


**ಅನುಷ್ಕಾಗೆ ಎರಡು ಚಿನ್ನ**

- ಕರ್ನಾಟಕದ ಉದಯೋನ್ಮುಖ ಶೂಟರ್ ಅನುಷ್ಕಾ ಎಚ್.ಟಿ. ಅವರು ಜೂನಿಯರ್ ಮಹಿಳೆಯರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ವೈಯಕ್ತಿಕ ಸ್ಪರ್ಧೆಯಲ್ಲಿ ಸ್ವರ್ಣಕ್ಕೆ ಕೊರಳೊಡ್ಡಿದರು. ತಂಡ ವಿಭಾಗದಲ್ಲಿ ಪ್ರಾಚಿ ಗಾಯಕವಾಡ್ ಹಾಗೂ ಮಹಿತ್ ಸಂಧು ಜೊತೆಗೆ ಚಿನ್ನದ ಪದಕವನ್ನು ಡಬಲ್ ಮಾಡಿಕೊಂಡರು.
- 18 ವರ್ಷ ವಯಸ್ಸಿನ ಅನುಷ್ಕಾ, ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ ಅಮೋಘ 460.7 ಪಾಯಿಂಟ್ಸ್ ಗಳಿಸಿದರು. ಕೊರಿಯಾದ ಶೂಟರ್‌ಗಳಾದ ಒ ಸೆಹೀ (455.7) ಹಾಗೂ ಸಿಮ್ ಯಿಯೊಜಿನ್ (443.9) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಜಯಿಸಿದರು. ಮಹಿತ್ 5ನೇ ಸ್ಥಾನ ಹಾಗೂ ಪ್ರಾಚಿ 6ನೇ ಸ್ಥಾನ ಪಡೆದರು.
- ತಂಡ ವಿಭಾಗದಲ್ಲಿ ಈ ಮೂವರು ಒಟ್ಟು 1,758 ಅಂಕಗಳೊಂದಿಗೆ ಚಾಂಪಿಯನ್ ಆದರು. ಕೊರಿಯಾ (1740) ಬೆಳ್ಳಿ ಗೆದ್ದರೆ, ಆತಿಥೇಯ ಕಜಾಕಸ್ತಾನ (1706) ಕಂಚಿಗೆ ತೃಪ್ತಿಪಟ್ಟಿತು.

## ❖ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್: ಕೊಯೆಲ್ ದಾಖಲೆ

**ಸಂದರ್ಭ:** ಭಾರತದ ವೇಟ್‌ಲಿಫ್ಟರ್ ಕೊಯೆಲ್ ಬಾರ್ ಇಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಚಾಂಪಿಯನ್ ಷಿಪ್‌ನ ಮಹಿಳೆಯರ 53 ಕೆ.ಜಿ ವಿಭಾಗದ ಯೂತ್ ಮತ್ತು ಜೂನಿಯರ್ ವಿಭಾಗದಲ್ಲಿ ಡಬಲ್ ಪ್ರಶಸ್ತಿ ಗೆದ್ದುಕೊಂಡರು. ಮಾತ್ರವಲ್ಲದೆ, ಯೂತ್ ವಿಭಾಗದಲ್ಲಿ ಎರಡು ವಿಶ್ವದಾಖಲೆ ನಿರ್ಮಿಸಿದರು.

- ಜೂನಿಯರ್ ಮತ್ತು ಯೂತ್ ವಿಭಾಗಗಳಲ್ಲಿ ಸ್ಪರ್ಧಿಸಿದ 17 ವರ್ಷದ ಕೊಯೆಲ್ ಒಟ್ಟು 192 ಕೆಜಿ (85 ಕೆ.ಜಿ + 107 ಕೆ.ಜಿ) ಭಾರ ಎತ್ತಿದರು. ಸ್ನ್ಯಾಚ್‌ನ ಮೊದಲ ಪ್ರಯತ್ನದಲ್ಲಿ 85 ಕೆ.ಜಿ ಭಾರ ಎತ್ತಿ ಯೂತ್ ವಿಶ್ವದಾಖಲೆ ಸಮಗೊಳಿಸಿದರು. ಕ್ಲೀನ್ ಮತ್ತು ಜರ್ಕ್‌ನ ಎರಡನೇ ಪ್ರಯತ್ನದಲ್ಲಿ ಅವರು 105 ಕೆಜಿಯ ದಾಖಲೆಯನ್ನು ಮುರಿದರು. ಒಟ್ಟು ತೂಕದಲ್ಲಿ 188 ಕೆ.ಜಿ ವಿಶ್ವದಾಖಲೆಯನ್ನೂ ಮೀರಿ ನಿಂತರು.
- ಸೀನಿಯರ್ ವಿಭಾಗದಲ್ಲಿ 185 ಕೆ.ಜಿ (81 ಕೆಜಿ + 104 ಕೆಜಿ) ಭಾರ ಎತ್ತಿದ ಸ್ನೇಹಾ ಸೊರೆನ್ ಬೆಳ್ಳಿ ಪದಕ ಜಯಿಸಿದರು. ನೈಜೀರಿಯಾದ ಒಮೊಲೋಲಾ ದಿದಿಹ್ 197 ಕೆಜಿ (90 ಕೆಜಿ + 107 ಕೆಜಿ) ಸಾಧನೆಯೊಂದಿಗೆ ಚಿನ್ನ ತಮ್ಮದಾಗಿಸಿಕೊಂಡರು. ಪುರುಷರ 65 ಕೆಜಿ ವಿಭಾಗದಲ್ಲಿ ರಾಜಾ ಮುತ್ತುಪಾಂಡಿ ಅವರಿಗೆ ಒಂದು ಕೆಜಿ ಅಂತರದಲ್ಲಿ ಚಿನ್ನ ಕೈತಪ್ಪಿತು. ಅವರು 296 ಕೆಜಿ (128+168) ಭಾರ ಎತ್ತಿದರು. ಮಲೇಷ್ಯಾದ ಮುಹಮ್ಮದ್ ಅಜ್ನಿಲ್ ಬಿನ್ ಬಿದಿನ್ 297ಕೆಜಿ (125+ 172) ಪ್ರಶಸ್ತಿ ಗೆದ್ದರು.



## ❖ ಜಲಮೂಲ ನಿರ್ವಹಣೆಗೆ ಉಪಗ್ರಹ, ಎಐ ತಂತ್ರಜ್ಞಾನ

**ಸಂದರ್ಭ:** ಜಲಮೂಲಗಳ ಸಮಗ್ರ ನಿರ್ವಹಣೆಗೆ ಉಪಗ್ರಹ ಹಾಗೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ **'ಡಿಜಿಟಲ್ ವಾಟರ್ ಸ್ಟ್ಯಾಕ್'** ಯೋಜನೆಯನ್ನು ದೇಶದಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದೆ.

- ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿತಗೊಂಡಿದ್ದು, ವಿವಿಧ ಇಲಾಖೆಗಳಲ್ಲಿ ಹಂಚಿ ಹೋಗಿರುವ ಜಲಮೂಲಗಳನ್ನು ಒಂದೇ ವೇದಿಕೆಯಡಿ ನಿರ್ವಹಿಸಿ, ನೀರಿನ ನಿರ್ವಹಣೆ ಮಾಡುವುದು ಈ ಯೋಜನೆಯ ಮೂಲ ಉದ್ದೇಶ.
- **ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಟಿಸಿಡಿಎ) ಈ ಯೋಜನೆಯ ನಿರ್ವಹಣೆ** ಮಾಡಲಿದೆ. ಕೆರೆಗಳು ಮತ್ತು ಇನ್ನಿತರ ಜಲಮೂಲಗಳ ಸರ್ವೆ ಸೇರಿದಂತೆ ಮೇಲ್ವಿಚಾರಣೆ ಹಾಗೂ ಸಮರ್ಪಕವಾಗಿ ನಿರ್ವಹಣೆಯನ್ನು 'ಡಿಜಿಟಲ್ ವಾಟರ್ ಸ್ಟ್ಯಾಕ್' (ಡಿಡಬ್ಲ್ಯುಎಸ್) ಖಚಿತಪಡಿಸಲಿದೆ ಎಂದರು.
- ಉಪಗ್ರಹ ಸೆನ್ಸರ್, ಇಮೇಜಿಂಗ್ ಮತ್ತು ಎಐ ತಂತ್ರಜ್ಞಾನಗಳ ಮೂಲಕ ಕೆರೆಗಳು ಮತ್ತು ಭೂಗರ್ಭದ ಜಲಧಾರೆಗಳ ಸಮಗ್ರ ನಿರ್ವಹಣೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.
- <u>41 ತಾಲ್ಲೂಕುಗಳಲ್ಲಿ ಡಿಡಬ್ಲ್ಯುಎಸ್: </u>ಮೊದಲ ಹಂತದಲ್ಲಿ ಅಂತರ್ಜಲವನ್ನು ಅತಿಯಾಗಿ ಬಳಕೆ ಮಾಡುತ್ತಿರುವ 41 ತಾಲ್ಲೂಕುಗಳಲ್ಲಿ ಡಿಡಬ್ಲ್ಯುಎಸ್ ಯೋಜನೆಯನ್ನು ಜಾರಿಗೆ ತರಲಾ ಗುವುದು. ಜಲಮೂಲಗಳನ್ನು 'ನೈಸರ್ಗಿಕ ಉಳಿತಾಯ ಖಾತೆ' ಗಳಂತೆ ಪರಿವರ್ತಿಸಿ, ಅವುಗಳ ಸಮರ್ಪಕ ನಿರ್ವಹಣೆಗೆ ಸರ್ಕಾರ ಬದ್ಧವಾಗಿದೆ. ಇದಕ್ಕೆ ಡಿಡಬ್ಲ್ಯುಎಸ್ ಯೋಜನೆ ಸಹಕಾರಿಯಾಗಲಿದೆ.

### <u>ಏನಿದು 'ಡಿಜಿಟಲ್ ವಾಟರ್ ಸ್ಟ್ಯಾಕ್' ?</u>

- ಉಪಗ್ರಹಗಳ ಸೆನ್ಸರ್‌ಗಳಿಂದ ಪಡೆದ ದತ್ತಾಂಶ, ಎಐ ಹಾಗೂ ಮಷಿನ್ ಲರ್ನಿಂಗ್‌ನಿಂದ ಇಮೇಜಿಂಗ್‌ನ ವಿಶ್ಲೇಷಣೆ ಮಾಡುವ ತಂತ್ರಜ್ಞಾನ 'ಡಿಜಿಟಲ್ ವಾಟರ್ ಸ್ಟ್ಯಾಕ್' (ಡಿಡಬ್ಲ್ಯುಎಸ್). ಇದರಿಂದ ಜಲಮೂಲಗಳ ಐದು ವರ್ಷಗಳ ಹಿಂದಿನ ದತ್ತಾಂಶವನ್ನು ಪಡೆದುಕೊಂಡು, ಪ್ರಸ್ತುತ ಸ್ಥಿತಿಗತಿಯನ್ನು ಹೋಲಿಕೆ ಮಾಡಬಹುದು.
- ಜಲಮೂಲದ ಸ್ವರೂಪ, ನೀರಿನ ಶೇಖರಣೆಯಲ್ಲಿ ಆಗುತ್ತಿರುವ ವ್ಯತ್ಯಾಸವನ್ನು ಗುರುತಿಸಬಹುದು. ಆ ಮೂಲಕ ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳಬಹುದಾಗಿದೆ.
- ಡಿಡಬ್ಲ್ಯುಎಸ್ ಮೂಲಕ ರಾಜ್ಯಮಟ್ಟದಲ್ಲಿ ಜಲಮೂಲಗಳ ನೀರಿನ ನಿರ್ವಹಣೆಯ ಡ್ಯಾಶ್‌ಬೋರ್ಡ್ ಮತ್ತು 'ಮಾಸ್ಟರ್ ವಾಟರ್ ಅಟ್ಲಾಸ್' ರಚನೆಯಾಗಲಿದೆ. ಅಂತರ್ಜಲದ ಮಟ್ಟ, ಮಳೆಯ ಪ್ರಮಾಣ, ಮೇಲ್ಮೈ ಹರಿವು, ಬಳಕೆ ಮತ್ತು ನೀರಿನ ಗುಣಮಟ್ಟದ ದತ್ತಾಂಶ ಸಂಗ್ರಹಿಸಲಾಗುವುದು. ಈ ಯೋಜನೆಯ ಮೂಲಕ ನಗರೀಕರಣ ಹಾಗೂ ಕೃಷಿ ಒತ್ತಡದಿಂದ

Dr. Rajkumar IAS/KAS Academy



ದೇಶದ ಮಧ್ಯಮ ವರ್ಗದ ಜನ ಮತ್ತು ಯುವಕರನ್ನು ಹಣ ಆಧಾರಿತ ಆನ್‌ಲೈನ್ ಆಟಗಳಿಂದ ರಕ್ಷಿಸಲು ಮತ್ತು ಇತರ ಆನ್‌ಲೈನ್ ಆಟಗಳನ್ನು ಪ್ರಚಾರ ಮಾಡಲು ಮತ್ತು ನಿಯಂತ್ರಿಸಲು ಕೇಂದ್ರ ಸರ್ಕಾರವು 'ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆ –2025' ಮಂಡಿಸಿದ್ದು, ಅದಕ್ಕೆ ಸಂಸತ್ತಿನಲ್ಲಿ ಅಂಗೀಕಾರ ದೊರೆತು ರಾಷ್ಟ್ರಪತಿಯವರ ಅಂಕಿತವನ್ನೂ ಪಡೆದಿದೆ. ಈ ಕಾಯ್ದೆಯಿಂದ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ನಷ್ಟವಾದರೂ ಜನರ ಜೀವ ಮತ್ತು ಆಸ್ತಿಪಾಸ್ತಿ ಉಳಿಸುವ ದಿಸೆಯಲ್ಲಿ ಇದು ಸ್ವಾಗತಾರ್ಹ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಇದೇ ವೇಳೆ, ಹಲವು ಆನ್‌ಲೈನ್ ಗೇಮಿಂಗ್ ಕಂಪನಿಗಳು ಕಾಯ್ದೆಯನ್ನು ವಿರೋಧಿಸಿವೆ

# ಆನ್‌ಲೈನ್ ಜೂಜಾಟ ಪೂರ್ಣವಿರಾಮ ಸಾಧ್ಯವೇ?

ಪ್ರಜಾವಾಣಿ ವಾರ್ತೆ

ಆನ್‌ಲೈನ್ ಆಟಗಳಿಗೆ (ಗೇಮಿಂಗ್) ಸಂಬಂಧಿಸಿದಂತೆ, ಅದರಲ್ಲೂ ವಿಶೇಷವಾಗಿ ಹಣ ಆಧಾರಿತ ಆನ್‌ಲೈನ್ ಆಟಗಳ ವಿಚಾರದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಥಿಕ ಹಾಗೂ ಕಾನೂನು ಚೌಕಟ್ಟು ಈವರೆಗೂ ಇರಲಿಲ್ಲ. ಬೆರಳೆಣಿಕೆಯಷ್ಟು ರಾಜ್ಯಗಳು ಇವುಗಳನ್ನು ನಿಷೇಧಿಸುವ ಪ್ರಯತ್ನ ಮಾಡಿದ್ದವು. ಮಧ್ಯಮ ವರ್ಗ ಮತ್ತು ಯುವಜನರ ನಡುವೆ ಜನಪ್ರಿಯವಾಗಿರುವ ಈ ಆಟಗಳಿಗೆ ಒಂದು ಕಾನೂನು ಚೌಕಟ್ಟು ರೂಪಿಸಲು, ಅವುಗಳನ್ನು ನಿಯಂತ್ರಿಸಲು, ಅವುಗಳ ಚಟುವಟಿಕೆ, ಸಂಪನ್ಮೂಲ, ಮೂಲಸೌಕರ್ಯ ಮತ್ತು ಸಂಶೋಧನೆಗೆ ವ್ಯವಸ್ಥಿತ ರೂಪ ನೀಡಲು ಕೇಂದ್ರ ಸರ್ಕಾರವು ಮೊಟ್ಟ ಮೊದಲ ಬಾರಿಗೆ 'ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆ 2025' ಕಾಯ್ದೆಯನ್ನು ಕೆಲವು ದಿನಗಳ ಹಿಂದೆಯಷ್ಟೇ ರೂಪಿಸಿದೆ. ಹಣ ಆಧಾರಿತ ಆನ್‌ಲೈನ್ ಆಟವು ಜಾಗತಿಕ ಮಟ್ಟದ ಸಮಸ್ಯೆಯಾಗಿದ್ದು, ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಒಂದು ವ್ಯಾಧಿ ಎಂದೇ ವ್ಯಾಖ್ಯಾನಿಸಿದೆ. ಆನ್‌ಲೈನ್ ಜೂಜಿನಲ್ಲಿ ತೊಡಗುವ ಜನರ ಸಂಖ್ಯೆ ಭಾರತದಲ್ಲಿಯೂ ದೊಡ್ಡ ಪ್ರಮಾಣದಲ್ಲಿದೆ. ಜನರು, ಅಪಾಯ ಮತ್ತು ನಷ್ಟದ ಅರಿವೇ ಇಲ್ಲದಂತೆ, ತಮ್ಮ ಮನಸ್ಸಿನ ಮೇಲೆ ನಿಯಂತ್ರಣ ಕಳೆದುಕೊಂಡು, ಕೆಲಸ ಕಾರ್ಯ ಬಿಟ್ಟು ಆನ್‌ಲೈನ್ ಜೂಜಿನಲ್ಲಿ ಹಣ ತೊಡಗಿಸುತ್ತಿದ್ದಾರೆ. ಅನೇಕರು ಶೀಘ್ರವಾಗಿ ಹಣ ಮಾಡುವ ಉದ್ದೇಶದಿಂದ ತಮ್ಮ ಬಳಿ ಇದ್ದ ಹಣ, ಆಸ್ತಿ ಕಳೆದುಕೊಂಡು, ಮಾನಸಿಕ ಖಿನ್ನತೆಗೆ ಗುರಿಯಾಗಿ, ಸಾಮಾಜಿಕವಾಗಿಯೂ ಪೆಟ್ಟು ತಿನ್ನುತ್ತಿದ್ದಾರೆ. ಕೆಲವರು ಆತ್ಮಹತ್ಯೆಯನ್ನೂ ಮಾಡಿಕೊಂಡಿದ್ದಾರೆ. ಇಂಥವರ ರಕ್ಷಣೆಯೇ ಕಾಯ್ದೆಯ ಉದ್ದೇಶ ಎಂದು ಕೇಂದ್ರವು ಪ್ರತಿಪಾದಿಸಿದೆ.

ಆನ್‌ಲೈನ್ ಜೂಜಿನ ಆ್ಯಪ್‌ಗಳು ಆಕರ್ಷಕವಾದ, ಅಷ್ಟೇ ಕ್ಲಿಷ್ಟವಾದ ವಿನ್ಯಾಸವನ್ನು ಹೊಂದಿದ್ದು, ಅನೇಕ ಬಾರಿ ಬಳಕೆದಾರರನ್ನು ದಾರಿ ತಪ್ಪಿಸುವಂತೆಯೂ ಇರುತ್ತವೆ. ಅವುಗಳಲ್ಲಿ ಬಳಕೆದಾರರ ರಕ್ಷಣೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯ ಕೊರತೆಯೂ ಇರುತ್ತದೆ. ಆನ್‌ಲೈನ್ ಜೂಜನ್ನು ಆಕರ್ಷಕವಾದ ಜಾಹೀರಾತುಗಳ ಮೂಲಕ ಪ್ರಚಾರ ಮಾಡಲಾಗುತ್ತದೆ. ಈ ಮೂಲಕ ಭಾರಿ ಪ್ರಮಾಣದಲ್ಲಿ ಯುವಕರನ್ನು ಮತ್ತು ಬಡ, ದುಡಿಯುವ ವರ್ಗಗಳನ್ನು ತನ್ನತ್ತ ಸೆಳೆದುಕೊಳ್ಳಲಾಗುತ್ತಿದೆ. ಜತೆಗೆ, ಆರ್ಥಿಕ ವಂಚನೆ, ಹಣ ಅಕ್ರಮ ವರ್ಗಾವಣೆ, ತೆರಿಗೆ ವಂಚನೆಗೆ ಕಾರಣವಾಗುತ್ತಿರುವುದಲ್ಲದೇ, ಭಯೋತ್ಪಾದನೆಯಂಥ ಕೃತ್ಯಗಳಿಗೆ ಹಣಕಾಸಿನ ಬೆಂಬಲ ಒದಗಿಸುವ ಮೂಲಕ ದೇಶದ ರಕ್ಷಣೆ, ಸಮಗ್ರತೆ ಮತ್ತು ಕಾನೂನು ಸುವ್ಯವಸ್ಥೆಗೂ ಕಂಟಕವಾಗುತ್ತಿವೆ.

ಡಿಜಿಟಲ್ ತಾಂತ್ರಿಕತೆಯ ಆಧಾರದಲ್ಲಿ ಕಂಪ್ಯೂಟರ್, ಮೊಬೈಲ್ ಮತ್ತು ಇಂಟರ್‌ನೆಟ್‌ಗಳ ಮೂಲಕ ನಡೆಯುತ್ತಿರುವ ಆನ್‌ಲೈನ್ ಆಟಗಳಿಂದ ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶವನ್ನು ರಕ್ಷಣೆ ಮಾಡುವ ಸಲುವಾಗಿ ಕಾಯ್ದೆ ಅಗತ್ಯವಾಗಿತ್ತು. ಜತೆಗೆ, ಅನೇಕ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳು ವಿದೇಶಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದು, ನೆಲದ ಕಾನೂನನ್ನು ಉಲ್ಲಂಘಿಸುತ್ತಿವೆ; ಈ ಮೂಲಕ ಕಾನೂನು ಮತ್ತು ರಾಜ್ಯಗಳ ವ್ಯಾಪ್ತಿ ಮೀರಿ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿವೆ. ಈ ಕಾರಣಗಳಿಂದ ಹಣ ಆಧಾರಿತ ಆನ್‌ಲೈನ್ ಆಟಗಳನ್ನು ನಿಷೇಧಿಸುವ ಕಾಯ್ದೆ ರೂಪಿಸಲಾಗಿದೆ. ಜತೆಗೆ, ಆರೋಗ್ಯಕರವಾದ ಪರ್ಯಾಯ ಆನ್‌ಲೈನ್ ಆಟಗಳನ್ನು ಉತ್ತೇಜಿಸುವುದು ಕಾಯ್ದೆಯ ಉದ್ದೇಶ ಎಂದು ಕೇಂದ್ರ ವಿವರಿಸಿದೆ.

ಕಾನೂನು ಜಾರಿಗೆ ಬಂದರೂ ದೇಶದಲ್ಲಿ ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ಜೂಜಿಗೆ ತಡೆ ಒಡ್ಡಲು ಸಾಧ್ಯವೇ ಎಂಬ ಪ್ರಶ್ನೆಯೂ ಎದ್ದಿದೆ. ಯಾಕೆಂದರೆ ಕೆಲವು ರಾಜ್ಯಗಳಲ್ಲಿ ನಿಷೇಧ ಇದ್ದರೂ, ನಿಯಮ ಉಲ್ಲಂಘಿಸಿ ಆನ್‌ಲೈನ್ ಆಟಗಳನ್ನು ಜನ ಆಡುತ್ತಿದ್ದರು. ಗೇಮಿಂಗ್ ವೇದಿಕೆಯ ಡೊಮೈನ್ ಹೆಸರನ್ನು ಬದಲಾಯಿಸುವುದು, ಡಾರ್ಕ್‌ವೆಬ್ ಮೂಲಕ ಆಟ ಆಡುವುದು ಸೇರಿದಂತೆ ಕಾನೂನು ಉಲ್ಲಂಘಿಸುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆಧಾರ: ರಾಯಿಟರ್ಸ್, ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ, ಬಿಬಿಸಿ

## ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ 'ಎ23'

ಆರ್‌ಎಂಜಿ ನಿರ್ವಹಿಸುವ ಕಂಪನಿಗಳು ಹೊಸ ಕಾನೂನನ್ನು ವಿರೋಧಿಸಿವೆ. ರಮ್ಮಿ ಮತ್ತು ಪೋಕರ್ ಆನ್‌ಲೈನ್ ಆಟಗಳನ್ನು ನಿರ್ವಹಿಸುತ್ತಿರುವ ಎ23 ಎಂಬ ಕಂಪನಿಯು ಈ ಕಾಯ್ದೆಯನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದೆ. 7 ಕೋಟಿ ಆನ್‌ಲೈನ್ ಆಟಗಾರರು ಈ ಕಂಪನಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ.

ಹಣ ಆಧಾರಿತ ಆನ್‌ಲೈನ್ ಆಟಗಳು ಕೆಲವು ವರ್ಷಗಳಿಂದೀಚೆಗೆ ತ್ವರಿತವಾಗಿ ಬೆಳವಣಿಗೆ ಕಾಣುತ್ತಿದ್ದವು. ಸರ್ಕಾರ ಅವುಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ವಿಧಿಸುತ್ತಿದ್ದರೂ ಈ ಕಂಪನಿಗಳು ಭಾರಿ ಪ್ರಮಾಣದಲ್ಲಿ ಆದಾಯ ಗಳಿಸುತ್ತಿದ್ದವು. ಆನ್‌ಲೈನ್ ಆಟದ ಮಾರುಕಟ್ಟೆಯ ಒಟ್ಟು ಮೌಲ್ಯದಲ್ಲಿ ಆರ್‌ಎಂಜಿಗಳ ಪಾಲು ಶೇ 86ರಷ್ಟಿದೆ.

ಹೊಸ ಕಾನೂನು ಆರ್‌ಎಂಜಿ ಕಂಪನಿಗಳಿಗೆ ತೀವ್ರ ಹೊಡೆತ ನೀಡಿದೆ. ಭಾರತ ಕ್ರಿಕೆಟ್ ತಂಡದ ಪ್ರಾಯೋಜಕರಾಗಿದ್ದ ಡ್ರೀಮ್ 11 ಮತ್ತು ಐಪಿಎಲ್ ಪಾಲುದಾರರಾದ ಮೈ11ಸರ್ಕಲ್ ಎರಡೂ ತಮ್ಮ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಿವೆ.

ಹಣ ಆಧಾರಿತ ಆನ್‌ಲೈನ್ ಆಟಗಳನ್ನು ಜೂಜು ಎಂದು ಪರಿಗಣಿಸಲಾಗದು, ಅವು ಕೌಶಲದ ಅಡಿಯಲ್ಲಿ ಬರುತ್ತವೆ ಎಂದು ಈ ಹಿಂದೆ ಹಲವು ರಾಜ್ಯಗಳ ಹೈಕೋರ್ಟ್‌ಗಳು ತೀರ್ಪು ನೀಡಿವೆ. ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ರಾಜ್ಯ ಮಟ್ಟದ ನಿಷೇಧವನ್ನೂ ನ್ಯಾಯಾಲಯಗಳು ರದ್ದುಪಡಿಸಿದ್ದವು. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಇಂಥದ್ದೇ ತೀರ್ಪನ್ನು ಸುಪ್ರೀಂ ಕೋರ್ಟ್ 2022ರಲ್ಲಿ ಎತ್ತಿಹಿಡಿದಿತ್ತು.

- ₹32,000 ಕೋಟಿ — 2024ರಲ್ಲಿ ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯ ಮೌಲ್ಯ
- 85.7% — ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಗೆ ಹಣ ಕಟ್ಟುವ ಆಟಗಳ (ಆರ್‌ಎಂಜಿ) ಕೊಡುಗೆ
- ₹27,000 ಕೋಟಿ — ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯಲ್ಲಿ ಆರ್‌ಎಂಜಿಯ ಪಾಲು
- 400 — ಕಾಯ್ದೆ ಜಾರಿಗೂ ಮುನ್ನ ದೇಶದಲ್ಲಿದ್ದ ಆರ್‌ಎಂಜಿ ನವೋದ್ಯಮಗಳ ಅಂದಾಜು ಸಂಖ್ಯೆ
- 2 ಲಕ್ಷ — ಆರ್‌ಎಂಜಿ ನವೋದ್ಯಮಗಳು ಸೃಷ್ಟಿಸಿದ್ದ ಉದ್ಯೋಗಗಳು
- 59 ಕೋಟಿ — ಭಾರತದಲ್ಲಿ ಆನ್‌ಲೈನ್ ಆಟಗಳನ್ನು ಆಡುವವರ ಸಂಖ್ಯೆ
- 45 ಕೋಟಿ — ಹಣ ಆಧಾರಿತ ಆನ್‌ಲೈನ್ ಆಟದಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಗುರಿಯಾದವರು
- ₹20 ಸಾವಿರ ಕೋಟಿ — ಆರ್‌ಎಂಜಿಯಲ್ಲಿ ಪ್ರತಿ ವರ್ಷ ಜನರು ಕಳೆದುಕೊಳ್ಳುತ್ತಿರುವ ಮೊತ್ತ

## ಕೆಲವು ಆಟಗಳಿಗೆ ಉತ್ತೇಜನ

ಹೊಸ ಕಾಯ್ದೆಯು ಹಣ ಕಟ್ಟುವ ಆನ್‌ಲೈನ್ ಆಟಗಳ ನಿಯಂತ್ರಣ ಮಾತ್ರ ಅಲ್ಲ, ಬದಲಿಗೆ ಕೌಶಲವನ್ನು ಬೇಡುವ ಮತ್ತು ಮನರಂಜನೆ ನೀಡುವ ಆನ್‌ಲೈನ್ ಆಟಗಳಿಗೆ ಉತ್ತೇಜನ ನೀಡುವ ಉದ್ದೇಶವನ್ನೂ ಹೊಂದಿದೆ.

ಕಾಯ್ದೆಯು ಮೂರು ರೀತಿಯ ಆನ್‌ಲೈನ್ ಆಟಗಳನ್ನು ಪಟ್ಟಿ ಮಾಡಿ, ಅವುಗಳನ್ನು ವ್ಯಾಖ್ಯಾನಿಸಿದೆ.

1 ಇ-ಕ್ರೀಡೆ: ಇದು ಸ್ಪರ್ಧಾತ್ಮಕವಾದ ಡಿಜಿಟಲ್ ಕ್ರೀಡೆ. ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಿರುವ ಡಿಜಿಟಲ್ ಟೂರ್ನಿಗಳಲ್ಲಿ ತಂಡಗಳು ಅಥವಾ ಕ್ರೀಡಾಪಟುಗಳು ಭಾಗವಹಿಸಬಹುದು. ಡಿಜಿಟಲ್ ಕ್ರೀಡೆಗಳು ಇತ್ತೀಚೆಗೆ ರೂಪಿಸಲಾಗಿರುವ ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಯ ವ್ಯಾಪ್ತಿಗೆ ಬರುತ್ತವೆ. ಇ-ಕ್ರೀಡೆಯಲ್ಲಿ ಯಶಸ್ಸು ಪಡೆಯಲು ಕ್ರೀಡಾಳುಗಳು ಕಾರ್ಯತಂತ್ರ ರೂಪಿಸಬೇಕು, ಪರಸ್ಪರ ಸಮನ್ವಯ ಮತ್ತು ಕ್ಷಿಪ್ರ ನಿರ್ಧಾರದ ಕೌಶಲ ಹೊಂದಿರಬೇಕು. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ತಂಡಗಳು ಅಥವಾ ಕ್ರೀಡಾಳುಗಳು ಪ್ರವೇಶ ಶುಲ್ಕವನ್ನು ಪಾವತಿಸಬೇಕಾಗಬಹುದು. ಆದರೆ, ಬಾಜಿ ಕಟ್ಟುವುದಕ್ಕೆ ಇದರಲ್ಲಿ ಅವಕಾಶವಿಲ್ಲ

2 ಆನ್‌ಲೈನ್ ಸಾಮಾಜಿಕ ಆಟಗಳು: ಇವು ಆನ್‌ಲೈನ್‌ನಲ್ಲಿ ಮನರಂಜನೆ, ಕಲಿಕೆ, ಕೌಶಲ ಅಭಿವೃದ್ಧಿ ಉದ್ದೇಶದಿಂದ ಆಡುವ ಆಟಗಳು. ಹಣದ ರೂಪದಲ್ಲಿ ಲಾಭ ಪಡೆಯುವ ಉದ್ದೇಶದ ಆಟಗಳು ಇವಲ್ಲ. ಆಟದಲ್ಲಿ ಭಾಗವಹಿಸುವುದಕ್ಕಾಗಿ ಒಂದು ಬಾರಿ ಪ್ರವೇಶ ಶುಲ್ಕ ಇರಬಹುದು. ಇ-ಕ್ರೀಡೆಗಿಂತ ಇದು ಭಿನ್ನವಾಗಿರುತ್ತದೆ

3 ಹಣ ಆಧಾರಿತ ಆನ್‌ಲೈನ್ ಆಟ/ಜೂಜು: ಇದು ಕೌಶಲ ಆಧಾರಿತ ಅಥವಾ ಅದೃಷ್ಟ ಆಧಾರಿತ ಅಥವಾ ಈ ಎರಡನ್ನೂ ಒಳಗೊಂಡಿರುವ ಆಟ. ಜೂಜು ಎಂದೇ ಕರೆಯಬಹುದು. ಈ ಆಟವನ್ನು ಆಡುವುದಕ್ಕೆ ಶುಲ್ಕ ಪಾವತಿಸಬೇಕು, ಹಣವನ್ನು ಠೇವಣಿ ಇರಿಸಬೇಕು. ಕಟ್ಟಿದ ಹಣಕ್ಕೆ ಪ್ರತಿಯಾಗಿ ಹೆಚ್ಚು ಹಣ ಅಥವಾ ಬೆಲೆಬಾಳುವ ವಸ್ತುಗಳನ್ನು ಗೆಲ್ಲುವ ನಿರೀಕ್ಷೆಯಲ್ಲಿ ಆಡಲಾಗುತ್ತದೆ

## ಕಾಯ್ದೆಯ ಪ್ರಮುಖ ಅಂಶಗಳು

- ಕಾಯ್ದೆಯು ಇಡೀ ಭಾರತದ ವ್ಯಾಪ್ತಿ ಹೊಂದಿರುತ್ತದೆ. ದೇಶದ ಒಳಗೆ ಹಣ ಆಧಾರಿತ ಆನ್‌ಲೈನ್ ಆಟಗಳ ಸೇವೆ ಒದಗಿಸುತ್ತಿರುವ ಅಥವಾ ವಿದೇಶಗಳಿಂದ ಕಾರ್ಯಾಚರಿಸುತ್ತಿರುವ ಕಂಪನಿಗಳಿಗೂ ಇದು ಅನ್ವಯಿಸುತ್ತದೆ
- ಹಣ ಆಧಾರಿತ ಆನ್‌ಲೈನ್ ಆಟಗಳನ್ನು ಕಾಯ್ದೆಯು ಸಂಪೂರ್ಣವಾಗಿ ನಿಷೇಧಿಸುತ್ತದೆ. ಅವಕಾಶದ ಆಟಗಳು, ಕೌಶಲದ ಆಟಗಳು ಮತ್ತು ಇವರೆಡರ ಮಿಶ್ರಣವಾಗಿರುವ ಆಟಗಳಿಗೂ ನಿಷೇಧ ಅನ್ವಯವಾಗುತ್ತದೆ
- ಜಾಹೀರಾತುಗಳ ಮೂಲಕ ಅವುಗಳ ಉತ್ತೇಜನ, ಪ್ರಚಾರ ಮಾಡುವುದಕ್ಕೆ ನಿರ್ಬಂಧ
- ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ಅನುಸಾರ ಕಾನೂನುಬಾಹಿರ ಆನ್‌ಲೈನ್ ಜೂಜಿನ ವೇದಿಕೆಗಳನ್ನು ಅಧಿಕಾರಿಗಳು ನಿರ್ಬಂಧಿಸಬಹುದು
- ತಪ್ಪುಗಳಿಗೆ ಕಂಪನಿಗಳು ಮತ್ತು ಅವುಗಳ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಲಾಗುತ್ತದೆ. ಆದಾಗ್ಯೂ, ಸ್ವತಂತ್ರ ನಿರ್ದೇಶಕರು ಮತ್ತು ದೈನಂದಿನ ನಿರ್ಧಾರಗಳಲ್ಲಿ ಪಾತ್ರ ವಹಿಸದ ಕಾರ್ಯನಿರ್ವಾಹಕೇತರ ನಿರ್ದೇಶಕರು, ತಮ್ಮ ಪಾತ್ರದ ಬಗ್ಗೆ ಸೂಕ್ತ ದಾಖಲೆ ತೋರಿಸಿದರೆ, ಅವರಿಗೆ ಶಿಕ್ಷೆ ವಿಧಿಸಲಾಗುವುದಿಲ್ಲ

## ಏನೇನು ಶಿಕ್ಷೆ?

ಆನ್‌ಲೈನ್ ಜೂಜಾಡುವವರು ಮಾತ್ರವಲ್ಲ, ಆ ಆಟಗಳನ್ನು ರೂಪಿಸುವ ಕಂಪನಿಗಳು, ಅವುಗಳ ಜಾಹೀರಾತು ಪ್ರಕಟಿಸಿ ಅವುಗಳಿಗೆ ಪ್ರೋತ್ಸಾಹ ನೀಡುವ ಮಾಧ್ಯಮಗಳು, ಜಾಹೀರಾತುಗಳಲ್ಲಿ ಅಭಿನಯಿಸಿ ಪ್ರೋತ್ಸಾಹ ನೀಡುವ ಸೆಲೆಬ್ರಿಟಿಗಳು, ಹಣಕಾಸು ನೆರವು ನೀಡುವ ಬ್ಯಾಂಕುಗಳು, ಪಾವತಿ ಸೇವೆ ಒದಗಿಸುವ ಸಂಸ್ಥೆಗಳು, ಆನ್‌ಲೈನ್ ಜೂಜಾಟಕ್ಕಾಗಿ ಇಂಟರ್‌ನೆಟ್ ಸೇವೆ ಒದಗಿಸುವ ಸಂಸ್ಥೆಗಳು... ಹೀಗೆ ಆನ್‌ಲೈನ್ ಬೆಟ್ಟಿಂಗ್‌ಗೆ ಬೆಂಬಲ ನೀಡುವ ಎಲ್ಲರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳುವ ಅವಕಾಶ ಹೊಸ ಕಾಯ್ದೆಯಲ್ಲಿದೆ.

- ಹಣ ಆಧಾರಿತ ಆನ್‌ಲೈನ್ ಆಟಗಳನ್ನು ನಡೆಸುವುದು ಅಥವಾ ಅದಕ್ಕೆ ಸಂಬಂಧಿಸಿದಂತೆ ಹಣಕಾಸು ವ್ಯವಹಾರಗಳನ್ನು ನಡೆಸುವುದು ವಿಚಾರಣೆಗೆ ಅರ್ಹವಾದ ಮತ್ತು ಜಾಮೀನುರಹಿತ ಅಪರಾಧ. ಹೀಗಾಗಿ ಆರೋಪಿಗಳನ್ನು ಪೊಲೀಸರು ವಾರಂಟ್ ಇಲ್ಲದೆ ಬಂಧಿಸಬಹುದು ಮತ್ತು ಪೂರ್ವಾನುಮತಿ ಇಲ್ಲದೆಯೇ ಸ್ಥಳ ಶೋಧನೆ ಮಾಡಬಹುದು
- ಆನ್‌ಲೈನ್ ಜೂಜಾಟಕ್ಕೆ ಅವಕಾಶ ನೀಡುವ ವ್ಯಕ್ತಿಗೆ ಗರಿಷ್ಠ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ₹1 ಕೋಟಿಯವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು. ಅಪರಾಧವನ್ನು ಪುನರಾವರ್ತಿಸಿದರೆ ಕನಿಷ್ಠ ಮೂರು ವರ್ಷಗಳಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ಕನಿಷ್ಠ ₹1 ಕೋಟಿಯಿಂದ ಗರಿಷ್ಠ ₹2 ಕೋಟಿಯವರೆಗೂ ದಂಡ ವಿಧಿಸಬಹುದು
- ಯಾವುದೇ ವ್ಯಕ್ತಿ ಜಾಹೀರಾತುಗಳನ್ನು ನಿರ್ಮಿಸಿದರೆ ಅಥವಾ ಮಾಧ್ಯಮದಲ್ಲಿ ಅವುಗಳನ್ನು ಪ್ರಸಾರ ಮಾಡಿದರೆ ಗರಿಷ್ಠ ಎರಡು ವರ್ಷ ಜೈಲು ಶಿಕ್ಷೆ ಅಥವಾ ಗರಿಷ್ಠ ₹50 ಲಕ್ಷ ದಂಡ ಅಥವಾ ಎರಡನ್ನೂ ವಿಧಿಸಬಹುದು
- ಬ್ಯಾಂಕುಗಳು, ಹಣಪಾವತಿ ಸೇವಾ ಸಂಸ್ಥೆಗಳು ಅಥವಾ ಇತರ ಹಣಕಾಸು ಸಂಸ್ಥೆಗಳು ನಿಷೇಧಿತ ಆಟಗಳಿಗೆ ಸಂಬಂಧಿಸಿದ ಹಣಕಾಸು ವ್ಯವಹಾರಕ್ಕೆ ಅವಕಾಶ ಅಥವಾ ಅದನ್ನು ದೃಢೀಕರಿಸುವಂತಿಲ್ಲ



ಪದಬಂ

ಎಡದಿಂದ ಬಲಕ್ಕೆ
1.ಯೌವ್ವನದಲ್ಲಿ ನೋಡಿದ ಅರಣ್ಯ (2)
3.ಪಿನಾಕದ ಹತ್ತಿರವಿರುವ ಕೋಗಿಲೆ (2)
6.ಮಧುರವಾದ ಧ್ವನಿ (4)
8.ಚಕ್ರ ಇಲ್ಲಿದೆ (2)
9.ಚಡಚಣದಲ್ಲಿ ಶರಣನು ನುಡಿದ ಪದ್ಯಗಳ ಸಾಲು! (3)
10.ಅನುಜನ ಹತ್ತಿರ ಕಾಣಿಸಿದ ಆಡು (2)
11.ರೇಕಣ್ಣಪ್ರಿಯ ನಾಗಿನಾಥ ಅಂಕಿತವುಳ್ಳ ವಚನಕಾರ (7)
12.ಕಾಜಾಣವನ್ನು ಹಿಡಿದಿಟ್ಟುಕೊಂಡ ಬುದ್ಧಿವಂತ! (2)
13.ಕೊನೆಗೆ ತಿರುಗಿರುವ ಮಗನಿಗೆ ಇದು ಸಲೀಸು! (3)
14.ನೋಡುವ ಅಂಗ (2)
15.ಹಣವಿರಿಸಿರುವ ಅಗಲವಾದ ತಟ್ಟೆ (4)
16.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ! (2)
17.ಸಾವಿರ ಕಾಲುಳ್ಳ ಹುಳು (2)

ಮೇಲಿಂದ ಕೆಳಕ್ಕೆ
2.ಇದು ಅಸಲಿ ಅಲ್ಲ!
4.ಕಣದಲ್ಲಿರುವ ಜ್ಞಾನೇಂದ್ರಿ
5.ಮಜದಲ್ಲಿರುವ ಚಕ್ರವರ್ತಿ
7.ಫ.ಗು.ಹಳಕಟ್ಟಿಯವರನ್ ಕರೆಯಲಾಗುತ್ತದೆ(7)
10.ಎಲವೋ ಎಂದರೆ ನರ ಹೀಗೆಂದರೆ ಸ್ವರ್ಗ!
11.ಬಡಗಣ ದಿಕ್ಕಿನಲ್ಲಿರುವ ಗುಂಪು!
12.ಯಜಮಾನನ ಹುಟ್ಟು
13.ಸುತನಲ್ಲಿರುವ ಪುಣ್ಯ!
14.ಧಾನ್ಯಗಳನ್ನು ಸಂಗ್ರಹಿಸ ಸ್ಥಳ

## ❖ ಕೋಟಿ ದಾಟಿದ ಶಾಲಾ ಶಿಕ್ಷಕರ ಸಂಖ್ಯೆ

**ಯುಡಿಐಎಸ್‌ಇ ದತ್ತಾಂಶದ ಮಾಹಿತಿ ● ದರದಲ್ಲಿ ಶೇ 6.7ರಷ್ಟು ಏರಿಕೆ**

# ಕೋಟಿ ದಾಟಿದ ಶಾಲಾ ಶಿಕ್ಷಕರ ಸಂಖ್ಯೆ

ನವದೆಹಲಿ (ಪಿಟಿಐ): ದೇಶದಲ್ಲಿ 2024–25ನೇ ಸಾಲಿನಲ್ಲಿ ಶಾಲಾ ಶಿಕ್ಷಕರ ಸಂಖ್ಯೆ ಒಂದು ಕೋಟಿ ದಾಟಿದೆ ಎಂದು ಶಿಕ್ಷಣ ಸಚಿವಾಲಯದ 'ಯುನೈಟೆಡ್ ಡಿಸ್ಟ್ರಿಕ್ಟ್ ಇನ್ಫರ್ಮೇಷನ್ ಸಿಸ್ಟಂ ಫಾರ್ ಎಜುಕೇಷನ್‌ನ (ಯುಡಿಐಎಸ್‌ಇ)' ದತ್ತಾಂಶದಿಂದ ತಿಳಿದು ಬಂದಿದೆ.

ಶಾಲಾ ಶಿಕ್ಷಕರ ಸಂಖ್ಯೆ ಕೋಟಿ ದಾಟಿರುವುದು ದೇಶದಲ್ಲಿ ಇದೇ ಮೊದಲು.

2022–23ನೇ ಸಾಲಿನಿಂದ ದತ್ತಾಂಶವನ್ನು ಗಮನಿಸಿದರೆ ಶಿಕ್ಷಕರ ಸಂಖ್ಯೆಯಲ್ಲಿ ಗಣನೀಯ ಏರಿಕೆ ದಾಖಲಾಗಿದೆ. ಅಂದರೆ 2022–23ನೇ ಸಾಲಿಗೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಶಿಕ್ಷಕರ ಸಂಖ್ಯೆ ಶೇ 6.7ರಷ್ಟು ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

**ದಾಖಲಾತಿಯಲ್ಲಿ ಇಳಿಕೆ:** ದೇಶದಲ್ಲಿ ಶಾಲಾ ದಾಖಲಾತಿ ಸಂಖ್ಯೆ 24.68 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷಕ್ಕಿಂತ 11 ಲಕ್ಷ ಕಡಿಮೆಯಾಗಿದ್ದು, ಏಳು ವರ್ಷಗಳಲ್ಲಿಯೇ ಕನಿಷ್ಠ ಮಟ್ಟವಾಗಿದೆ. ದೇಶದಲ್ಲಿ ಜನನ ಪ್ರಮಾಣ ಕುಸಿದಿರುವುದೇ ಶಾಲಾ ದಾಖಲಾತಿ ಪ್ರಮಾಣದಲ್ಲಿ ಕುಸಿತಕ್ಕೆ ಕಾರಣವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ವಿದ್ಯಾರ್ಥಿ–ಶಿಕ್ಷಕರ ಅನುಪಾತ ಸುಧಾರಣೆ:** ಯುಡಿಐಎಸ್‌ಐ ವರದಿಯು, ಫೌಂಡೇಷನ್ ಹಂತ (ಪ್ರೀಸ್ಕೂಲ್‌ನಿಂದ 2ನೇ ತರಗತವರೆಗೆ), ಪ್ರಿಪರೇಟರಿ (3ರಿಂದ 5ನೇ ತರಗತಿವರೆಗೆ), ಮಾಧ್ಯಮಿಕ (6ರಿಂದ 8ನೇ ತರಗತಿ) ಹಾಗೂ ಸೆಕೆಂಡರಿ ಹಂತಗಳಲ್ಲಿ (9ರಿಂದ 12ನೇ ತರಗತಿ) ವಿದ್ಯಾರ್ಥಿ ಶಿಕ್ಷಕರ ಅನುಪಾತವು (ಪಿಟಿಆರ್) ಈಗ ಕ್ರಮವಾಗಿ 10, 13, 17 ಮತ್ತು 21 ಆಗಿದೆ ಎಂದು ಮಾಹಿತಿ ನೀಡಿದೆ. ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ವಿದ್ಯಾರ್ಥಿ– ಶಿಕ್ಷಕರ ಅನುಪಾತವನ್ನು 1:30 ಇರಬೇಕು ಎಂದು ಶಿಫಾರಸು ಮಾಡಿದೆ. ಪಿಟಿಆರ್ ವಿಷಯದಲ್ಲಿ ಎನ್‌ಇಪಿ ಶಿಫಾರಸ್ಸಿಗಿಂತ ಗಮನಾರ್ಹ ಸುಧಾರಣೆ ಆಗಿರುವುದನ್ನು ಯುಡಿಐಎಸ್‌ಐ ದತ್ತಾಂಶ ತೋರಿಸಿದೆ.

### ಶಾಲೆ ತೊರೆಯುವವರ ದರದಲ್ಲಿ ಇಳಿಕೆ

2023–24ನೇ ಸಾಲಿಗೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಪ್ರಿಪರೇಟರಿ, ಮಾಧ್ಯಮಿಕ ಮತ್ತು ಸೆಕೆಂಡರಿ ಹಂತಗಳಲ್ಲಿ ಶಾಲೆ ತೊರೆಯುವ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಇಳಿಕೆ ದಾಖಲಾಗಿದೆ.

ಪ್ರಿಪರೇಟರಿ ಹಂತದಲ್ಲಿ ಶಾಲೆ ತೊರೆಯುವ ವಿದ್ಯಾರ್ಥಿಗಳ ಪ್ರಮಾಣ ಶೇ 3.7ರಿಂದ ಶೇ 2.3ಕ್ಕೆ, ಮಾಧ್ಯಮಿಕ ಹಂತದಲ್ಲಿ ಶೇ 5.2ರಿಂದ ಶೇ 3.5ಕ್ಕೆ ಹಾಗೂ ಸೆಕೆಂಡರಿ ಹಂತಗಳಲ್ಲಿ ಶೇ 10.9ರಿಂದ ಶೇ 8.2ಕ್ಕೆ ಇಳಿಕೆಯಾಗಿದೆ ಎಂದು ದತ್ತಾಂಶದಿಂದ ತಿಳಿದುಬರುತ್ತದೆ.



### ಕಲಿಕೆ ಮುಂದುವರಿಕೆ ಪ್ರಮಾಣ ವೃದ್ಧಿ

ಹಿಂದಿನ ವರ್ಷಕ್ಕೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಮಕ್ಕಳ ಕಲಿಕೆ ಮುಂದುವರಿಕೆ ಪ್ರಮಾಣವು ವೃದ್ಧಿಸಿದೆ. ಫೌಂಡೇಷನ್ ಹಂತದಲ್ಲಿ ಶೇ 98ರಿಂದ ಶೇ 98.9, ಪ್ರಿಪರೇಟರಿ ಹಂತದಲ್ಲಿ ಶೇ 85.4ರಿಂದ ಶೇ 92.4, ಮಾಧ್ಯಮಿಕ ಹಂತದಲ್ಲಿ ಶೇ 78ರಿಂದ ಶೇ 82.8 ಹಾಗೂ ಸೆಕೆಂಡರಿ ಹಂತದಲ್ಲಿ ಶೇ 45.6ರಿಂದ ಶೇ 47.2ಕ್ಕೆ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ. ದೇಶದಲ್ಲಿ ಏಕೋಪಾಧ್ಯಾಯ ಶಾಲೆಗಳು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 6ರಷ್ಟು ಕಡಿಮೆಯಾಗಿದೆ. ಅದೇ ರೀತಿ ಶೂನ್ಯ ದಾಖಲಾತಿ ಶಾಲೆಗಳ ಪ್ರಮಾಣ ಶೇ 38ರಷ್ಟು ಕುಸಿದಿದೆ ಎಂದಿದೆ.

## ❖ 'ಜವಳಿ ವಲಯ: ತೀವ್ರ ಪರಿಣಾಮ'

<u>**ಸಂದರ್ಭ:**</u> ಅಮೆರಿಕದ ಸುಂಕ ಜಾರಿಯು, ಮುಂದಿನ ಆರು ತಿಂಗಳಿನಲ್ಲಿ ದೇಶದ ಜವಳಿ ವಲಯದ ರಫ್ತಿನ ನಾಲ್ಕನೇ ಒಂದು ಭಾಗದ ಮೇಲೆ ತೀವ್ರ ಪರಿಣಾಮ ಬೀರಬಹುದು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಅಲ್ಲದೆ, ಕಾರ್ಯಾದೇಶ ರದ್ದುಗೊಳ್ಳುವ ಸಾಧ್ಯತೆ ಇದೆ.

- ಆದರೆ, ಡಿಸೆಂಬರ್ 31ರವರೆಗೆ ಸುಂಕ ರಹಿತ ಹತ್ತಿ ಆಮದನ್ನು ವಿಸ್ತರಿಸಿ ರುವುದು ದೇಶದ ಜವಳಿ ಉದ್ಯಮಕ್ಕೆ ಸ್ವಲ್ಪ ನೆಮ್ಮದಿ ನೀಡುವ ನಿರೀಕ್ಷೆಯಿದೆ.
- ವಲಯವು **ಮುಕ್ತ ವ್ಯಾಪಾರ ಒಪ್ಪಂದ** ಗಳನ್ನು ಬಳಸಿಕೊಳ್ಳುವ ಮೂಲಕ ಅಮೆರಿಕ ಹೊರತುಪಡಿಸಿ ಪರ್ಯಾಯ ಮಾರುಕಟ್ಟೆಗಳನ್ನು ಹುಡುಕಿ, ಸುಂಕದ ಪರಿಣಾಮ ತಗ್ಗಿಸಲು ನೋಡುತ್ತಿದೆ.
- **ಅಮೆರಿಕವು ದೇಶದ ಸಿದ್ಧ ಉಡುಪು ಉದ್ಯಮಕ್ಕೆ ಅತಿದೊಡ್ಡ ಮಾರುಕಟ್ಟೆಯಾಗಿದ್ದು, ಶೇ 5.8ರಷ್ಟು ಪಾಲು ಹೊಂದಿದೆ.** 2024-25ರಲ್ಲಿ, ಜವಳಿ ಮತ್ತು ಸಿದ್ಧ ಉಡುಪು ವಲಯದ ಒಟ್ಟಾರೆ ಗಾತ್ರವು ₹15.68 ಲಕ್ಷ ಕೋಟಿಯಾಗಿದೆ. ಇದರಲ್ಲಿ ರಫ್ತು ಮೌಲ್ಯ ₹3.24 ಲಕ್ಷ ಕೋಟಿಯಾಗಿದೆ. **ಅಮೆರಿಕದ ಬಳಿಕ ಚೀನಾ, ವಿಯೆಟ್ನಾಂ ಮತ್ತು ಬಾಂಗ್ಲಾದೇಶ ಇವೆ.**
- ಗಡುವು ವಿಸ್ತರಣೆ: ಹತ್ತಿಯನ್ನು ಸುಂಕ ಇಲ್ಲದೆ ಆಮದು ಮಾಡಿಕೊಳ್ಳಲು ಇದ್ದ ಗಡುವನ್ನು ಡಿಸೆಂಬರ್ 31ರವರೆಗೆ ಕೇಂದ್ರ ಸರ್ಕಾರ ವಿಸ್ತರಿಸಿದೆ.

- ಅಮೆರಿಕದ ಶೇ 50ರಷ್ಟು ಸುಂಕವು ದೇಶದ ಜವಳಿ ವಲಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಹೀಗಾಗಿ, ವಲಯಕ್ಕೆ ನೆರವು ನೀಡಲು ಅವಧಿ ವಿಸ್ತರಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.
- ಹತ್ತಿಗಿದ್ದ ಸುಂಕ ರಹಿತ ಆಮದು ಗಡುವನ್ನು ಇತ್ತೀಚೆಗೆ, ಆಗಸ್ಟ್ 19ರಿಂದ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗಿತ್ತು. ದೇಶದ ರಫ್ತುದಾರರಿಗೆ ಬೆಂಬಲ ನೀಡಲು ಅವಧಿಯನ್ನು ಮತ್ತೆ ವಿಸ್ತರಿಸಲಾಗಿದೆ. ಈ ಆದೇಶ ಡಿಸೆಂಬರ್ 31ರ ವರೆಗೆ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ತಿಳಿಸಿದೆ.
- ‘ಸುಂಕ ವಿನಾಯಿತಿಯಿಂದ ದೇಶದ ಜವಳಿ ವಲಯದ ಕಂಪನಿಗಳು ಕಡಿಮೆ ದರದಲ್ಲಿ ವಿವಿಧ ದೇಶಗಳಿಂದ ಹತ್ತಿಯನ್ನು ಆಮದು ಮಾಡಿಕೊಳ್ಳಲಿವೆ. ಇದು ದೇಶೀ ಮಾರುಕಟ್ಟೆಯಲ್ಲಿ ಕಚ್ಚಾ ಹತ್ತಿಯ ಲಭ್ಯತೆಯನ್ನು ಹೆಚ್ಚಿಸಲಿದ್ದು, ಹತ್ತಿ ದರವನ್ನು ಸ್ಥಿರಗೊಳಿಸಲಿದೆ’ ಎಂದು ಭಾರತದ ಹತ್ತಿ ಸಂಘದ ಅಧ್ಯಕ್ಷ ಅತುಲ್ ಗಣಾತ್ರಾ ತಿಳಿಸಿದ್ದಾರೆ.

ವಜ್ರ ಉದ್ಯಮಕ್ಕೆ ಸುಂಕ ಅಡ್ಡಿ: ಕ್ರಿಸಿಲ್

- ದೇಶದ ನೈಸರ್ಗಿಕ ವಜ್ರಗಳ ಪಾಲಿಶ್ ಉದ್ಯಮದ ವರಮಾನವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 28ರಿಂದ ಶೇ 30ರಷ್ಟು ಇಳಿಕೆ ಕಾಣಲಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ವರದಿ ತಿಳಿಸಿದೆ.
- ಭಾರತದಿಂದ ಆಮದಾಗುವ ಸರಕುಗಳ ಮೇಲೆ ಅಮೆರಿಕದ ಶೇ 50ರಷ್ಟು ಸುಂಕ ಜಾರಿಯೇ ಇದಕ್ಕೆ ಕಾರಣ ಎಂದು ತಿಳಿಸಿದೆ. 2024–25ರ ಆರ್ಥಿಕ ವರ್ಷದಲ್ಲಿ ಉದ್ಯಮದ ವರಮಾನವು ₹1.40 ಲಕ್ಷ ಕೋಟಿಯಷ್ಟಿತ್ತು. ಇದು ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹1.09 ಲಕ್ಷ ಕೋಟಿಗೆ ಇಳಿಕೆಯಾಗಬಹುದು ಎಂದು ಹೇಳಿದೆ.
- **ಅಮೆರಿಕ ಮತ್ತು ಚೀನಾವು ಭಾರತದ ಪ್ರಮುಖ ಮಾರುಕಟ್ಟೆಗಳಾಗಿವೆ**. ಪ್ರಯೋಗಾಲಯದಲ್ಲಿ ತಯಾರಿಸಿದ ವಜ್ರಗಳಿಗೆ ಬೇಡಿಕೆ ಹೆಚ್ಚಳವಾಗಿದ್ದು, ಮಾರುಕಟ್ಟೆಯಲ್ಲಿ ಶೇ 60ರಷ್ಟು ಪಾಲನ್ನು ಹೊಂದಿದೆ. ಇದು ನೈಸರ್ಗಿಕ ವಜ್ರಗಳಿಗೆ ಸ್ಪರ್ಧೆಯೊಡ್ಡಿದೆ ಎಂದು ತಿಳಿಸಿದೆ. ಚೀನಾದಲ್ಲಿ ಬೇಡಿಕೆ ಕಡಿಮೆಯಾ ಗಿರುವುದು ಸಹ ವರಮಾನ ಕಡಿಮೆ ಆಗಲು ಕಾರಣವಾಗಿದೆ ಎಂದು ತಿಳಿಸಿದೆ.
- ಅಮೆರಿಕದ ಸುಂಕ ಜಾರಿಯು ಉದ್ಯಮದ ಲಾಭದ ಪ್ರಮಾಣವನ್ನು ಕಡಿಮೆ ಮಾಡುವುದಲ್ಲದೆ, ಬೇಡಿಕೆಯನ್ನು ತಗ್ಗಿಸಲಿದೆ ಎಂದು ಹೇಳಿದೆ.
- **ಉದ್ಯಮವು ತನ್ನ ವರಮಾನದ ಶೇ 80ರಷ್ಟನ್ನು ರಫ್ತಿನಿಂದ ಪಡೆಯುತ್ತದೆ. ಈ ಪೈಕಿ ಅಮೆರಿಕದ ಪಾಲು ಶೇ 35ರಷ್ಟಿದೆ. ಅಮೆರಿಕವು ಏಪ್ರಿಲ್‌ನಲ್ಲಿ ಶೇ 10ರಷ್ಟು ಸುಂಕ ವಿಧಿಸಿದ** ನಂತರ ಮಾರಾಟದ ಮೇಲೆ ನಕಾರಾತ್ಮಕ ಪರಿಣಾಮ ಬೀರಲು ಪ್ರಾರಂಭವಾಯಿತು ಎಂದು ತಿಳಿಸಿದೆ.
- ಉದ್ಯಮವು ದೇಶದಲ್ಲಿ ಮಾರಾಟವನ್ನು ಹೆಚ್ಚಿಸುವ ಜೊತೆಗೆ ಬೇರೆ ದೇಶಗಳಲ್ಲಿ ಮಾರಾಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಕಡಿಮೆ ಸುಂಕ ಇರುವ ದೇಶಗಳಲ್ಲಿ ಘಟಕಗಳನ್ನು ಸ್ಥಾಪಿಸಬೇಕು ಎಂದು ತಿಳಿಸಿದೆ.

<u>ತೊಂದರೆ ಆಗುವ ಕ್ಷೇತ್ರಕ್ಕೆ ಸಹಾಯ</u>

- ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಹುದಾದ ಕ್ಷೇತ್ರಗಳಿಗೆ ಬೆಂಬಲವಾಗಿ ನಿಲ್ಲಲು ಸರ್ಕಾರ ವಿವಿಧ ಕ್ರಮಗಳಿಗೆ ಮುಂದಾಗಲಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.
- ‘ರಫ್ತುದಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರವು ಗಮನ ಹರಿಸಿದೆ. ಅವರಿಗೆ ಸಹಾಯ ಮಾಡಲು ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆ ಆರಂಭಿಸಿದೆ’ ಎಂದು ಹೇಳಿದ್ದಾರೆ.
- ರಫ್ತು ಉತ್ತೇಜನ ಯೋಜನೆ ಜಾರಿಗೊಳಿಸುವುದು, ರಫ್ತು ಪ್ರಕ್ರಿಯೆಯಲ್ಲಿ ವೈವಿಧ್ಯತೆ ತರುವುದು, ಸಾಲ ಮರುಪಾವತಿ ಅವಧಿ ವಿಸ್ತರಣೆ, ಹೊಸ ಮುಕ್ತ ವ್ಯಾಪಾರ ಒಪ್ಪಂದಗಳ (ಎಫ್‌ಟಿಎ) ಅನುಷ್ಠಾನ ಸೇರಿದಂತೆ ವಿವಿಧ ಕ್ರಮಗಳನ್ನು ಜಾರಿಗೊಳಿಸಲು ತಯಾರಿ ನಡೆದಿದೆ. ಅಮೆರಿಕವು ಶೇ 50ರಷ್ಟು ಸುಂಕ ಹೇರಿರುವುದರಿಂದ ಆಗಿರುವ ಪರಿಣಾಮದಿಂದ ರಫ್ತುದಾರರನ್ನು ರಕ್ಷಿಸಲು ಈ ಕ್ರಮಗಳು ನೆರವಾಗಲಿವೆ ಎಂದಿದ್ದಾರೆ.

- ರಫ್ತು ಪ್ರಕ್ರಿಯೆಯಲ್ಲಿ ವೈವಿಧ್ಯ ತರುವ ಮತ್ತು ಹೊಸ ಮಾರುಕಟ್ಟೆಗಳ ಅನ್ವೇಷಣೆಯಂತಹ ವಿಷಯಗಳ ಕುರಿತು ಚರ್ಚಿಸಲು ಹಣಕಾಸು ಸಚಿವಾಲಯವು ರಫ್ತುದಾರ ರೊಂದಿಗೆ ಸರಣಿ ಸಭೆಗಳನ್ನು ನಡೆಸುತ್ತಿದೆ.
- ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸುವ ಡೊನಾಲ್ಡ್ ಟ್ರಂಪ್ ಆಡಳಿತದ ನಿರ್ಧಾರ ಆಗಸ್ಟ್ 27ರಂದು ಜಾರಿಗೆ ಬಂದಿದೆ. ಅಮೆರಿಕದ ಮಾರುಕಟ್ಟೆ ಪ್ರವೇಶಿಸುವ ಭಾರತದ ಸರಕುಗಳ ಮೇಲಿನ ಒಟ್ಟು ಸುಂಕ ಈಗ ಶೇಕಡ 50ರಷ್ಟಾಗಿದೆ.

‘ಜಿಡಿಪಿ ಶೇ 6ಕ್ಕಿಂತ ಕಡಿಮೆ ನಿರೀಕ್ಷೆ’

- ಅಮೆರಿಕದ ಸುಂಕ ಹೇರಿಕೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6ಕ್ಕಿಂತ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಸಂಶೋಧನಾ ಏಜೆನ್ಸಿಗಳು ತಿಳಿಸಿವೆ.
- 2025–26ರಲ್ಲಿ ಆರ್ಥಿಕ ಬೆಳ ವಣಿಗೆ ಶೇ 0.20ರಷ್ಟು ಕಡಿಮೆ ಆಗಿ, ಶೇ 5.8ಕ್ಕೆ ಇಳಿಯಲಿದೆ. 2026–27ರಲ್ಲಿ ಇದು ಶೇ 5.4 ಆಗುವ ನಿರೀಕ್ಷೆ ಇದೆ ಎಂದು ಬಿಎಂಐ ಸಂಸ್ಥೆ ತಿಳಿಸಿದೆ.
- ಜಪಾನ್‌ನ ಬ್ರೋಕರೇಜ್ ಸಂಸ್ಥೆ ನೊಮುರಾ, ದೇಶದ ಆರ್ಥಿಕ ಬೆಳವಣಿಗೆ ದರವನ್ನು ಶೇ 6.2ರಿಂದ ಶೇ 5.8ಕ್ಕೆ ತಗ್ಗಿಸಿದೆ. ಸುಂಕವನ್ನು ತೆಗೆದು ಹಾಕಿದರೆ, ಶೇ 6ರಷ್ಟು ಬೆಳೆಯಬಹುದು ಎಂದು ಅಂದಾಜಿಸಿದೆ.
- ರಫ್ತು ಇಳಿಕೆಯು ಉದ್ಯೋಗ ಕಡಿತಕ್ಕೆ ಕಾರಣವಾಗುತ್ತದೆ ಮತ್ತು ಖಾಸಗಿ ಹೂಡಿಕೆ ಪ್ರಮಾಣದ ಮೇಲೆ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಎಚ್ಚರಿಸಿದ್ದಾರೆ. ಆದರೆ, ಪ್ರಸ್ತಾವಿತ ಜಿಎಸ್‌ಟಿ ಸುಧಾರಣೆಗಳು ದೇಶೀಯ ಬಳಕೆ, ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಆರ್ಥಿಕತೆಗೆ ಉತ್ತೇಜನ ನೀಡಲಿದೆ ಎಂದಿದ್ದಾರೆ.

## ❖ ವಿಳಂಬ ಧೋರಣೆ; ‘ಸುಪ್ರೀಂ’ ಪ್ರಶ್ನೆ

**ಸಂದರ್ಭ:** ವಿಧಾನಸಭೆಗಳಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕೆಲವು ರಾಜ್ಯಪಾಲರು ವಿಳಂಬ ಧೋರಣೆ ಅನುಸರಿಸುತ್ತಿರುವುದನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

- ಮಸೂದೆಗಳಿಗೆ ಅಂಕಿತ ಹಾಕದೆ ‘ಸುದೀರ್ಘ ಅವಧಿ’ ಗೆ ತಮ್ಮ ಬಳಿ ಇರಿಸಿಕೊಳ್ಳಲು ರಾಜ್ಯಪಾಲರಿಗೆ ಅನುಮತಿಸಿದರೆ, **ಸಂವಿಧಾನದ 200ನೇ ವಿಧಿ**ಯಲ್ಲಿ ಬಳಸಿರುವ ‘ಸಾಧ್ಯ ವಾದಷ್ಟು ಬೇಗ’ ಎಂಬ ಪದವು ತನ್ನ ಉದ್ದೇಶವನ್ನು ಪೂರೈಸುವುದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠ ತಿಳಿಸಿದೆ.
- **ಮಸೂದೆಗೆ ಅಂಕಿತ ಹಾಕಲು ‘ಆರು ವಾರಗಳ ಮಿತಿ’ ಯನ್ನು ಸಂವಿಧಾನ ರಚನೆಕಾರರು 200ನೇ ವಿಧಿಯಲ್ಲಿ ಉದ್ದೇಶಪೂರ್ವಕವಾಗಿ ‘ಸಾಧ್ಯವಾದಷ್ಟು ಬೇಗ’ ಎಂಬ ಪದಕ್ಕೆ ಬದಲಾಯಿಸಿದ್ದಾರೆ** ಎಂದು ಪೀಠವು ಹೇಳಿತು. ಮಸೂದೆಗಳ ಭವಿಷ್ಯವನ್ನು ನಿರ್ಧರಿಸುವಾಗ ‘ಸಾಧ್ಯವಾದಷ್ಟು ಬೇಗ’ ಎಂಬ ಪದವನ್ನು ನಿರ್ಲಕ್ಷಿಸಬಹುದೇ ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತು.
- ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ನಿಗದಿಪಡಿಸ ಬಹುದೇ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಲ್ಲೇಖಿಸಿರುವ ಸಾಂವಿಧಾನಿಕ ಪ್ರಶ್ನೆಗಳ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ವಿಕ್ರಮನಾಥ್, ಪಿ.ಎಸ್.ನರಸಿಂಹ ಮತ್ತು ಎ.ಎಸ್.ಚಂದೂರ್‌ಕರ್ ಅವರು ಪೀಠದಲ್ಲಿದ್ದಾರೆ.
- ಅರ್ಜಿ ಸಲ್ಲಿಸುವಂತಿಲ್ಲ: ವಿಧಾನಸಭೆ ಗಳಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ರಾಜ್ಯಪಾಲರು ಮತ್ತು ರಾಷ್ಟ್ರಪತಿ ಕೈಗೊಳ್ಳುವ ಕ್ರಮಗಳ ವಿರುದ್ಧ ರಾಜ್ಯ ಸರ್ಕಾರಗಳು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವಂತಿಲ್ಲ ಎಂದು ಕೇಂದ್ರ ಸರ್ಕಾರ ಇದಕ್ಕೂ ಮುನ್ನ ಸುಪ್ರೀಂ ಕೋರ್ಟ್‌ಗೆ ತಿಳಿಸಿತು.
- **ಮೂಲಭೂತ ಹಕ್ಕುಗಳ ಉಲ್ಲಂಘನೆ ವಿಚಾರದಲ್ಲಿ ರಾಜ್ಯಗಳು ಸಂವಿಧಾನದ 32ನೇ ವಿಧಿಯ ಅಡಿಯಲ್ಲಿ ರಿಟ್ ಅರ್ಜಿ ಸಲ್ಲಿಸಬಹುದೇ ಎಂಬ ಬಗ್ಗೆ ರಾಷ್ಟ್ರಪತಿ ಯವರು ಸುಪ್ರೀಂ ಕೋರ್ಟ್‌ನ**

**ಅಭಿಪ್ರಾಯವನ್ನು ಪಡೆಯಲು ಬಯಸುತ್ತಾರೆ** ಎಂದು ಕೇಂದ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು.

- **ತಮಿಳುನಾಡು ಸರ್ಕಾರ ಮತ್ತು ಅಲ್ಲಿನ ರಾಜ್ಯಪಾಲರ ನಡುವಿನ ಪ್ರಕರಣದಲ್ಲಿ** ಸುಪ್ರೀಂ ಕೋರ್ಟ್ ಏಪ್ರಿಲ್ 8ರಂದು ನೀಡಿದ್ದ ತೀರ್ಪನ್ನು ಸಾಲಿಸಿಟರ್ ಜನರಲ್ ಉಲ್ಲೇಖಿಸಿದರು. ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ನಿಗದಿತ ಕಾಲಮಿತಿ ಯೊಳಗೆ ಅಂಕಿತ ಹಾಕದಿದ್ದರೆ ರಾಜ್ಯಗಳು ನೇರವಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಬಹುದು ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿತ್ತು. ಇಬ್ಬರು ನ್ಯಾಯಮೂರ್ತಿಗಳ ಪೀಠ ಏಪ್ರಿಲ್ 8ರಂದು ನೀಡಿದ್ದ ತೀರ್ಪಿನ ಬಗ್ಗೆ ಯಾವುದೇ ಅಭಿಪ್ರಾಯ ಹೇಳುವುದಿಲ್ಲ ಎಂದ ಸಿಜೆಐ ತಿಳಿಸಿದರು. ಆದರೆ, ರಾಜ್ಯಪಾಲರು ಮಸೂದೆಯನ್ನು ಆರು ತಿಂಗಳವರೆಗೆ ತಮ್ಮಲ್ಲೇ ಇಟ್ಟುಕೊಳ್ಳುವುದು ಸಮರ್ಥನೀಯವಲ್ಲ ಎಂದರು.

**'ಕಾರ್ಯಾಂಗದ ಮೇಲೆ ಅಧಿಕಾರ ಚಲಾಯಿಸಬಾರದು'**

- ರಾಜ್ಯಪಾಲರು ರಾಜ್ಯ ಕಾರ್ಯಾಂಗ ಮತ್ತು ಶಾಸಕಾಂಗದ ಮೇಲೆ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ ಎಂದು ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.
- 'ರಾಜ್ಯಪಾಲರು ಶಾಸಕಾಂಗದ ಮೇಲೆ ಅಧಿಕಾರ ಚಲಾಯಿಸುವುದು 'ಒಂದೇ ಒರೆಯಲ್ಲಿ ಎರಡು ಕತ್ತಿ' ಗಳನ್ನು ಇಡುವುದಕ್ಕೆ ಸಮಾನ. ಅದಕ್ಕೆ ಅವಕಾಶ ನೀಡಿದರೆ ರಾಜ್ಯಪಾಲರು ಸೂಪರ್ ಮುಖ್ಯಮಂತ್ರಿಯಾಗುವರು. ಚುನಾಯಿತ ಮುಖ್ಯಮಂತ್ರಿ ಪ್ರಜಾಪ್ರಭುತ್ವ ತತ್ವಗಳಡಿ ಕಾರ್ಯ ನಿರ್ವಹಿಸುವುದಕ್ಕೆ ತಡೆ ಉಂಟಾಗಬಹುದು' ಎಂದು ತಮಿಳುನಾಡು ಸರ್ಕಾರ ವನ್ನು ಪ್ರತಿನಿಧಿಸಿದ ಹಿರಿಯ ವಕೀಲ ಎ.ಎಂ.ಸಿಂಘ್ವಿ ವಾದಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಿಜೆಐ ಬಿ.ಆರ್.ಗವಾಯಿ, 'ನಾನು ಸಾಲಿಸಿಟರ್ ಜನರಲ್ ಅವರಿಗೆ ಆರಂಭದಿಂದಲೂ ಇದನ್ನೇ ಕೇಳುತ್ತಿದ್ದೇನೆ' ಎಂದರು.
- **ಮಹಾರಾಷ್ಟ್ರ ಸರ್ಕಾರದ ಪರವಾಗಿ ಹಾಜರಾದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರು, ರಾಜ್ಯಪಾಲರು ಹಣಕಾಸು ಮಸೂದೆಗಳಿಗೆ ಒಪ್ಪಿಗೆ ನೀಡುವುದನ್ನೂ ನಿರಾಕರಿಸಬಹುದು ಎಂದು ವಾದಿಸಿದರು.**

**ಮೆಹ್ತಾ ವಾದ...**

- lರಾಜ್ಯಪಾಲರು ಮತ್ತು ರಾಷ್ಟ್ರಪತಿಯ ವಿರುದ್ಧ ರಾಜ್ಯ ಗಳು ಸಂವಿಧಾನದ 32ನೇ ವಿಧಿಯಡಿ ಅರ್ಜಿ ಸಲ್ಲಿಸುವುದು ಸಮರ್ಥ ನೀಯವಲ್ಲ
- lರಾಜ್ಯ ಸರ್ಕಾರಗಳು ಈ ವಿಚಾರದಲ್ಲಿ ಯಾವುದೇ ನಿರ್ದೇಶನಗಳನ್ನು ನೀಡುವಂತಿಲ್ಲ
- lಮಸೂದೆಗಳ ಬಗ್ಗೆ ರಾಷ್ಟ್ರಪತಿ ಮತ್ತು ರಾಜ್ಯಪಾಲರು ನಿರ್ಧಾರ ತೆಗೆದುಕೊಳ್ಳುವ ವಿಚಾರವು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡುವಂತಿಲ್ಲ

## ❖ ವಾಯು ಮಾಲಿನ್ಯ ಕಡಿತಗೊಳಿಸಿದ 3.5 ವರ್ಷ ಅಧಿಕ ಆಯಸ್ಸು

**ಸಂದರ್ಭ:** ವಿಶ್ವ ಆರೋಗ್ಯ ಸಂಸ್ಥೆ ಮಾರ್ಗಸೂಚಿಯ ಅನುಸಾರ ವಾಯು ಮಾಲಿನ್ಯವನ್ನು ತಡೆಗಟ್ಟಿದರೆ ಭಾರತದ ಜನರ ಸರಾಸರಿ ಜೀವಿತಾವಧಿಯು 3.5 ವರ್ಷ ಅಧಿಕಗೊಳ್ಳಲಿದೆ ಎಂದು ಷಿಕಾಗೊ ವಿಶ್ವವಿದ್ಯಾಲಯದ 'ದಿ ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್' ವಿಭಾಗವು ಬಿಡುಗಡೆ ಮಾಡಿರುವ 2025ರ ತನ್ನ ವರದಿಯಲ್ಲಿ ಹೇಳಿದೆ.

- ವಾಯು ಮಾಲಿನ್ಯಕಾರಕ ಕಣಗಳ ಪ್ರಮಾಣವನ್ನು ಶೇ 40ರಷ್ಟು ಕಡಿತ ಮಾಡುವುದಾಗಿ ಕೇಂದ್ರ ಸರ್ಕಾರವು 2017ರಲ್ಲಿ ಗುರಿ ಹಾಕಿಕೊಂಡಿತ್ತು. ಒಂದು ವೇಳೆ 2026ರ ಒಳಗೆ ಈ ಗುರಿಯನ್ನು ತಲುಪಿದರೆ ಜನರ ಜೀವಿತಾವಧಿ ಅಧಿಕಗೊಳ್ಳಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

Dr. Rajkumar IAS/KAS Academy

- 2023ರಲ್ಲಿ ಗಾಳಿಯಲ್ಲಿ ಮಾಲಿನ್ಯ ಕಾರಕ ಕಣಗಳ ಗಾತ್ರವು 2.5ರಷ್ಟಿತ್ತು. ಇದು ವಿಶ್ವ ಆರೋಗ್ಯ ಸಂಸ್ಥೆಯ ಸರಾಸರಿಗಿಂತಲೂ 8 ಪಟ್ಟು ಅಧಿಕವಾಗಿದೆ. 2023ರ ಪ್ರಮಾಣವು 2022ರಲ್ಲಿ ಇದ್ದ ಪ್ರಮಾಣಕ್ಕಿಂತಲೂ ಅಧಿಕವಾಗಿತ್ತು.
- ಒಂದು ಘನ ಮೀಟರ್‌ನಷ್ಟು ಗಾಳಿಯಲ್ಲಿ 2.5ರಷ್ಟು ಗಾತ್ರದಲ್ಲಿ ಇರುವ ಮಾಲಿನ್ಯಕಾರಕ ಕಣಗಳು 40 ಮೈಕ್ರೊಗ್ರಾಂನಷ್ಟು ಇರಬಹುದು ಎಂದು ಭಾರತವು ಮಿತಿ ಹಾಕಿ ಕೊಂಡಿದೆ. ಭಾರತದ ಶೇ 46ರಷ್ಟು ಜನ ವಾಸಿಸುವ ಪ್ರದೇಶದಲ್ಲಿ ಮಾಲಿನ್ಯಕಾರಕ ಕಣಗಳ ಪ್ರಮಾಣ ನಾವೇ ಹಾಕಿಕೊಂಡ ಮಿತಿಯನ್ನು ಮೀರುತ್ತವೆ ಎಂದು ವರದಿ ಹೇಳಿದೆ.

**ರಾಜ್ಯ: 1.4 ವರ್ಷ ಅಧಿಕ ಜೀವಿತಾವಧಿ**

- ವಾಯು ಮಾಲಿನ್ಯದ ವಿಚಾರದಲ್ಲಿ ಉತ್ತರ ಭಾರತದ ಹೋಲಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಉತ್ತಮ ಸ್ಥಿತಿ ಇದೆ.
- **ವಿಶ್ವ ಸಂಸ್ಥೆಯ ಮಾರ್ಗಸೂಚಿಯನ್ನು ಪಾಲಿಸಿದರೆ ಕರ್ನಾಟಕದ ಜನರ ಸರಾಸರಿ ಜೀವಿತಾವಧಿಯು 1.5 ವರ್ಷ ಅಧಿಕಗೊಳ್ಳಲಿದೆ.**
- ಆಂಧ್ರ ಪ್ರದೇಶದ ಜನರ ಜೀವಿತಾವಧಿಯು 2.1, ತೆಲಂಗಾಣದ ಜನರದ್ದು 2.4, ತಮಿಳುನಾಡಿನ ಜನರ ಜೀವಿತಾವಧಿಯು 1.7 ವರ್ಷ ಅಧಿಕಗೊಳ್ಳಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

## ❖ ಡೈಮಂಡ್ ಲೀಗ್: ನೀರಜ್‌ಗೆ ಬೆಳ್ಳಿ

**ಸಂದರ್ಭ:** ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಜೂರಿಕ್‌ನಲ್ಲಿ ಗುರುವಾರ ರಾತ್ರಿ ನಡೆದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ರಾತ್ರಿ ಇಲ್ಲಿ ನಡೆದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಲೀಗ್‌ನಲ್ಲಿ ಅವರಿಗೆ ಇದು ನಾಲ್ಕನೇ ಪದಕ ಮತ್ತು ಹ್ಯಾಟ್ರಿಕ್ ಬೆಳ್ಳಿ ಆಗಿದೆ.

- 2022ರಲ್ಲಿ ಚಿನ್ನ ಗೆದ್ದರೆ, 2023 ಮತ್ತು 24ರಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಮೇ ತಿಂಗಳಿನಲ್ಲಿ ನಡೆದ ದೋಹಾ ಡೈಮಂಡ್ ಲೀಗ್ ಕೂಟದಲ್ಲಿ ಜೀವನಶ್ರೇಷ್ಠ 90.30 ಮೀಟರ್ ಸಾಧನೆ ಮೆರೆದಿದ್ದ ನೀರಜ್, ಇಲ್ಲಿ 85 ಮೀ. ಗಡಿ ದಾಟಲು ಪ್ರಯಾಸಪಟ್ಟರು.
- ಹಾಲಿ ವಿಶ್ವ ಚಾಂಪಿಯನ್ ಆಗಿರುವ 27 ವರ್ಷದ ನೀರಜ್ ಮೊದಲೆರಡು ಪ್ರಯತ್ನದಲ್ಲಿ 84.35 ಮೀ, 82 ಮೀ. ದೂರ ಈಟಿ ಎಸೆದರು. ನಂತರದ ಮೂರು ಪ್ರಯತ್ನಗಳು ಫೌಲ್ ಆದವು. ಕೊನೆಯ ಮತ್ತು ಆರನೇ ಪ್ರಯತ್ನದಲ್ಲಿ 85.01 ಮೀ. ಸಾಧನೆಯೊಂದಿಗೆ ಬೆಳ್ಳಿ ಖಚಿತಪಡಿಸಿಕೊಂಡರು.
- ಜರ್ಮನಿಯ ತಾರೆ ಜೂನಿಯನ್ ವೆಬರ್ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ದೊಂದಿಗೆ ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಅವರು ಮೊದಲೆರಡು ಪ್ರಯತ್ನದಲ್ಲಿ ಕ್ರಮವಾಗಿ 91.37 ಮೀ. ಮತ್ತು 91.51 ಮೀ. ದೂರಕ್ಕೆ ಈಟಿ ಎಸೆದು, ಆರಂಭದಲ್ಲೇ ಅಗ್ರಸ್ಥಾನ ಖಾತರಿ ಪಡಿಸಿಕೊಂಡರು.
- ಮೊದಲ ಪ್ರಯತ್ನದಲ್ಲಿ 84.95 ಮೀ. ಈಟಿ ಎಸೆದ ಟ್ರಿನಿಡ್ಯಾಡ್‌ನ ಕೆಶಾರ್ನ್ ವಾಲ್ಕಾಟ್ ಕಂಚಿನ ಪದಕ ಗೆದ್ದರು.

Dr Rajkumar Academy

## ❖ ಗುರುಪ್ರೀತ್‌ಗೆ ಚಿನ್ನ

**ಸಂದರ್ಭ:** ಭಾರತದ ಶೂಟರ್‌ಗಳಾದ ಗುರುಪ್ರೀತ್ ಸಿಂಗ್ ಮತ್ತು ಅಮನ್‌ಪ್ರೀತ್ ಸಿಂಗ್ ಅವರು ಗುರುವಾರ ಏಷ್ಯನ್ ಚಾಂಪಿಯನ್‌ಷಿಪ್‌ನ ಪುರುಷರ 25 ಮೀಟರ್ ಸ್ಟ್ಯಾಂಡರ್ಡ್ ಪಿಸ್ತೂಲ್ ವಿಭಾಗದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

- ಸೀನಿಯರ್, ಜೂನಿಯರ್ ಮತ್ತು ಯೂತ್ ವಿಭಾಗಗಳಲ್ಲಿ ಭಾರತದ ಪದಕಗಳ ಸಂಖ್ಯೆಯನ್ನು 82ಕ್ಕೆ ಏರಿಕೆಯಾಗಿದೆ. ಅದರಲ್ಲಿ 44 ಚಿನ್ನ, 20 ಬೆಳ್ಳಿ ಮತ್ತು 18 ಕಂಚು ಸೇರಿವೆ.
- ಗುರುಪ್ರೀತ್, ಅಮನ್‌ಪ್ರೀತ್ ಅವರು ಹರ್ಷ್ ಗುಪ್ತಾ ಅವರ ಜೊತೆಗೂಡಿ ಒಟ್ಟು 1709 ಅಂಕ ಗಳಿಸಿ, ತಂಡ ವಿಭಾಗದಲ್ಲಿ ಚಾಂಪಿಯನ್ ಆದರು. ಜೂನಿಯರ್ ಬಾಲಕರ ವಿಭಾಗದಲ್ಲಿ 50 ಮೀಟರ್ ರೈಫಲ್ ಪ್ರೋನ್ ತಂಡ ಮತ್ತು 25 ಮೀಟರ್ ಸ್ಟ್ಯಾಂಡರ್ಡ್ ಪಿಸ್ತೂಲ್ ತಂಡವೂ ಚಿನ್ನ ಗೆದ್ದಿತು.
- 37 ವರ್ಷದ ಗುರುಪ್ರೀತ್ ಅವರಿಗೆ ಇದು ಅಂತರಾಷ್ಟ್ರೀಯ ಸ್ಪರ್ಧೆಯಲ್ಲಿ ಮೊದಲ ಚಿನ್ನದ ಪದಕವಾಗಿದೆ. 12 ವರ್ಷಗಳ ಹಿಂದೆ ಟೆಹ್ರಾನ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನ ಇದೇ ವಿಭಾಗದ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದರು.

IAS/KAS Academy



## ❖ ತೆರಿಗೆ ನಷ್ಟ ಭರ್ತಿಗೆ ಬಿಗಿಪಟ್ಟು


**ಸಂದರ್ಭ:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿನ ತೆರಿಗೆ ಹಂತಗಳನ್ನು ಕಡಿಮೆ ಮಾಡುವುದರಿಂದ ವಾರ್ಷಿಕ ₹85 ಸಾವಿರ ಕೋಟಿಯಿಂದ ₹2.5 ಲಕ್ಷ ಕೋಟಿ ವರೆಗೆ ವರಮಾನ ನಷ್ಟವಾಗಲಿದೆ. ಈ ನಷ್ಟವನ್ನು ತುಂಬಿ ಕೊಡಬೇಕು ಎಂದು ಕರ್ನಾಟಕ ಸೇರಿ ಎಂಟು ರಾಜ್ಯಗಳು ಹಕ್ಕೊತ್ತಾಯ ಮಂಡಿಸಿವೆ.

- ಸಮಾನ ಮನಸ್ಕ ರಾಜ್ಯಗಳ ಹಣಕಾಸು ಸಚಿವರು ಶುಕ್ರವಾರ ಇಲ್ಲಿ ಸಭೆ ಸೇರಿ ಜಿಎಸ್‌ಟಿ ಸರಳೀಕರಣದ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿದರು. ಸೆಪ್ಟೆಂಬರ್ 3 ಮತ್ತು 4ರಂದು ನಡೆಯಲಿರುವ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ತಮ್ಮ ರಾಜ್ಯಗಳ ಹಿತ ರಕ್ಷಿಸಲು ವಿವಿಧ ಬೇಡಿಕೆಗಳನ್ನು ಮುಂದಿಡಲು ತೀರ್ಮಾನಿಸಿದರು.
- 2017ರಲ್ಲಿ ಜಿಎಸ್‌ಟಿ ವ್ಯವಸ್ಥೆ ಜಾರಿಯಾದ ಸಂದರ್ಭದಲ್ಲಿ ರಾಜ್ಯಕ್ಕೆ ₹25 ಸಾವಿರ ಕೋಟಿಯಿಂದ ₹30 ಸಾವಿರ ಕೋಟಿಯಷ್ಟು ನಷ್ಟ ಉಂಟಾಯಿತು. ವರಮಾನ ನಷ್ಟ ಸರಿದೂಗಿಸಲು ರಾಜ್ಯಗಳಿಗೆ ಐದು ವರ್ಷ ಪರಿಹಾರ ನೀಡಲಾಯಿತು. ಪರಿಹಾರ ವ್ಯವಸ್ಥೆಯನ್ನು ಇನ್ನಷ್ಟು ವರ್ಷ ಮುಂದುವರಿಸಬೇಕು ಎಂಬ ರಾಜ್ಯದ ಮನವಿಗೆ ಕೇಂದ್ರ ಕಿವಿಗೊಡಲಿಲ್ಲ. ಹೊಸ ವ್ಯವಸ್ಥೆ ಜಾರಿಗೆ ಬಂದರೆ ರಾಜ್ಯಕ್ಕೆ ವಾರ್ಷಿಕ ₹15 ಸಾವಿರ ವರಮಾನ ಖೋತಾ ಆಗಲಿದೆ. ಅದನ್ನು ಕೇಂದ್ರ ತುಂಬಿ ಕೊಡಬೇಕು ಎಂಬುದು ರಾಜ್ಯದ ಬೇಡಿಕೆಯಾಗಿದೆ.
- ತೆರಿಗೆ ಹಂಚಿಕೆ ಸೇರಿದಂತೆ ಒಟ್ಟು ಸಂಪನ್ಮೂಲ ಹಂಚಿಕೆಯಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರ ನಿರಂತರ ಅನ್ಯಾಯ ಮಾಡುತ್ತಿದೆ ಎಂದು ರಾಜ್ಯ ಸರ್ಕಾರ ವರ್ಷಗಳಿಂದ ಆರೋಪಿಸುತ್ತಿದೆ. ಕರ್ನಾಟಕದಿಂದ ಸಂಗ್ರಹವಾಗುವ ಒಂದು ರೂಪಾಯಿ ತೆರಿಗೆಯಲ್ಲಿ 15 ಪೈಸೆ ಮಾತ್ರ ವಾಪಸ್ ಬರುತ್ತಿದೆ ಎಂದು ದೂರಿದೆ. ಜಿಎಸ್‌ಟಿ ವ್ಯವಸ್ಥೆ ಸರಳೀಕರಣ ದಿಂದ ರಾಜ್ಯಕ್ಕೆ ಮತ್ತಷ್ಟು ಹೊಡೆತ ಬೀಳಲಿದೆ ಎಂದು ರಾಜ್ಯ ಸರ್ಕಾರ ಬಲವಾಗಿ ಪ್ರತಿಪಾದಿಸಿದೆ.
- ಹೀಗಾಗಿ, ರಾಜ್ಯ ಸರ್ಕಾರ ಮುಂಚೂಣಿಯಲ್ಲಿ ನಿಂತು ಸಮಾನ ಮನಸ್ಕರ ರಾಜ್ಯಗಳನ್ನು ಒಗ್ಗೂಡಿಸಿ ಕೇಂದ್ರದ ವಿರುದ್ಧ ಧ್ವನಿ ಎತ್ತಲು ಅಣಿಯಾಗಿದೆ.
- **ಶೇ 20ರಷ್ಟು ಆದಾಯ ನಷ್ಟ:** ***‘ಕೇಂದ್ರದ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 28ರಷ್ಟು ಮಾತ್ರ. ಉಳಿದ ಶೇ 72ರಷ್ಟು ಆದಾಯವನ್ನು ವಿವಿಧ ಮೂಲಗಳಿಂದ ಗಳಿಸುತ್ತದೆ. ನೇರ ತೆರಿಗೆ, ಆದಾಯ ತೆರಿಗೆ, ಕಸ್ಟಮ್ಸ್, ಡಿವಿಡೆಂಟ್ ಹಾಗೂ ವಿವಿಧ ಸೆಸ್‌ಗಳು ಕೇಂದ್ರದ ಆದಾಯದ ಮೂಲ. ಸೆಸ್ ಮೂಲಕವೇ ಕೇಂದ್ರ ಸರ್ಕಾರ ಶೇ 17ರಿಂದ ಶೇ 20ರಷ್ಟು ಆದಾಯ ಗಳಿಸುತ್ತದೆ. ಸೆಸ್ ಆದಾಯದಲ್ಲಿ ಒಂದು ರೂಪಾಯಿಯನ್ನೂ ಕೇಂದ್ರ ಸರ್ಕಾರವು ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ಆದರೆ, ರಾಜ್ಯಗಳ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 50ರಷ್ಟು. ಹೀಗಾಗಿ ಅಭಿವೃದ್ಧಿಗಾಗಿ ಹಾಗೂ ಆದಾಯ ಸಂಗ್ರಹಣೆಗೆ ರಾಜ್ಯಗಳು ಜಿಎಸ್‌ಟಿಯನ್ನೇ ನೆಚ್ಚಿಕೊಂಡಿವೆ. ಇಂ***ತಹ ಸಂದರ್ಭದಲ್ಲಿ ರಾಜ್ಯಗಳ ಆದಾಯದಲ್ಲಿ ಶೇ 20ರಷ್ಟು ನಷ್ಟವಾದರೆ ರಾಜ್ಯಗಳ ಆರ್ಥಿಕ ಸ್ವಾಯತ್ತತೆಗೆ ಹೊಡೆತ ಬೀಳುತ್ತದೆಎಂದು ಕರ್ನಾಟಕ ಕಳವಳ ವ್ಯಕ್ತಪಡಿಸಿದೆ.

Dr. Rajkumar IAS/KAS Academy

## ❖ ಜಿಡಿಪಿ: 15 ತಿಂಗಳಲ್ಲೇ ಗರಿಷ್ಠ

**<u>ಸಂದರ್ಭ:</u>** ಭಾರತದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರವು ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ನಿರೀಕ್ಷೆಗೂ ಮೀರಿ ಶೇಕಡ 7.8ಕ್ಕೆ ಏರಿಕೆ ಕಂಡಿದೆ. ಇದು ಕಳೆದ ಐದು ತ್ರೈಮಾಸಿಕಗಳಲ್ಲಿ (15 ತಿಂಗಳಲ್ಲಿ) ದಾಖಲಾಗಿರುವ ಗರಿಷ್ಠ ಮಟ್ಟದ ಜಿಡಿಪಿ ಬೆಳವಣಿಗೆಯಾಗಿದೆ.




- 2024ರ ಜನವರಿ –ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಶೇ 8.4ರಷ್ಟಾಗಿತ್ತು. ಇದು ಇದುವರೆಗಿನ ದಾಖಲೆಯಾಗಿತ್ತು.
- ಚೀನಾದ ಜಿಡಿಪಿ ಬೆಳವಣಿಗೆಯು ಏಪ್ರಿಲ್- ಜೂನ್ ತ್ರೈಮಾಸಿಕದಲ್ಲಿ ಶೇ 5.2ರಷ್ಟಿದೆ. ಚೀನಾಕ್ಕೆ ಹೋಲಿಸಿದರೆ ಭಾರತವು ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎನಿಸಿಕೊಂಡಿದೆ.
- ಭಾರತದ ಮೇಲೆ ಅಮೆರಿಕ ಹೇರಿರುವ ಶೇ 50ರಷ್ಟು ಸುಂಕವು ಜಾರಿಗೆ ಬಂದಿದೆ.
- ಈಗ ದಾಖಲಾಗಿರುವ ಜಿಡಿಪಿಯು ಅಮೆರಿಕ ಹೆಚ್ಚುವರಿ ಸುಂಕ ವಿಧಿಸುವ ಮೊದಲಿನ ಪ್ರಗತಿ ದರ. ಆದರೆ, 'ಟ್ರಂಪ್ ಸುಂಕ' ದಿಂದ ದೇಶದ ಜವಳಿ, ವಜ್ರ, ಆಭರಣ ಮತ್ತು ಚರ್ಮದ ಉದ್ಯಮಗಳು ಹೆಚ್ಚು ಬಾಧಿತವಾಗಲಿವೆ. ಹೀಗಾಗಿ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರದಲ್ಲಿ ಇಳಿಕೆಯಾಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.
- ಕೃಷಿ, ವ್ಯಾಪಾರ, ಹೋಟೆಲ್, ಹಣಕಾಸು, ರಿಯಲ್ ಎಸ್ಟೇಟ್ ವಲಯಗಳಲ್ಲಿನ ಗಣನೀಯ ಪ್ರಗತಿಯಿಂದ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಉತ್ತಮ ಬೆಳವಣಿಗೆ ಕಂಡಿದೆ ಎಂದು ರಾಷ್ಟ್ರೀಯ ಅಂಕಿಅಂಶಗಳ ಕಚೇರಿ (ಎನ್‌ಎಸ್‌ಒ) ಹೇಳಿದೆ.
- 'ಎನ್‌ಎಸ್‌ಒ ' ಪ್ರಕಟಣೆ ಪ್ರಕಾರ, 2025–26ರ ಮೊದಲ ತ್ರೈಮಾಸಿಕದಲ್ಲಿ ವಾಸ್ತವ ಜಿಡಿಪಿ ಸ್ಥಿರ ಬೆಲೆಯು ₹47.89 ಲಕ್ಷ ಕೋಟಿ ಆಗಿದೆ. 2024–25ರ ಮೊದಲ ತ್ರೈಮಾಸಿಕ ದಲ್ಲಿ ಇದು ₹44. 42 ಲಕ್ಷ ಕೋಟಿ ಇತ್ತು.

### ಆರ್‌ಬಿಐ ಅಂದಾಜಿಗಿಂತ ಹೆಚ್ಚಿನ ಪ್ರಗತಿ

- ಭಾರತೀಯ ರಿಸರ್ವ್ ಬ್ಯಾಂಕ್ ಈಚೆಗೆ ಬಿಡುಗಡೆ ಮಾಡಿದ ವರದಿಯಲ್ಲಿ, ಭಾರತದ ವಾಸ್ತವ ಜಿಡಿಪಿ ಬೆಳವಣಿಗೆ ದರವು 2025–26ರಲ್ಲಿ ಶೇ 6.5ರಷ್ಟು ಇರಲಿದೆ ಎಂದು ಹೇಳಿತ್ತು. ಮೊದಲ ತ್ರೈಮಾಸಿಕದಲ್ಲಿ ಶೇ 6.5, ಎರಡನೆಯ ತ್ರೈಮಾಸಿಕದಲ್ಲಿ 6.7, ಮೂರನೆಯ ತ್ರೈಮಾಸಿಕದಲ್ಲಿ ಶೇ 6.6 ಮತ್ತು ನಾಲ್ಕನೆಯ ತ್ರೈಮಾಸಿಕದಲ್ಲಿ ಶೇ 6.3ರಷ್ಟು ಜಿಡಿಪಿ ದಾಖಲಾಗಲಿದೆ ಎಂದು ಅಂದಾಜಿಸಿತ್ತು. ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಆರ್‌ಬಿಐ ಅಂದಾಜಿಗಿಂತ ಹೆಚ್ಚಿನ ಜಿಡಿಪಿ ಬೆಳವಣಿಗೆ ದರ ದಾಖಲಾಗಿದೆ.

### ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ

- ಮುಂಬೈ (ಪಿಟಿಐ): ಭಾರತದ ಮೇಲೆ ಅಮೆರಿಕ ಹೇರಿರುವ ಶೇಕಡ 50ರಷ್ಟು ಸುಂಕವು, ರೂಪಾಯಿ ವಿನಿಮಯ ಮೌಲ್ಯದ ಮೇಲೆ ಗಂಭೀರ ಪರಿಣಾಮ ಬೀರಿದ್ದು, ವಹಿವಾಟಿನಲ್ಲಿ ರೂಪಾಯಿ ಮೌಲ್ಯ ಡಾಲರ್ ವಿರುದ್ಧ ಸಾರ್ವಕಾಲಿಕ ದಾಖಲೆ ಮಟ್ಟವಾದ ₹88.09ಕ್ಕೆ ಕುಸಿದಿದೆ.
- ಡಾಲರ್ ವಿರುದ್ಧ ರೂಪಾಯಿ ಮೌಲ್ಯ ₹88ರ ಗಡಿ ದಾಟಿರುವುದು ಇದೇ ಮೊದಲು. ಇದಕ್ಕೂ ಮುನ್ನ ಫೆಬ್ರುವರಿ 10ರಂದು ಮಧ್ಯಂತರ ವಹಿವಾಟಿನಲ್ಲಿ ರೂಪಾಯಿ ಮೌಲ್ಯ ₹87.95ಕ್ಕೆ ಕುಸಿದಿತ್ತು. ಆಗಸ್ಟ್ 5ರಂದು ₹87.88ಕ್ಕೆ ಇಳಿಕೆಯಾಗಿತ್ತು. ಆ ನಂತರ ದಾಖಲಾದ ದಾಖಲೆ ಕುಸಿತ ಇದಾಗಿದೆ. ಶುಕ್ರವಾರ ಒಂದೇ ದಿನದಲ್ಲಿ ರೂಪಾಯಿ ವಿನಿಮಯ ಮೌಲ್ಯ 51 ಪೈಸೆಗಳಷ್ಟು ಇಳಿಕೆ ಕಂಡಿದೆ.
- ಭಾರತದ ಮೇಲೆ ಅಮೆರಿಕದ ಸುಂಕ ಸಮರವೇ ರೂಪಾಯಿ ಮೌಲ್ಯ ಕುಸಿತಕ್ಕೆ ಪ್ರಮುಖ ಕಾರಣ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ. **'ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಷೇರುಗಳ ಮಾರಾಟಕ್ಕೆ ಮುಂದಾಗಿರುವುದರಿಂದ ಡಾಲರ್ ಒಳ ಹರಿವು ಕಡಿಮೆಯಾಗಿದೆ. ಇನ್ನೊಂದೆಡೆ ಮಾಸಾಂತ್ಯದಲ್ಲಿ ಡಾಲರ್ ಬೇಡಿಕೆಯೂ ಹೆಚ್ಚಿದೆ. ಇದರಿಂದ ರೂಪಾಯಿ ಮೇಲೆ ಹೆಚ್ಚಿನ ಒತ್ತಡ ಉಂಟಾಗಿದ್ದು, ವಿನಿಮಯ ಮೌಲ್ಯ ದಾಖಲೆ ಮಟ್ಟದಲ್ಲಿ ಕುಸಿದಿದೆ' ಎಂದು ವಿದೇಶಿ ವಿನಿಮಯ ವ್ಯಾಪಾರಿಗಳು ಅಭಿಪ್ರಾಯಪಟ್ಟಿದ್ದಾರೆ.**

Dr Rajkumar IAS/KAS Academy

## ❖ ಮಕ್ಕಳಿಲ್ಲದ ಶಾಲೆಗಳಲ್ಲಿ 308 ಶಿಕ್ಷಕರು

**ಕೇಂದ್ರ ಶಿಕ್ಷಣ ಸಚಿವಾಲಯದ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ (ಯುಡೈಸ್) ವರದಿ**

# ಮಕ್ಕಳಿಲ್ಲದ ಶಾಲೆಗಳಲ್ಲಿ 308 ಶಿಕ್ಷಕರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದಲ್ಲಿ ವಿದ್ಯಾರ್ಥಿಗಳೇ ಇಲ್ಲದ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ 308ಕ್ಕೆ ಇಳಿದಿದೆ. ಕಳೆದ ಸಾಲಿನಲ್ಲಿ ಇಂತಹ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ 1,572 ಇತ್ತು.

ಕೇಂದ್ರ ಶಿಕ್ಷಣ ಸಚಿವಾಲಯ ಬಿಡುಗಡೆ ಮಾಡಿದ 2024–25ನೇ ಸಾಲಿನ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ (ಯುಡೈಸ್) ವರದಿ ಪ್ರಕಾರ, ವಿದ್ಯಾರ್ಥಿಗಳ ದಾಖಲೆ ಹೆಚ್ಚಿರುವ ಕೆಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದರೂ, ಸರ್ಕಾರ ವಿದ್ಯಾರ್ಥಿಗಳಿಲ್ಲದ ಶಾಲೆಗಳಲ್ಲಿ ಶಿಕ್ಷಕರನ್ನು ಉಳಿಸಿ ಕೊಂಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಂಖ್ಯೆ ಕಡಿಮೆ ಇದೆ. ಶೂನ್ಯ ದಾಖಲೆ ಹೊಂದಿದ್ದ ಶಾಲೆಗಳ ಸಂಖ್ಯೆ 1,078ರಿಂದ 270ಕ್ಕೆ ಇಳಿಕೆಯಾಗಿದೆ.

‘ಯಾವುದೇ ಸರ್ಕಾರಿ ಶಾಲೆಯನ್ನು ಮುಚ್ಚಬಾರದು ಎಂಬ ಸರ್ಕಾರದ ನೀತಿಗೆ ಅನುಗುಣವಾಗಿ ಅಂತಹ ಶಾಲೆಗಳಲ್ಲಿ ಒಬ್ಬ ಶಿಕ್ಷಕರನ್ನು ಉಳಿಸಿಕೊಂಡಿದ್ದೇವೆ. ಶಿಕ್ಷಕರು ಇದ್ದಾರೆ ಎಂಬ ಕಾರಣಕ್ಕೆ ಪೋಷಕರು ಮಕ್ಕಳನ್ನು ಕಳುಹಿಸುವ ಸಾಧ್ಯತೆ ಇರುತ್ತದೆ. ಕೆಲವು ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಗಾಗಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ’ ಎಂದು ವಿದ್ಯಾರ್ಥಿಗಳಿಲ್ಲದ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಿದ ಕ್ರಮವನ್ನು ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ 74,859 ಶಾಲೆಗಳಿದ್ದು, 1,17,80,251 ವಿದ್ಯಾರ್ಥಿಗಳು ಹಾಗೂ 4,52,602 ಶಿಕ್ಷಕರು ಇದ್ದಾರೆ. ಶೇ 69ರಷ್ಟು ಶಿಕ್ಷಕರು ಮಾತ್ರ ತರಬೇತಿ ಪಡೆದಿದ್ದಾರೆ. ಶೇ 63.7ರಷ್ಟು ಶಿಕ್ಷಕರು ವೃತ್ತಿಪರ ಅರ್ಹತೆ ಹೊಂದಿದ್ದಾರೆ. 2.23 ಲಕ್ಷ ವಿದ್ಯಾರ್ಥಿಗಳಿರುವ 7,349 ಏಕ ಶಿಕ್ಷಕರ ಶಾಲೆಗಳಿವೆ. ಕಳೆದ ವರ್ಷ 2,74,814 ವಿದ್ಯಾರ್ಥಿಗಳಿದ್ದ 7,821 ಏಕಶಿಕ್ಷಕರ ಶಾಲೆಗಳಿದ್ದವು.

### ಬಲಿಷ್ಠ ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಹಂತದಲ್ಲಿ ಶಾಲೆ ಬಿಟ್ಟು ಹೋಗುವವರ ಪ್ರಮಾಣ ಶೂನ್ಯಕ್ಕೆ ಇಳಿದಿದೆ. ಕಳೆದ ವರ್ಷ ಈ ಪ್ರಮಾಣ ಶೇ 2 ಇತ್ತು. ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ದೆಹಲಿ, ಉತ್ತರಪ್ರದೇಶಗಳಿಗೆ ಹೋಲಿಸಿದರೆ ಕರ್ನಾಟಕವು ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಉನ್ನತ ಸ್ಥಾನದಲ್ಲಿದೆ.

ಮಾಧ್ಯಮಿಕ ಹಂತದಲ್ಲಿ (9 ಮತ್ತು 10ನೇ ತರಗತಿ) ಶಾಲೆ ತೊರೆಯುವವರ ಸಂಖ್ಯೆ ಶೇ 18.30ರಷ್ಟಿದ್ದು, ರಾಜ್ಯದ ಮಾಧ್ಯಮಿಕ ಶಿಕ್ಷಣ ಬಲಗೊಳ್ಳುವ ಅಗತ್ಯವಿದೆ ಎಂದು ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ.

### ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣ

| ಶೇ 8.1 | ಶೇ 11.7 | ಶೇ 6 |
|---|---|---|
| ಶಾಲೆಗಳಲ್ಲಿ 10ಕ್ಕಿಂತ ಕಡಿಮೆ | ಶಾಲೆಗಳಲ್ಲಿ 11ರಿಂದ 20 | ಶಾಲೆಗಳಲ್ಲಿ 500ಕ್ಕೂ ಹೆಚ್ಚು |


### ಅಂಕಿ ಅಂಶ

**74,859** ಒಟ್ಟು ಶಾಲೆಗಳು


**64,183** ಕ್ರೀಡಾಂಗಣವಿರುವ ಶಾಲೆಗಳು

**41,662** ಕಂಪ್ಯೂಟರ್ ಸೌಲಭ್ಯ

**37,921** ಇಂಟರ್ನೆಟ್ ಸೌಲಭ್ಯ

## ❖ ರಿಜಿಸ್ಟರ್ಡ್ ಪೋಸ್ಟ್ ನೇಪಥ್ಯಕ್ಕೆ




## ❖ ಸಿಗಡಿ ರಫ್ತು ಶೇ 18ರಷ್ಟು ಇಳಿಕೆ ನಿರೀಕ್ಷೆ: ಕ್ರಿಸಿಲ್

**<u>ಸಂದರ್ಭ:</u>** ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸಿಗಡಿ ರಫ್ತು ಶೇ 15ರಿಂದ ಶೇ 18ರಷ್ಟು ಇಳಿಕೆಯಾಗ ಬಹುದು ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಅಂದಾಜಿಸಿದೆ.

- ಅಮೆರಿಕವು, ಭಾರತದ ಸಿಗಡಿ ಮೇಲೆ ಆಗಸ್ಟ್ 27ರಿಂದ ವಿಧಿಸುತ್ತಿರುವ ಶೇ 58.26ರಷ್ಟು ಸುಂಕವೇ ರಫ್ತು ಇಳಿಕೆಗೆ ಕಾರಣ ಎಂದು ಹೇಳಿದೆ. ಈ ಸುಂಕದಿಂದ ದೇಶದ ರಫ್ತುದಾರರು ಆರ್ಥಿಕ ನಷ್ಟಕ್ಕೆ ಒಳಗಾಗಲಿದ್ದಾರೆ ಎಂದು ಹೇಳಿದೆ.
- **ಕಳೆದ ಆರ್ಥಿಕ ವರ್ಷದಲ್ಲಿ ₹44,108 ಕೋಟಿ ಮೌಲ್ಯದ ಸಿಗಡಿ ರಫ್ತಾಗಿದ್ದವು. ಈ ಪೈಕಿ ಅಮೆರಿಕ ಶೇ 48ರಷ್ಟು ಪಾಲನ್ನು ಹೊಂದಿತ್ತು. ಈಕ್ವೆಡಾರ್, ವಿಯೆಟ್ನಾಂ, ಇಂಡೊನೇಷ್ಯಾ ಮತ್ತು ಥಾಯ್ಲೆಂಡ್‌ನಲ್ಲಿ ಭಾರತಕ್ಕೆ ಹೋಲಿಸಿದರೆ ಸುಂಕ ಕಡಿಮೆ ಇದೆ.** ಇದರ ಪರಿಣಾಮವಾಗಿ, ಅಮೆರಿಕಕ್ಕೆ ಭಾರತದ ಸಿಗಡಿ ರಫ್ತು ಪ್ರಮಾಣ ಕುಸಿಯಲಿದೆ ಎಂದು ಹೇಳಿದೆ.

## ❖ ಅಮೆರಿಕದಿಂದ 50 ಲಕ್ಷ ಬ್ಯಾರೆಲ್ ತೈಲ ಖರೀದಿಸಿದ ಇಂಡಿಯನ್ ಆಯಿಲ್

**ಸಂದರ್ಭ:** ದೇಶದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) 50 ಲಕ್ಷ ಬ್ಯಾರೆಲ್‌ನಷ್ಟು ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮಿಡಿಯೇಟ್ (ಡಬ್ಲ್ಯುಟಿಐ) ದರ್ಜೆಯ ಕಚ್ಚಾ ತೈಲವನ್ನು ಖರೀದಿಸಿದೆ ಎಂದು ಮೂಲಗಳು ತಿಳಿಸಿವೆ.

- ಈ ತೈಲವು ಕಂಪನಿಗೆ ಅಕ್ಟೋಬರ್ ಮತ್ತು ನವೆಂಬರ್‌ಗೆ ವಿತರಣೆಯಾಗಲಿದೆ ಎಂದು ತಿಳಿಸಿವೆ.
- ಸ್ಪರ್ಧಾತ್ಮಕ ದರದಿಂದಾಗಿ ಭಾರತೀಯ ತೈಲ ಸಂಸ್ಕರಣಾ ಗಾರರು ಈ ತಿಂಗಳು ಅಮೆರಿಕದಿಂದ ಕಚ್ಚಾ ತೈಲ ಖರೀದಿಯನ್ನು ಹೆಚ್ಚಿಸಿದ್ದಾರೆ. ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ಬಿಕ್ಕಟ್ಟಿನ ನಡುವೆಯೇ ತೈಲ ಖರೀದಿಸಿರುವುದು ದೇಶದ ವ್ಯಾಪಾರ ಕೊರತೆಯನ್ನು ತಗ್ಗಿಸಲು ಸಹಾಯ ಮಾಡಲಿದೆ ಎಂದು ಹೇಳಿವೆ.
- ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ತಲಾ 20 ಲಕ್ಷ ಬ್ಯಾರೆಲ್ ಡಬ್ಲ್ಯುಟಿಐ ಕಚ್ಚಾ ತೈಲವನ್ನು ಖರೀದಿಸಿವೆ.
- ಏಷ್ಯಾದ ಇತರ ರಾಷ್ಟ್ರಗಳ ಜೊತೆಗೂ ಭಾರತ ತೈಲ ಖರೀದಿಯನ್ನು ಹೆಚ್ಚಿಸಿಕೊಂಡಿವೆ. ಯುರೋಪ್‌ನ ಗನ್ವೋರ್ ಮತ್ತು ಈಕ್ವಿನಾರ್ ತಲಾ 20 ಲಕ್ಷ ಬ್ಯಾರೆಲ್ ಮತ್ತು ಮರ್ಕ್ಯುರಿಯಾ 10 ಲಕ್ಷ ಬ್ಯಾರೆಲ್ ತೈಲವನ್ನು ಐಒಸಿಗೆ ಮಾರಾಟ ಮಾಡಿವೆ. ಬಿಪಿಸಿಎಲ್ ನೈಜೀರಿಯಾದಿಂದ ತೈಲ ಖರೀದಿಸಿದೆ.
- ಅಮೆರಿಕವು ಸುಂಕವನ್ನು ಶೇ 50ರಷ್ಟು ಹೆಚ್ಚಿಸಿದ ಬಳಿಕ ಭಾರತವು ಅಮೆರಿಕದಿಂದ ಹೆಚ್ಚಿನ ತೈಲವನ್ನು ಖರೀದಿಸುವ ಒತ್ತಡದಲ್ಲಿದೆ ಎಂದು ತಿಳಿಸಿವೆ.

## ❖ ವಿತ್ತೀಯ ಕೊರತೆ ಹೆಚ್ಚಳ

**ಸಂದರ್ಭ:** ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್-ಜುಲೈ ಅವಧಿಯಲ್ಲಿ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 29.9ರಷ್ಟಾಗಿದೆ.

- ಮೌಲ್ಯದ ಲೆಕ್ಕದಲ್ಲಿ ಇದು ₹4.68 ಲಕ್ಷ ಕೋಟಿಯಾಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರ ವರದಿ ತಿಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 17.2ರಷ್ಟು ದಾಖಲಾಗಿತ್ತು.
- 2025–26ರಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.4ಕ್ಕೆ ತಗ್ಗಿಸಲು ಸರ್ಕಾರ ಗುರಿ ನಿಗದಿಪಡಿಸಲಾಗಿದೆ.
- ಜುಲೈವರೆಗೆ ಸರ್ಕಾರಕ್ಕೆ ₹10.95 ಲಕ್ಷ ಕೋಟಿ ತೆರಿಗೆ ಮೂಲಕ ಸಂಗ್ರಹವಾಗಿದೆ. ಇದು ಬಜೆಟ್ ಅಂದಾಜಿನ ಶೇ 31ರಷ್ಟಾಗಿದೆ. ₹4.28 ಲಕ್ಷ ಕೋಟಿಯನ್ನು ರಾಜ್ಯಗಳಿಗೆ ತೆರಿಗೆ ಪಾಲಾಗಿ ವರ್ಗಾಯಿಸಿದೆ. ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹15.63 ಲಕ್ಷ ಕೋಟಿಯಾಗಿದೆ. ಬಡ್ಡಿಗೆ ₹4.46 ಲಕ್ಷ ಕೋಟಿ ಪಾವತಿಸಲಾಗಿದ್ದು, ₹1.13 ಲಕ್ಷ ಕೋಟಿ ಸಬ್ಸಿಡಿಗಳಿಗೆ ನೀಡಲಾಗಿದೆ ಎಂದು ತಿಳಿಸಿದೆ.

## ❖ ಪ್ರಧಾನಿ ಸ್ಥಾನದಿಂದ ಶಿನೊವಾತ್ರಾ ವಜಾ

**ಸಂದರ್ಭ:** ಥಾಯ್ಲೆಂಡ್‌ನ ಸಾಂವಿಧಾನಿಕ ನ್ಯಾಯಾಲಯವು ಪೆಟೊಂತಾರ್ನ್ ಶಿನೊವಾತ್ರಾ ಅವರನ್ನು ಪ್ರಧಾನಮಂತ್ರಿ ಸ್ಥಾನದಿಂದ ವಜಾಗೊಳಿಸಿದೆ.

- ಕಾಂಬೋಡಿಯಾ ಸೆನೆಟ್‌ನ ಅಧ್ಯಕ್ಷರಾಗಿರುವ ಹುನ್ ಸೆನ್ ಅವರೊಂದಿಗಿನ ದೂರವಾಣಿ ಸಂಭಾಷಣೆ ವೇಳೆ ಶಿನೊವಾತ್ರಾ ಅವರು ದೇಶದ ಸಾಂವಿಧಾನಿಕ ನಿಯಮ, ನಿಬಂಧನೆಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ ಎಂದೂ ನ್ಯಾಯಾಲಯ ಹೇಳಿದೆ. ಈ ಮೂಲಕ ವರ್ಷದ ಹಿಂದಷ್ಟೇ ಪ್ರಧಾನಿ ಹುದ್ದೆಗೇರಿದ್ದ ಪೆಟೊಂತಾರ್ನ್ ಶಿನೊವಾತ್ರಾ ಅವರು ಅಧಿಕಾರವಧಿ ಪೂರ್ಣವಾಗುವ ಮೊದಲೇ ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿದಂತಾಗಿದೆ.

Dr. Rajkumar IAS/KAS Academy

- ಹುನ್ ಸೆನ್ ಜತೆಗಿನ ಶಿನೊವಾತ್ರಾ ಅವರ ದೂರವಾಣಿ ಸಂಭಾಷಣೆ ಸೋರಿಕೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಜುಲೈ 1ರಂದು ನ್ಯಾಯಾಲಯ ಸಮ್ಮತಿಸಿತ್ತು. ಅಂದೇ ಶಿನೊವಾತ್ರಾ ಅವರನ್ನು ಅಮಾನತುಗೊಳಿಸಿ, ಉಪ ಪ್ರಧಾನಿ ಫುಮ್ತಾಮ್ ಅವರಿಗೆ ಹಂಗಾಮಿ ಅಧಿಕಾರ ನೀಡಲಾಗಿತ್ತು.
- ಇದೀಗ ಪ್ರಧಾನಿ ಸ್ಥಾನದಿಂದ ಶಿನೊವಾತ್ರಾ ಕೆಳಗಿಳಿದರೂ ಹೊಸ ಪ್ರಧಾನಿ ಆಯ್ಕೆಗೆ ಸಂಸತ್ತು ಒಪ್ಪಿಗೆ ನೀಡುವವರೆಗೆ ಫುಮ್ತಾಮ್ ನೇತೃತ್ವದ ಸಂಪುಟವು ಹಂಗಾಮಿ ಸರ್ಕಾರವಾಗಿ ಅಧಿಕಾರದಲ್ಲಿ ಇರುವ ನಿರೀಕ್ಷೆ ಇದೆ. ಇದೇ ಸಂಪುಟವು ಸಂಸತ್ತನ್ನು ವಿಸರ್ಜಿಸಿ ಹೊಸದಾಗಿ ಚುನಾವಣೆ ನಡೆಸಲು ಅವಕಾಶವನ್ನೂ ನೀಡಬಹುದಾಗಿದೆ.
- ಹುನ್ ಸೆನ್ ಅವರೊಂದಿಗೆ ದೂರವಾಣಿ ಸಂಭಾಷಣೆಯಲ್ಲಿ ಪೆಟೊಂತಾರ್ನ್ ಶಿನೊವಾತ್ರಾ ಬಹಳ ಆತ್ಮೀಯವಾಗಿ ಮಾತನಾಡಿದ್ದರು. ಅಲ್ಲದೇ, ಅವರೊಂದಿಗೆ ರಾಷ್ಟ್ರೀಯ ಭದ್ರತೆ ಕುರಿತಾದ ವಿಚಾರಗಳನ್ನು ಚರ್ಚಿಸುವುದು ಮಾತ್ರವಲ್ಲದೆ ಥಾಯ್ಲೆಂಡ್‌ನ ಸೇನಾ ಜನರಲ್ ಬಗೆಗಿನ ಅಸಮಾಧಾನದ ಬಗ್ಗೆಯೂ ಹೇಳಿಕೊಂಡಿದ್ದರು. ಈ ಸಂಭಾಷಣೆಯ ಆಡಿಯೊ ಸೋರಿಕೆಯಾಗುತ್ತಿದ್ದಂತೆಯೇ ಪೆಟೊಂತಾರ್ನ್ ಶಿನೊವಾತ್ರಾ ಅವರ ರಾಜೀನಾಮೆಗೂ ಒತ್ತಡ ಹೆಚ್ಚಾಗಿತ್ತು.

## ❖ ಶಾಂಘೈ ಶೃಂಗ: ಮೋದಿ-ಷಿ ಸಭೆ ಸಾಧ್ಯತೆ

**ಸಂದರ್ಭ:** ಟಿಯಾನ್ ಜಿನ್‌ನಲ್ಲಿ ಆರಂಭವಾಗಲಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆ ವೇಳೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾದ ಅಧ್ಯಕ್ಷ ಷಿ-ಜಿನ್‌ಪಿಂಗ್ ಅವರು ಎರಡು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆ ಇದೆ.

- ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರಗಳಿಂದಾಗಿ ಜಾಗತಿಕ ವ್ಯಾಪಾರ ವ್ಯವಸ್ಥೆಯಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಭಾರತ ಮತ್ತು ಚೀನಾ ನಡುವಿನ ಸಂಬಂಧವನ್ನು ವೃದ್ಧಿಸಿ ಕೊಳ್ಳಲು ಉಭಯ ರಾಷ್ಟ್ರಗಳು ಯೋಜಿಸಿರುವಂತೆಯೇ ಈ ಬೆಳವಣಿಗೆ ಮಹತ್ವ ಪಡೆದಿದೆ.
- ಜಪಾನ್‌ನಿಂದ ಟಿಯಾನ್ ಜಿನ್‌ಗೆ ಶನಿವಾರ ಆಗಮಿಸಲಿರುವ ಪ್ರಧಾನಿ ಮೋದಿ ಅವರು ಚೀನಾ ಅಧ್ಯಕ್ಷರೊಂದಿಗೆ ಭಾನುವಾರ ಮಧ್ಯಾಹ್ನ ಮೊದಲ ಸಭೆ ನಡೆಸಲಿದ್ದಾರೆ. ಶಾಂಘೈ ಶೃಂಗದ ಔತಣಕೂಟದ ಕಾರ್ಯಕ್ರಮಕ್ಕೂ ಮುನ್ನ ಮತ್ತೊಂದು ಸುತ್ತಿನ ಸಭೆ ನಡೆಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.
- ಶೃಂಗದಲ್ಲಿ ಪಾಲ್ಗೊಳ್ಳುವ ಮೋದಿ, ಬಳಿಕ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೂ ದ್ವಿಪಕ್ಷೀಯ ಸಭೆ ನಡೆಸುವ ಸಾಧ್ಯತೆಗಳಿವೆ ಎನ್ನಲಾಗಿದೆ.

## ❖ ಜಪಾನ್: ₹60 ಸಾವಿರ ಕೋಟಿ ಹೂಡಿಕೆ

**ಸಂದರ್ಭ:** ವ್ಯಾಪಾರ, ಹೂಡಿಕೆ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ವಿಸ್ತರಿಸುವುದರ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿ ನಡೆದ 15ನೇ ಭಾರತ-ಜಪಾನ್ ಶೃಂಗಸಭೆಯಲ್ಲಿ ಜಪಾನ್ ಪ್ರಧಾನಿ ಶಿಗೆರು ಇಶಿಬಾ ಅವರೊಂದಿಗೆ ಮಾತುಕತೆ ನಡೆಸಿದರು.

- ಭಾರತದಲ್ಲಿ ಮುಂದಿನ 10 ವರ್ಷಗಳಲ್ಲಿ ಅಂದಾಜು ₹60 ಸಾವಿರ ಕೋಟಿಯಷ್ಟು ಹೂಡಿಕೆ ಗುರಿಯನ್ನು ಜಪಾನ್ ನಿಗದಿಪಡಿಸಿದೆ.
- ಸೆಮಿಕಂಡಕ್ಟರ್, ಶುದ್ಧ ಇಂಧನ, ದೂರಸಂಪರ್ಕ, ಔಷಧ, ಖನಿಜಗಳು, ತಂತ್ರಜ್ಞಾನ ಕ್ಷೇತ್ರ ಸೇರಿ ಉಭಯ ದೇಶಗಳ ನಡುವೆ 13 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು.
- ಶೃಂಗಸಭೆಗೂ ಮುನ್ನ ಭಾರತ-ಜಪಾನ್ ಉದ್ಯಮ ವೇದಿಕೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ‘ಸ್ಥಿರತೆ, ಪ್ರಗತಿ ಮತ್ತು ಸಮೃದ್ಧಿಯಲ್ಲಿ ಭಾರತ ಮತ್ತು ಜಪಾನ್ ಜತೆಯಾಗಿ ಕೈಜೋಡಿಸಿ ಏಷ್ಯಾದ ಶತಮಾನವನ್ನು (21ನೇ ಶತಮಾನ) ರೂಪಿಸುತ್ತೇವೆ’ ಎಂದರು.

- ‘ಭಾರತದ ಪ್ರಗತಿಯ ಹಾದಿಯಲ್ಲಿ, ಜಪಾನ್ ಯಾವತ್ತಿಗೂ ಮಹತ್ವದ ಪಾಲುದಾರ ದೇಶ’ ಎಂದು ಸ್ಮರಿಸಿದ ಪ್ರಧಾನಿ, ಜಪಾನ್‌ನ ಉದ್ಯಮಿಗಳ ಪಾಲಿಗೆ ಭಾರತವು ‘ಚಿಮ್ಮುಹಲಗೆ’ ಎಂದು ಬಣ್ಣಿಸಿದರು.
- ಭಾರತದಲ್ಲಿ ತೊಡಗಿಸುವ ಬಂಡವಾಳವು ಬೆಳೆಯುವುದು ಮಾತ್ರವಲ್ಲ, ದ್ವಿಗುಣಗೊಳ್ಳುತ್ತದೆ. ಜಪಾನ್‌ನ ತಂತ್ರಜ್ಞಾನ ಮತ್ತು ಭಾರತದ ಸಾಮರ್ಥ್ಯವು ಒಂದುಗೂಡಿದಾಗ ಈ ಶತಮಾನದ ತಾಂತ್ರಿಕ ಕ್ರಾಂತಿ ಸಂಭವಿಸುತ್ತದೆ’ ಎಂದು ಪ್ರಧಾನಿ ಹೇಳಿದರು.
- ಪಹಲ್ಗಾಮ್ ಘಟನೆಗೆ ಖಂಡನೆ: ಪಹಲ್ಗಾಮ್ ದಾಳಿಯ ಹಿಂದಿನ ಅಪರಾಧಿಗಳು, ಸೂತ್ರಧಾರಿಗಳು ಮತ್ತು ಹಣಕಾಸು ಒದಗಿಸುವವರನ್ನು ಶಿಕ್ಷೆಗೆ ಗುರಿಪಡಿಸಲು ವಿಳಂಬ ಮಾಡಲೇಬಾರದು ಎಂದು ಭಾರತ ಮತ್ತು ಜಪಾನ್ ಒತ್ತಾಯಿಸಿವೆ. ಉಭಯ ದೇಶಗಳ ಪ್ರಧಾನಿಗಳು ಪಹಲ್ಗಾಮ್ ಘಟನೆ ಖಂಡಿಸಿದ್ದಾರೆ.

**ಚಂದ್ರಯಾನ –5ಕ್ಕೆ ಜಂಟಿ ಒಪ್ಪಂದ**

- ಚಂದ್ರಯಾನ –5 ಯೋಜನೆಗೆ ಭಾರತ ಮತ್ತು ಜಪಾನ್ ಶುಕ್ರವಾರ ಸಹಿ ಹಾಕಿದೆ. ಈ ಯೋಜನೆಯಡಿ ಉಭಯ ದೇಶಗಳ ಬಾಹ್ಯಾಕಾಶ ಸಂಸ್ಥೆಗಳು ಜಂಟಿಯಾಗಿ ಚಂದ್ರನ ಧ್ರುವಪ್ರದೇಶದ ಅಧ್ಯಯನ ನಡೆಸಲಿವೆ.
- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮತ್ತು ಜಪಾನ್‌ನ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಜಕ್ಸಾ ನಡುವೆ ಈ ಸಂಶೋಧನೆಗೆ ಸಂಬಂಧಿಸಿದಂತೆ ಒಡಂಬಡಿಕೆಗೆ ಸಹಿ ಹಾಕಲಾಯಿತು.
- ಚಂದ್ರನ ದಕ್ಷಿಣ ಧ್ರುವದಲ್ಲಿನ ನೆರಳಿನ ಪ್ರದೇಶ (ಪಿಎಸ್‌ಆರ್) ಮತ್ತು ಚಂದ್ರನ ಮೇಲ್ಮೈನಲ್ಲಿರುವ ನೀರಿನ ಕುರಿತ ಸಂಶೋಧನೆಯನ್ನು ಮುಖ್ಯವಾಗಿ ಚಂದ್ರಯಾನ- 5 ಯೋಜನೆ ಹೊಂದಿದೆ.

## ❖ ‘ವಕೀಲೆಯರಿಗೂ ಪೋಷ್ ಅನ್ವಯ’

**<u>ಸಂದರ್ಭ:</u>** ವಕೀಲರ ಸಂಘಗಳಲ್ಲಿ ನೋಂದಣಿಯಾಗಿರುವ ವಕೀಲೆಯರಿಗೂ ‘ಉದ್ಯೋಗd ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆ, ನಿರ್ಬಂಧ ಮತ್ತು ಪರಿಹಾರ) ಕಾಯ್ದೆ (ಪೋಷ್ ಕಾಯ್ದೆ- 2013) ಅನ್ವಯಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ.

- ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರು ಅರ್ಜಿಯ ವಿಚಾರಣೆ ನಡೆಸಿದರು. ಅರ್ಜಿಯ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ವಕೀಲರ ಪರಿಷತ್ತಿಗೆ ನೋಟಿಸ್ ಜಾರಿಗೆ ಆದೇಶಿಸಿದರು. ವಕೀಲೆ ಮತ್ತು ಲೇಖಕಿ ಸೀಮಾ ಜೋಶಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.
- ‘ವಕೀಲೆಯರ ದೂರುಗಳ ಕುರಿತು ವಿಚಾರಣೆ ನಡೆಸಲು ಆಂತರಿಕ ದೂರು ಸಮಿತಿಗಳನ್ನು ರಚಿಸುವಂತೆ ನಿರ್ದೇಶನ ನೀಡಬೇಕು. ವಕೀಲರ ಸಂಘಗಳಿಗೆ ಪೋಷ್ ಕಾಯ್ದೆ ಅನ್ವಯಿಸುವ ಬಗ್ಗೆ ಕಾಯ್ದೆಯಲ್ಲಿ ಸ್ಪಷ್ಟತೆ ಇಲ್ಲ. ಆದ್ದರಿಂದ, ಭಾರತದ ವಕೀಲೆಯರಿಗೆ ಸುರಕ್ಷತೆ ಇಲ್ಲದಂತಾಗಿದೆ’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

------------------------------------------ಶುಭವಂದನೆಗಳು------------------------------------------

Dr Rajkumar's IAS Academy